ಸೋಮವಾರ, ಫೆಬ್ರುವರಿ 14, 2022 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಾಲಭವನ ಆವರಣದಲ್ಲಿ ನಿರ್ಮಾಣ • ಮೈಂಡ್ ಟ್ರೀ ಫೌಂಡೇಷನ್ ನೆರವು

ಅಂಗವಿಕಲ ಚಿಣ್ಣರಿಗಾಗಿ ‘ವಿಶೇಷ’ ಉದ್ಯಾನ

• ಮನೋಹರ್ ಎಂ.

ಬೆಂಗಳೂರು: ಅಂಗವಿಕಲ ಮಕ್ಕಳು ಆಟವಾಡಿ ನಲಿಯಲು ಹಾಗೂ ಮನರಂಜನೆ ಚಟುವಟಿಕೆಗಳಲ್ಲಿ ತೊಡಗಲು ಕಬ್ಬನ್ ಉದ್ಯಾನದ ಬಾಲಭವನ ಆವರಣದಲ್ಲಿ ‘ವಿಶೇಷ ಮಕ್ಕಳ ಉದ್ಯಾನ’ವನ್ನು ನಿರ್ಮಿಸಲಾಗುತ್ತಿದೆ.

ಸಾಮಾನ್ಯ ಮಕ್ಕಳಂತೆ ವಿಶೇಷ ಮಕ್ಕಳೂ ಆಟೋಟ ಚಟುವಟಿಕೆಯಲ್ಲಿ ತೊಡಗಬೇಕು ಎನ್ನುವ ಉದ್ದೇಶದಿಂದ ವಿಶೇಷ ವಿನ್ಯಾಸದಲ್ಲಿ ನಿರ್ಮಾಣ ಮಾಡುತ್ತಿರುವ ಉದ್ಯಾನವಿದು. ಅಂಗವಿಕಲರಿಗಾಗಿಯೇ ನಿರ್ಮಾಣಗೊಳ್ಳುತ್ತಿರುವ ರಾಜ್ಯದ ಮೊದಲ ಉದ್ಯಾನ ಎಂಬ ಹೆಗ್ಗಳಿಕೆ ಇದರದು.

‘ಮೈಂಡ್ ಟ್ರೀ ಫೌಂಡೇಷನ್’ ಸಂಸ್ಥೆಯು ಈ ವಿಶೇಷ ಉದ್ಯಾನವನ್ನು ನಿರ್ಮಿಸಿ ಜವಾಹರ ಬಾಲಭವನ ಸೊಸೈಟಿಗೆ ಹಸ್ತಾಂತರಿಸುತ್ತಿದೆ. ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಡಿ ಉದ್ಯಾನವನ್ನು ನಿರ್ಮಿಸುತ್ತಿದೆ. ನಿರ್ಮಾಣ ಕಾರ್ಯ ಚುರುಕಿನಿಂದ ಸಾಗಿದ್ದು, 2022ರ ಮಾರ್ಚ್ ಒಳಗಾಗಿ ಲೋಕಾರ್ಪಣೆಗೊಳ್ಳುವ ನಿರೀಕ್ಷೆ ಇದೆ.

‘ಇದು ವಿಶೇಷ ಮಕ್ಕಳ ಸ್ನೇಹಿ ಉದ್ಯಾನ. ಅಂಗವಿಕಲ ಮಕ್ಕಳಿಗೆ ಮನರಂಜನೆ ನೀಡುವುದು ಹಾಗೂ ಇತರ ಮಕ್ಕಳಂತೆಯೇ ಆಡಲು ಅವರಿಗೂ ಸಮಾನ ಅವಕಾಶ ಒದಗಿಸುವುದು ಇದರ ಉದ್ದೇಶ. ಇಲ್ಲಿ ಅವರಿಗಾಗಿ ವಿಶೇಷ ಶೈಲಿಯ ಆಟಿಕೆಗಳನ್ನು ಅಳವಡಿಸಲಾಗುತ್ತಿದೆ. ಗಾಲಿ ಕುರ್ಚಿಯಲ್ಲಿ ಬರುವ ಮಕ್ಕಳು ಕೂಡಾ ಕುರ್ಚಿಯಲ್ಲಿ ಕುಳಿತುಕೊಂಡೇ ಆಟವಾಡಬಹುದು’ ಎಂದು ಜವಾಹರ ಬಾಲಭವನ ಸೊಸೈಟಿಯ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸುಮಾರು 15 ಬಗೆಯ ಆಟಿಕೆಗಳು ಉದ್ಯಾನದಲ್ಲಿ ಇರಲಿವೆ. ಅಂಗವಿಕಲ ಮಕ್ಕಳು ಪೋಷಕರೊಂದಿಗೆ ಬಂದು ಉದ್ಯಾನದಲ್ಲಿ ಆಟವಾಡಬಹುದು. ಒಂದು ವೇಳೆ ಮಕ್ಕಳು ನೆಲಕ್ಕೆ ಬಿದ್ದರೂ ಯಾವುದೇ ಗಾಯವಾಗದಂತೆ ತಡೆಯಲು ಮೃದುವಾದ ನೆಲಹಾಸನ್ನು ವಿನ್ಯಾಸ ಮಾಡಲಾಗಿದೆ’ ಎಂದರು.

‘ವಿಶೇಷ ಮಕ್ಕಳು ಉದ್ಯಾನಕ್ಕೆ ಬಂದು ನಕ್ಕು ನಲಿಯಬಹುದು. ಕೂರಲು ಬಣ್ಣ ಬಣ್ಣದ ಆಸನಗಳ ವ್ಯವಸ್ಥೆ, ಆಟದ ಪರಿಕರಗಳು, ಅಲಂಕಾರಿಕ ಸಸ್ಯಗಳು, ಕಿರು ಸುರಂಗ ಸೇರಿದಂತೆ ರಂಗಿನ ಲೋಕವೇ ಅವರಿಗಾಗಿ ಸೃಷ್ಟಿಯಾಗುತ್ತಿದೆ. ಉದ್ಯಾನಕ್ಕೆ ಬರುವ ವಿಶೇಷ ಮಕ್ಕಳು ಇಲ್ಲಿ ಖುಷಿ ಪಡುವುದರಲ್ಲಿ ಅನುಮಾನವಿಲ್ಲ’ ಎಂದು ಹೇಳಿದರು.

ಬಾಲಭವನದಲ್ಲಿ ವಿಶೇಷ ಮಕ್ಕಳ ಉದ್ಯಾನದಲ್ಲಿ ಅಲಂಕಾರಿಕ ಸಸಿಗಳನ್ನು ಅಣಿಗೊಳಿಸುತ್ತಿರುವ ಕೆಲಸಗಾರರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ವಿಶೇಷ ಮಕ್ಕಳ ಉದ್ಯಾನ ಬಾಲಭವನದ ಮೆರುಗು ಹೆಚ್ಚಿಸಲಿದೆ. ಅಂಗವಿಕಲ ಮಕ್ಕಳು ಇಲ್ಲಿ ಸುಲಭವಾಗಿ ಆಟಗಳಲ್ಲಿ ತೊಡಗಬಹುದು

ಚಿಕ್ಕಮ್ಮ ಬಸವರಾಜ್
ಜವಾಹರ ಬಾಲಭವನ ಸೊಸೈಟಿಯ ಅಧ್ಯಕ್ಷೆ

‘ವಿಶೇಷ ಮಕ್ಕಳಿಗೆ ಉದ್ಯಾನಗಳ ಕೊರತೆ’

‘ವಿದೇಶಗಳಲ್ಲಿ ವಿಶೇಷ ಮಕ್ಕಳಿಗಾಗಿ ಪ್ರತ್ಯೇಕ ಉದ್ಯಾನಗಳನ್ನು ನಿರ್ಮಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಮಾನ್ಯ ಮಕ್ಕಳು ಆಟವಾಡಲು ಹಲವಾರು ಉದ್ಯಾನಗಳು ಮತ್ತು ಸ್ಥಳಗಳು ಲಭ್ಯ. ಆದರೆ ವಿಶೇಷ ಮಕ್ಕಳಿಗೆ ಅಂತಹ ಸೌಕರ್ಯಗಳಿಲ್ಲ. ವರದಿಯೊಂದರ ಪ್ರಕಾರ ಬೆಂಗಳೂರಿನಲ್ಲಿ 2 ಲಕ್ಷದಷ್ಟು ವಿಶೇಷ ಮಕ್ಕಳಿದ್ದಾರೆ. ಇದನ್ನು ಮನಗಂಡು ಅಂಗವಿಕಲರ ಉದ್ಯಾನ ನಿರ್ಮಿಸಲು ನಿರ್ಧರಿಸಲಾಯಿತು. ಬಹುಶಃ ದೇಶದಲ್ಲಿ ವಿಶೇಷ ಮಕ್ಕಳಿಗಾಗಿಯೇ ಸಜ್ಜುಗೊಳಿಸಲಾದ ಮೊದಲ ಉದ್ಯಾನವಿದು’ ಎಂದು ಮೈಂಡ್ ಟ್ರೀ ಫೌಂಡೇಷನ್ ಮುಖ್ಯಸ್ಥ ಅಬ್ರಾಹಂ ಮೋಸಸ್ ಹೇಳಿದರು.

‘ನಡೆಯಲು ಸಾಧ್ಯವಾಗದವರು, ಅಂಧರು ಸೇರಿದಂತೆ ಎಲ್ಲ ರೀತಿಯ ಅಂಗವೈಕಲ್ಯ ಹೊಂದಿರುವ ಮಕ್ಕಳಿಗೆ ಅನುಕೂಲವಾಗುವ ಆಟದ ಸೌಕರ್ಯಗಳನ್ನು ಉದ್ಯಾನದಲ್ಲಿ ಕಲ್ಪಿಸಲಾಗುತ್ತಿದೆ. ಆಟವಾಡಲು ಉಯ್ಯಾಲೆಗಳೂ ಇರಲಿವೆ. ವಿಶೇಷ ಮಕ್ಕಳನ್ನು ಹೊರಗಡೆ ಕರೆದುಕೊಂಡು ಹೋಗಿ ಆಟವಾಡಿಸಬೇಕು ಎಂದು ಪೋಷಕರಿಗೂ ಮಹದಾಸೆ ಇರುತ್ತದೆ. ಆದರೆ, ಎಲ್ಲಿಗೆ ಕರೆದೊಯ್ಯುವುದು ಎಂಬ ಚಿಂತೆಯಲ್ಲಿದ್ದವರಿಗೆ ಈ ಉದ್ಯಾನ ಸೂಕ್ತ ಸ್ಥಳವಾಗಲಿದೆ. ಮಕ್ಕಳೊಂದಿಗೆ ಪೋಷಕರೂ ಬಂದು ಉದ್ಯಾನದ ಸೊಬಗು ಸವಿಯಬಹುದು’ ಎಂದರು.

ವಿಶೇಷ ಮಕ್ಕಳ ಉದ್ಯಾನದ ವಿನ್ಯಾಸ

ಪ್ರಜಾವಾಣಿ ವಿಶೇಷ

ಅಂಕಿ-ಅಂಶಗಳು

1 ಎಕರೆ
ವಿಶೇಷ ಮಕ್ಕಳ ಉದ್ಯಾನದ ವಿಸ್ತೀರ್ಣ

₹3 ಕೋಟಿ
ಉದ್ಯಾನದ ನಿರ್ಮಾಣದ ಅಂದಾಜು ವೆಚ್ಚ

ಮೇಲ್ಸೇತುವೆ: ಗುತ್ತಿಗೆದಾರರ ನಿರಾಸಕ್ತಿ

ಬೆಂಗಳೂರು: ನಗರದ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಬಸವೇಶ್ವರನಗರದ ಮುಖ್ಯರಸ್ತೆ ಕೂಡುವ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಯಾವುದೇ ಗುತ್ತಿಗೆದಾರರು ಆಸಕ್ತಿ ತೋರಿಲ್ಲ.

ಬಿಬಿಎಂಪಿಯು ₹ 15.20 ಕೋಟಿ ವೆಚ್ಚದ ಈ ಕಾಮಗಾರಿಗಾಗಿ 2022ರ ಫೆ.2ರಂದು ಅಲ್ಪಾವಧಿ ಟೆಂಡರ್ ಆಹ್ವಾನಿಸಿತ್ತು. ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಫೆ. 11ರವರೆಗೆ ಕಾಲಾವಕಾಶ ನೀಡಲಾಗಿತ್ತು. ಯಾರೂ ಈ ಅಲ್ಪಾವಧಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾವಗಹಿಸಿಲ್ಲ.

ಪಶ್ಚಿಮ ಕಾರ್ಡ್ ರಸ್ತೆಗೆ ರಾಜಾಜಿನಗರದಲ್ಲಿ – ಮಂಜುನಾಥನಗರ ಮುಖ್ಯರಸ್ತೆ ಕೂಡುವಲ್ಲಿ ದ್ವಿಪಥ ಸಂಚಾರದ ಮೇಲ್ಸೇತುವೆ, ಶಿವನಗರದ 8ನೇ ಮತ್ತು 1ನೇ ಮುಖ್ಯ ರಸ್ತೆಗಳು ಕೂಡುವಲ್ಲಿ ದ್ವಿಮುಖ ಸಂಚಾರದ ಇಂಟಿಗ್ರೇಟೆಡ್ ಅಂಡರ್ ಪಾಸ್ ಮತ್ತು ಬಸವೇಶ್ವರ ನಗರದ ಮುಖ್ಯರಸ್ತೆ ಕೂಡುವಲ್ಲಿ ಏಕಮುಖ ಸಂಚಾರದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಳ ಪ್ಯಾಕೇಜ್‌ನ ಗುತ್ತಿಗೆಯನ್ನು ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ (ಎಂವಿಆರ್) ಕಂಪನಿಗೆ ನೀಡಲಾಗಿತ್ತು. ಒಟ್ಟು ₹ 89.86 ಕೋಟಿ ವೆಚ್ಚದ ಈ ಪ್ಯಾಕೇಜ್‌ಗೆ 2015ರ ಫೆ.11ರಂದು ಅನುಮೋದನೆ ನೀಡಲಾಗಿತ್ತು. ಬಸವೇಶ್ವರನಗರದ ಮುಖ್ಯರಸ್ತೆ ಕೂಡುವ ಜಂಕ್ಷನ್‌ನಲ್ಲಿ ₹ 15.20 ಕೋಟಿ ವೆಚ್ಚದಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಿಸಲು ಇತ್ತೀಚೆಗೆ ತೀರ್ಮಾನಿಸಲಾಗಿತ್ತು.

ಈ ಕಾಮಗಾರಿಯನ್ನು ಹಿಂದಿನ ಗುತ್ತಿಗೆದಾರರಿಗೆ ವಹಿಸಲು ಮುಂದಾಗಿದ್ದ ಬಿಬಿಎಂಪಿ ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅಡಿ ವಿನಾಯಿತಿ ನೀಡಬೇಕು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಇದಕ್ಕೆ ಸರ್ಕಾರ ಒಪ್ಪಿರಲಿಲ್ಲ. ಕೆಟಿಪಿಪಿ ಕಾಯ್ದೆಯ ಅನ್ವಯ ಟೆಂಡರ್ ಕರೆದೇ ಕಾಮಗಾರಿ ನಿರ್ಮಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಸೂಚಿಸಿತ್ತು. ಈ ಸಲ ಎಂವಿಆರ್ ಕಂಪನಿ ಸಹ ಗುತ್ತಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸಿಲ್ಲ.

‘ಹೈಕಮಾಂಡ್ ಜೊತೆ ಚರ್ಚಿಸಿ ರಾಜೀನಾಮೆ ತೀರ್ಮಾನ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕಾಂಗ್ರೆಸ್ ಹೈಕಮಾಂಡ್‌ನಿಂದ ಬುಲಾವ್ ಬಂದಿದ್ದು, ಅವರ ಜೊತೆ ಚರ್ಚಿಸಿದ ನಂತರ, ಮತ್ತೊಮ್ಮೆ ಸಮಾಜದ ಮುಖಂಡರ ಜೊತೆ ಮಾತುಕತೆ ನಡೆಸಿ ರಾಜೀನಾಮೆ ನೀಡುವ ಕುರಿತು ನಿರ್ಧರಿಸುತ್ತೇನೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಹೇಳಿದರು.

ಹುಬ್ಬಳ್ಳಿಯಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ಸದ್ಯ ರಾಜೀನಾಮೆ ನೀಡುತ್ತಿಲ್ಲ. ಹೈಕಮಾಂಡ್‌ಗೆ ನನ್ನನ್ನು ಪಕ್ಷದಲ್ಲಿ ಉಳಿಸಿಕೊಳ್ಳುವ ಮನಸ್ಸಿದೆಯೋ ಇಲ್ಲವೋ ಕೇಳುತ್ತೇನೆ. ಅವರ ಪ್ರತಿಕ್ರಿಯೆ ಆಧರಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇನೆ’ ಎಂದರು.

‘ವಕ್ಫ್ ಬೋರ್ಡ್‌ನಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಉಗ್ರಪ್ಪ ಅವರಿಂದ ಆರೋಪ ಮಾಡಿಸುತ್ತಿದ್ದಾರೆ. ನನ್ನ ಮೇಲೆ ತನಿಖೆ ನಡೆಸಲಿ. ಮನೆ ಮುಂದೆ ಕಟ್ಟಿರುವ ಶ್ವಾನಗಳಿಂದ ಯಾಕೆ ಬೊಗಳಿಸುತ್ತಿದ್ದೀರಿ’ ಎಂದು ಪ್ರಶ್ನಿಸಿದರು.

‘ನಿಶ್ಶಕ್ತರಾದ ಸಿದ್ದರಾಮಯ್ಯ’

ದಾವಣಗೆರೆ: ‘ನನ್ನ ವಿಚಾರದಲ್ಲಿ ಸಿದ್ದರಾಮಯ್ಯ ನಿಶ್ಶಕ್ತರಾಗಿದ್ದಾರೆ. ಅವರ ಕೈಯಲ್ಲಿ ಏನೂ ಇಲ್ಲ. ಎಲ್ಲವೂ ದೆಹಲಿಯಲ್ಲಿದೆ. ನಾನು ಕಾಂಗ್ರೆಸ್ ತೊರೆದರೆ ಬಹಳಷ್ಟು ಜನ ಕಾಂಗ್ರೆಸ್‌ನಿಂದ ಹೊರಬರಲಿದ್ದಾರೆ’ ಎಂದು ಸಿ.ಎಂ. ಇಬ್ರಾಹಿಂ ದಾವಣಗೆರೆಯಲ್ಲಿ ತಿಳಿಸಿದರು.

ಇದಕ್ಕೆ ತಿರುಗೇಟು ನೀಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ‘ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ನಂಬರ್ ಒನ್, ಟಾಪ್ ಮೋಸ್ಟ್ ನಾಯಕ. ಮಾಸ್ ಲೀಡರ್’ ಎಂದಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸ್ಪಷ್ಟನೆ

‘ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅಭ್ಯರ್ಥಿ ನಾನಲ್ಲ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಮೈಸೂರು ಜಿಲ್ಲೆಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ನಾನೇ ಮುಂದೆ ನಿಂತು ಚುನಾವಣೆ ನಡೆಸುತ್ತೇನೆ. ಆದರೆ ಅಭ್ಯರ್ಥಿ ನಾನಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಭಾನುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಈಚೆಗೆ ನಾನು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಈ ಕ್ಷೇತ್ರಕ್ಕೆ ಮುಂದಿನ ಅಭ್ಯರ್ಥಿ ಯಾರು? ಎಂದು ಕಾರ್ಯಕರ್ತರು ಕೇಳಿದರು. ಅದಕ್ಕೆ ನಾನೇ ಬರ್ತೀನಿ, ನಡೆಯಿರಿ ಎಂದು ಹೇಳಿದ್ದೆ. ಹಿಂದೆ ಹತ್ತು ದಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಳ್ಳಿಹಳ್ಳಿಗೂ ಭೇಟಿ ನೀಡಿ ಚುನಾವಣೆ ಕೆಲಸ ಮಾಡಿದ್ದೇನೆ. ನಮ್ಮ ಅಭ್ಯರ್ಥಿಗಾಗಿ ಹಗಲಿರುಳೂ ದುಡಿದಿದ್ದೇನೆ. ಅದೇ ರೀತಿ ಮುಂದೆ ನಿಂತು ನಾಯಕತ್ವ ವಹಿಸಿಕೊಂಡು ಕೆಲಸ ಮಾಡುತ್ತೇನೆ ಎಂದಿದ್ದೇನೆ. ಅದರ ಹೊರತಾಗಿ ನಾನೇ ಬಂದು ಚುನಾವಣೆಗೆ ನಿಲ್ಲುತ್ತೇನೆ ಎಂದು ಹೇಳಿಲ್ಲ. ಅದನ್ನೇ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ’ ಎಂದರು.

ರಾಜ್ಯದಲ್ಲಿ ಮತ್ತೆ ಸಮ್ಮಿಶ್ರ ಸರ್ಕಾರ ಬರಲಿದೆ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು ‘ಈಗಿನ ರಾಜಕೀಯ ಪರಿಸ್ಥಿತಿ ಹಿನ್ನೆಲೆಯಲ್ಲಿ ದೇವೇಗೌಡರು ಹಾಗೆ ಹೇಳಿದ್ದಾರೆ. ನಾನು ಸಹ ಮೊನ್ನೆ ಒಂದು ಕಡೆ ಇದನ್ನೇ ಹೇಳಿದ್ದೆ. ಜೆಡಿಎಸ್ ಬಿಟ್ಟು ಯಾರೂ ಸರ್ಕಾರ ಮಾಡಲಿಕ್ಕೆ ಆಗಲ್ಲ. ಹಾಗೆಂದ ಮಾತ್ರಕ್ಕೆ 123 ಸ್ಥಾನಕ್ಕಿಂತ ಕೆಳಗೆ ಬರುತ್ತೇವೆ ಎಂದಲ್ಲ. ನಮ್ಮ ಗುರಿ 123 ಸ್ಥಾನ ಗೆಲ್ಲುವುದು. ಮುಂದಿನ ಚುನಾವಣೆಗೆ ಈ ಗುರಿ ಇಟ್ಟುಕೊಂಡೇ ಹೊರಟಿದ್ದೇವೆ’ ಎಂದರು.

ಕನ್ನಡಿಗರ ಮಹಾ ಮೈತ್ರಿಕೂಟ ರಚನೆ ಸುಳಿವು

ಮುಂಬರುವ ವಿಧಾನಸಭೆ ಚುನಾವಣೆಗೆ ವಿವಿಧ ಕ್ಷೇತ್ರದ ಮುಖಂಡರನ್ನು ಒಳಗೊಂಡ ‘ಕನ್ನಡಿಗರ ಮಹಾಮೈತ್ರಿಕೂಟ ರಚನೆ ಮಾಡುವುದಾಗಿ ಕುಮಾರಸ್ವಾಮಿ ಸುಳಿವು ನೀಡಿದರು.

‘ಈಗಾಗಲೇ ಕನ್ನಡಪರ ಸಂಘಟನೆಗಳ ಮುಖಂಡರ ಸಭೆ ಮಾಡಿದ್ದೇನೆ. ಅದೇ ರೀತಿ ರೈತರು, ದಲಿತ ಮುಖಂಡರು, ನೀರಾವರಿ ಹೋರಾಟಗಾರರನ್ನು ಕೂಡ ಸದ್ಯದಲ್ಲೇ ಭೇಟಿ ಮಾಡಲಿದ್ದೇನೆ. ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷದ ಸರ್ಕಾರ ತರಬೇಕು. ಇದಕ್ಕಾಗಿ ‘ಕನ್ನಡಿಗರ ಮಹಾಮೈತ್ರಿಕೂಟ ವನ್ನು ಚುನಾವಣೆಗೆ ಮುನ್ನವೇ ರಚನೆ ಮಾಡಲು ಸಿದ್ಧತೆ ನಡೆಸಿದ್ದೇನೆ. ಇನ್ನೆರಡು ತಿಂಗಳಲ್ಲಿ ಅದರ ರೂಪುರೇಷೆಯು ಜನತೆಗೆ ತಿಳಿಯಲಿದೆ’ ಎಂದರು.

ರಾಮನಗರ ಎಸ್‌.ಪಿ ವಿರುದ್ಧ ಗರಂ

ರಾಮನಗರ: ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿ ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಬಾಬು ಅವರಿಗೆ ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಮೊಬೈಲ್ ಕರೆ ಮಾಡಿ ವಾಗ್ದಾಳಿ ನಡೆಸಿದರು.

‘ರಾಮನಗರದಲ್ಲಿ ನಿನ್ನೆ ಹೊಲದಲ್ಲಿ ಕೆಲಸ ಮಾಡಿ ಕುಡಿಯಲು 20 ಬಾಟಲಿ ಮದ್ಯ ಇಟ್ಟುಕೊಂಡಿದ್ದಕ್ಕೆ ರೈತನನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದೀರಿ. ಅದೇ ನಿಮ್ಮ ಗೋವಿಂದರಾಜು ಎನ್ನುವ ಸಿಬ್ಬಂದಿ 500 ಬಾಟಲಿ ಜೊತೆ ಸಿಕ್ಕಿಬಿದ್ದವರನ್ನು ಸ್ಟೇಷನ್ ಬೇಲ್ ಕೊಟ್ಟು ಕಳುಹಿಸಿದ್ದಾನೆ. ಒಬ್ಬರಿಗೊಂದು ನ್ಯಾಯ ಮಾಡ್ತೀರಾ’ ಎಂದು ಹರಿಹಾಯ್ದರು.

‘ನನ್ನ ಕ್ಷೇತ್ರದಲ್ಲಿ ಬಂದು ನೀವೇನು ಸೆಕ್ಯೂರಿಟಿ ಕೊಡಬೇಕಿಲ್ಲ. ನಿಮ್ಮ ಚಿಕ್ಕಮಗಳೂರಿನ ಆಟ ಇಲ್ಲಿ ನಡೆಯಲ್ಲ. ಕಾಂಗ್ರೆಸ್ ಪರವಾಗಿ ಕೆಲಸ ಮಾಡಬೇಡಿ. ಪಕ್ಷಾತೀತವಾಗಿ ಕೆಲಸ ಮಾಡಿ. ಇಲ್ಲದಿದ್ರೆ ನಾನು ವಿಧಾನಸಭೆಯಲ್ಲೇ ಈ ಬಗ್ಗೆ ಮಾತನಾಡುತ್ತೇನೆ’ ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಬೇಸರ

ಇಂಗ್ಲಿಷ್ ಮಾಧ್ಯಮ ಶಿಕ್ಷಣದಿಂದ ಸಂಸ್ಕೃತಿ ನಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದರಿಂದ 10ನೇ ತರಗತಿವರೆಗೆ ಕಡ್ಡಾಯವಾಗಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಕ್ಕಳನ್ನು ಓದಿಸಬೇಕು. ಇಂಗ್ಲಿಷ್ ಮಾಧ್ಯಮ ಶಿಕ್ಷಣದಿಂದ ನಮ್ಮ ಸಂಸ್ಕೃತಿ ನಾಶವಾಗಲಿದೆ' ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಬಿ. ಮಂಜಮ್ಮ ಜೋಗತಿ ಬೇಸರ ವ್ಯಕ್ತಪಡಿಸಿದರು.

ಮೈಕೊ ಕನ್ನಡ ಬಳಗ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ ಅವರಿಗೆ 'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿ ₹ 1 ಲಕ್ಷ ನಗದು ಒಳಗೊಂಡಿದೆ.

'ನಮ್ಮ ಭಾಷೆ, ಸಂಸ್ಕೃತಿ ಮತ್ತು ಜಾನಪದದ ಉಳಿವಿಗೆ ಕನ್ನಡ ಮಾಧ್ಯಮ ಶಿಕ್ಷಣ ಅಗತ್ಯ. ಹಾಗೆಂದು ಇಂಗ್ಲಿಷ್ ಭಾಷೆಯನ್ನು ವಿರೋಧಿಸಬೇಕಿಲ್ಲ. ನಮ್ಮ ಭಾಷೆಯನ್ನು ಉಳಿಸಿ, ಆಂಗ್ಲ ಭಾಷೆಯನ್ನು ಬೆಳೆಸಬೇಕು. ಕನ್ನಡ ಮಾಧ್ಯಮ ಶಿಕ್ಷಣದಿಂದ ಸಂಬಂಧಗಳ ಮಹತ್ವವೂ ತಿಳಿಯುತ್ತದೆ. ಇಲ್ಲವಾದರೆ ಮಕ್ಕಳು ಸಂಕುಚಿತಗೊಳ್ಳುತ್ತಾ ಹೋಗುತ್ತಾರೆ. ಸರ್ಕಾರಿ ಶಾಲೆಯಲ್ಲಿಯೂ ಉತ್ತಮ ಶಿಕ್ಷಣ ದೊರೆಯುತ್ತದೆ. ಸರ್ಕಾರಿ ಉದ್ಯೋಗ ಬೇಕು, ಅಲ್ಲಿನ ಶಿಕ್ಷಣ ಬೇಡ ಅನ್ನುವುದು ಸರಿಯಲ್ಲ' ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಎಲ್ಲಿ ಜೀವಂತಿಕೆ ಇರುತ್ತದೆಯೋ ಅಲ್ಲಿ ಭಾಷೆ ಇರುತ್ತದೆ. ಕನ್ನಡವು ಜೀವಂತಿಕೆಯ ಅಸ್ಮಿತೆಯಾಗಿದೆ' ಎಂದು ತಿಳಿಸಿದರು.

ಭಾಷೆ ಬಗ್ಗೆ ಕೀಳರಿಮೆ: ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ, 'ದೇಶದಲ್ಲಿ 1835ರ ನಂತರ ನಮ್ಮವರಿಗೆ ಆಂಗ್ಲ ಮಾಧ್ಯಮ ಶಿಕ್ಷಣ ಪ್ರಾರಂಭಿಸಲಾಯಿತು. ಈ ಮೂಲಕ ಬ್ರಿಟಿಷರು ನಮಗೆ ಇತಿಹಾಸದ ಪರಿಕಲ್ಪನೆ ನೀಡಿದರು. ನಮ್ಮ ಭೂತಕಾಲವನ್ನು ಮರೆಸಿ, ಕೀಳರಿಮೆ ಮೂಡುವಂತೆ ಮಾಡಿದರು. ಆಂಗ್ಲ ಭಾಷೆಯಲ್ಲಿ ಇರುವುದೆಲ್ಲ ಸರಿ, ನಮ್ಮ ಭಾಷೆಯಲ್ಲಿ ಇರುವುದು ತಪ್ಪೆಂದು ಸಾರಿದರು' ಎಂದು ಬೇಸರ ವ್ಯಕ್ತಪಡಿಸಿದರು.

ಮೈಕೊ ನೌಕರರ ಒಕ್ಕೂಟದ ಅಧ್ಯಕ್ಷ ವಿ.ಜೆ.ಕೆ. ನಾಯರ್, 'ಮಾತೃಭಾಷೆ ಬುದ್ಧಿ ವಿಕಾಸಕ್ಕೆ ಸಹಕಾರಿ. ಗಡಿ ಜಿಲ್ಲೆಗಳಲ್ಲಿ ಅನ್ಯ ಭಾಷೆಗಳ ಪ್ರಭಾವ ಅಧಿಕ ಇದೆ. ಅಲ್ಲಿ ಕನ್ನಡದ ಬಳಕೆ ಹೆಚ್ಚಬೇಕು' ಎಂದು ಹೇಳಿದರು.



ಚಂದ್ರಶೇಖರ ಕಂಬಾರ ಅವರಿಗೆ 'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಬಿ.ಮಂಜಮ್ಮ ಜೋಗತಿ, ಮೈಕೊ ಕನ್ನಡ ಬಳಗದ ಗೌರವಾಧ್ಯಕ್ಷೆ ಪದ್ಮಿನಿ ನಾಗರಾಜು, ಮಹೇಶ ಜೋಶಿ, ಬಾಷ್ ಕಂಪನಿಯ ಬಿಡದಿ ಘಟಕದ ಅಧಿಕಾರಿ ಎಚ್.ಬಿ. ತೊಂಟೇಶ್, ವಿ.ಜೆ.ಕೆ. ನಾಯರ್, ಮೈಕೊ ಕನ್ನಡ ಬಳಗ ಪದಾಧಿಕಾರಿ ಸಂಗಣ್ಣ ಸಾಹುಕಾರ ಮತ್ತು ಇತರರು ಇದ್ದಾರೆ — ಪ್ರಜಾವಾಣಿ ಚಿತ್ರ

ಬಿಬಿಎಂಪಿ ಚುನಾವಣೆ: 'ಒಬಿಸಿ ಮೀಸಲು' ತೊಡಕು

ಸುಪ್ರೀಂ ಕೋರ್ಟ್ ತೀರ್ಪಿನ ಪರಿಣಾಮ—ತ್ರಿಸ್ತರದ ಪರಿಶೀಲನೆ ಅನಿವಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಖರ ಅಂಕಿ-ಅಂಶಗಳೊಂದಿಗೆ ತ್ರಿಸ್ತರದ ಪರಿಶೀಲನೆ ಬಳಿಕವೇ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕೆಂಬ ಸುಪ್ರೀಂಕೋರ್ಟ್ ನಿರ್ದೇಶನ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಗೂ ತೊಡಕಾಗಿ ಪರಿಣಮಿಸಲಿದೆ.

2020 ರ ಸೆಪ್ಟೆಂಬರ್ 10 ರಂದು ಬಿಬಿಎಂಪಿಯಲ್ಲಿ ಚುನಾಯಿತ ಸದಸ್ಯರ ಅವಧಿ ಅಂತ್ಯಗೊಂಡಿದ್ದು, ಒಂದು ವರ್ಷ ಐದು ತಿಂಗಳು ಕಳೆದರೂ ಚುನಾವಣೆ ನಡೆದಿಲ್ಲ. ಹಳೆಯ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕೊ? ಅಥವಾ 2020ರ ಕಾಯ್ದೆಯ ಪ್ರಕಾರ 243 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕೊ? ಎಂಬ ವಿವಾದ ಸುಪ್ರೀಂಕೋರ್ಟ್‌ನಲ್ಲಿದೆ. ಈ ವ್ಯಾಜ್ಯದ ವಿಚಾರಣೆ ಮುಕ್ತಾಯಗೊಂಡು ಸುಪ್ರೀಂಕೋರ್ಟ್‌ನಿಂದ ತೀರ್ಪು ಹೊರಬಿದ್ದರೂ, ಬಿಬಿಎಂಪಿ ಚುನಾವಣಾ ಪ್ರಕ್ರಿಯೆಯನ್ನು ತಕ್ಷಣವೇ ಪ್ರಾರಂಭಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ.

'ನಿಖರ ಅಂಕಿಅಂಶಗಳೊಂದಿಗೆ ತ್ರಿಸ್ತರದ ಪರಿಶೀಲನೆ ನಡೆಸಿದ ಬಳಿಕವೇ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಸ್ಥಾನಗಳಲ್ಲಿ ಮೀಸಲಾತಿ ನೀಡಬೇಕು. ಈ ಪ್ರಕ್ರಿಯೆ ನಡೆಸಲು ರಾಜ್ಯ ಸರ್ಕಾರ ವಿಫಲವಾದರೆ ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನೂ 'ಸಾಮಾನ್ಯ' ಎಂದು ಘೋಷಿಸಿ ಚುನಾವಣೆ ನಡೆಸಬೇಕು' ಎಂದು ರಾಹುಲ್ ರಮೇಶ್ ವಾಘ್ ಮತ್ತು ಮಹಾರಾಷ್ಟ್ರ ಸರ್ಕಾರ ನಡುವಿನ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಜನವರಿ 19ರಂದು ನಿರ್ದೇಶನ ನೀಡಿದೆ. ಈ ನಿರ್ದೇಶನ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೂ ಅನ್ವಯ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಹಿಂದುಳಿದ ವರ್ಗಗಳಿಗೆ ಶೇಕಡ 27ರಷ್ಟು ಮೀಸಲಾತಿ ನೀಡುವ ನಿರ್ಧಾರವನ್ನು ಸಮರ್ಥಿಸಿಕೊಳ್ಳುವ ತೀರ್ಮಾನವನ್ನು ಸರ್ಕಾರ ತ್ರಿಸ್ತರದ ಪರಿಶೀಲನೆ ನಡೆಸಿ, ಸಮರ್ಥನೀಯವಾದ ದಾಖಲೆ ಸಲ್ಲಿಸಿದರೆ ಮಾತ್ರವೇ ರಾಜ್ಯ ಚುನಾವಣಾ ಆಯೋಗ ಮುಂದುವರಿಯಬಹುದು. ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಣೆಯಾಗದೇ ರಾಜ್ಯದಲ್ಲಿ ಯಾವುದೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದೂ ಅನುಮಾನ.

ಮೀಸಲಾತಿಯನ್ನು ಸಮರ್ಥಿಸಿಕೊಳ್ಳುವ ತೀರ್ಮಾನವನ್ನು ಕೈಗೊಳ್ಳದೇ ಇದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಸ್ಥಾನಗಳನ್ನು ಹೊರತುಪಡಿಸಿ ಉಳಿದ ಎಲ್ಲ ವಾರ್ಡ್‌ಗಳನ್ನೂ 'ಸಾಮಾನ್ಯ' ಎಂದು ಘೋಷಿಸಿ ಚುನಾವಣೆ ನಡೆಸಬೇಕಾಗುತ್ತದೆ. ಇದರಿಂದ ಹಿಂದುಳಿದ ವರ್ಗಗಳ ವಿರೋಧ ಎದುರಿಸಬೇಕಾಗಬಹುದು ಎಂಬ ಭಯ ಸರ್ಕಾರವನ್ನು ಕಾಡುತ್ತಿದೆ.

ಎಲ್ಲ ಚುನಾವಣೆಗಳಿಗೂ ಅನ್ವಯ: ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ರಾಜ್ಯ ಚುನಾವಣಾ ಆಯುಕ್ತ ಡಾ.ಬಿ. ಬಸವರಾಜು, 'ಸದ್ಯದ ಸ್ಥಿತಿಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಂಬಂಧಿಸಿದ ಸುಪ್ರೀಂಕೋರ್ಟ್ ನಿರ್ದೇಶನ ಪಾಲಿಸದೆ ಯಾವುದೇ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆ ನಡೆಸಲು ಸಾಧ್ಯವಿಲ್ಲ. ಬಿಬಿಎಂಪಿಗೂ ಇದು ಅನ್ವಯವಾಗುತ್ತದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ' ಎಂದರು.

ಸರ್ಕಾರದ ಹಂತದಲ್ಲಿ ಚರ್ಚೆ

ಸುಪ್ರೀಂಕೋರ್ಟ್ ನಿರ್ದೇಶನ ಪಾಲನೆ ಕುರಿತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳ ಜತೆ ಈಗಾಗಲೇ ಚರ್ಚೆ ನಡೆಸಿದ್ದಾರೆ. ರಾಜಕೀಯವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಪ್ರತ್ಯೇಕ ಆಯೋಗ ರಚಿಸಬೇಕೆ ಅಥವಾ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಪುನರ್ವಿಂಗಡಣೆಗಾಗಿ ನಿವೃತ್ತ ಐಎಎಸ್ ಅಧಿಕಾರಿ ಎಂ. ಲಕ್ಷ್ಮೀನಾರಾಯಣ್ ನೇತೃತ್ವದಲ್ಲಿ ನೇಮಿಸಿರುವ ಆಯೋಗಕ್ಕೆ ಈ ಜವಾಬ್ದಾರಿಯನ್ನೂ ವಹಿಸಬಹುದೆ ಎಂಬ ಚರ್ಚೆ ಸರ್ಕಾರದ ಹಂತದಲ್ಲಿ ನಡೆಯುತ್ತಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಹಿಜಾಬ್: ಸಾಮರಸ್ಯ ಕದಡುವ ಯತ್ನ

ಪ್ರಜಾವಾಣಿ ವಾರ್ತೆ

ತುಮಕೂರು: ಹಿಜಾಬ್–ಕೇಸರಿ ಶಾಲು ವಿವಾದ ಕೋಮುಗಲಭೆಗೆ ತಿರುಗುವ ವಾತಾವರಣ ನಿರ್ಮಾಣವಾಗುತ್ತಿದೆ. ಇದನ್ನು ತಡೆಯುವ ಕೆಲಸವಾಗಬೇಕು ಎಂದು ರಾಜ್ಯ ವಕ್ಫ್ ಬೋರ್ಡ್ ಅಧ್ಯಕ್ಷ ಮೌಲಾನಾ ಶಾಫಿ ಸಆದಿ ಹೇಳಿದರು.

ನಗರದ ಸಿದ್ಧಗಂಗಾ ಮಠಕ್ಕೆ ಭಾನುವಾರ ಭೇಟಿ ನೀಡಿ ಸಿದ್ಧಲಿಂಗ ಸ್ವಾಮೀಜಿ ಜೊತೆ ಚರ್ಚಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಸೌಹಾರ್ದತೆ ಸಾರಿದ ರಾಷ್ಟ್ರದಲ್ಲಿ ಹಲವಾರು ವರ್ಷಗಳಿಂದ ಎಲ್ಲರು ಒಂದಾಗಿ ಬದುಕು ಸಾಗಿಸುತ್ತಿದ್ದೇವೆ. ಸೌಹಾರ್ದತೆಗೆ ಧಕ್ಕೆ ಉಂಟು ಮಾಡಿದವರ ವಿರುದ್ಧ ಸರ್ಕಾರ ಕ್ರಮಕೈಗೊಳ್ಳಲಿದೆ ಎಂದು ತಿಳಿಸಿದರು.

'ಉಡುಪಿಯಲ್ಲಿಯೇ ಬಗೆಹರಿಸಬಹುದಾಗಿದ್ದ ಹಿಜಾಬ್–ಕೇಸರಿ ಶಾಲು ವಿವಾದ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಈ ವಿವಾದವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಹರಡಿದ್ದು ಯಾರು ಎನ್ನುವ ಸಂಶಯ ಇದೆ' ಎಂದರು.

'ಯಾವ ಹಂತದಲ್ಲೂ ಹಿಂದೂ–ಮುಸ್ಲಿಂ ಸೌಹಾರ್ದತೆಗೆ ಸಮಸ್ಯೆಯಾಗದಂತೆ ನೋಡಿಕೊಂಡು ಹೋಗಬೇಕು ಎಂದು ತುಮಕೂರಿನ ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದ್ದಾರೆ' ಎಂದು ತಿಳಿಸಿದರು.

'ನ್ಯಾಯಾಲಯದ ತೀರ್ಪು ಗೌರವಿಸಬೇಕು'

'ಹಿಜಾಬ್–ಕೇಸರಿ ಶಾಲು ವಿವಾದದಲ್ಲಿ ಧಾರ್ಮಿಕ ವಿಚಾರಕ್ಕಿಂತ ರಾಜಕೀಯ ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತಿದೆ. ಈ ವಿಚಾರದಲ್ಲಿ ರಾಜಕೀಯ ಪ್ರವೇಶ ಮಾಡಬಾರದು. ಕೋವಿಡ್‌ನಿಂದಾಗಿ ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದೆ. ಇಂತಹ ಸಮಯದಲ್ಲಿ ಅನಗತ್ಯವಾಗಿ ಮಕ್ಕಳು ಶಾಲಾ–ಕಾಲೇಜುಗಳನ್ನು ಬಿಟ್ಟು ಹೋರಾಟ ಮಾಡುತ್ತಿರುವುದು ಸರಿಯಲ್ಲ' ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಶಾಲೆ ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುವಂತಹ ಸ್ಥಳ. ಎಲ್ಲರು ವಿದ್ಯಾಭ್ಯಾಸದ ಕಡೆಗೆ ಗಮನಕೊಡಬೇಕು. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ನ್ಯಾಯಾಧೀಶರ ತೀರ್ಪನ್ನು ಎಲ್ಲರು ಗೌರವಿಸಬೇಕು ಎಂದರು.

ಬೆಂಗಾವಲು ವಾಹನ ಹತ್ತಿದ ಸಚಿವ ಅಶ್ವತ್ಥನಾರಾಯಣ

ಕಲಬುರಗಿ: ಯಾದಗಿರಿಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ವಾಪಸ್ ಬರುತ್ತಿದ್ದ ಉನ್ನತ ಶಿಕ್ಷಣ, ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರಿದ್ದ ಸರ್ಕಾರಿ ಕಾರಿನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಬೆಂಗಾವಲು ವಾಹನ ಹತ್ತಿ ಕಲಬುರಗಿ ವಿಮಾನ ನಿಲ್ದಾಣ ತಲುಪಿದ ಘಟನೆ ನಡೆದಿದೆ.

ಯಾದಗಿರಿ ಹಾಗೂ ಸುರಪುರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಮಧ್ಯಾಹ್ನ ವಿಮಾನದ ಮೂಲಕ ಬೆಂಗಳೂರಿಗೆ ತೆರಳಲು ಕಲಬುರಗಿಯತ್ತ ಹೊರಟಿದ್ದರು. ಕಲಬುರಗಿ ತಾಲ್ಲೂಕಿನ ಫರಹತಾಬಾದ್ ಬಳಿ ಬರುತ್ತಿದ್ದಂತೆಯೇ ಕಾರು ಏಕಾಏಕಿ ಬಂದ್ ಆಯಿತು. ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಮೆಕ್ಯಾನಿಕ್ ಕರೆಸಲು ವಿಳಂಬವಾಗುತ್ತದೆ ಎಂದು ಚಾಲಕ ಹೇಳಿದ. ಮತ್ತೊಂದೆಡೆ ಬೆಂಗಳೂರಿಗೆ ತೆರಳುವ ವಿಮಾನದ ಸಮಯ ಹತ್ತಿರ ಬಂದಿದ್ದರಿಂದ ಬೆಂಗಾವಲು ಜೀಪ್ ಹತ್ತಿದರು. ಸಚಿವರ ಆಪ್ತ ಸಹಾಯಕರೂ ಅದೇ ಜೀಪ್ ಹತ್ತಿ ವಿಮಾನ ನಿಲ್ದಾಣ ತಲುಪಿದರು.

'ಸಾಹಿತ್ಯ ಸಮ್ಮೇಳನದಲ್ಲಿ ಯಕ್ಷಗಾನ ಸಾಹಿತ್ಯ ಗೋಷ್ಠಿ'

ಬೆಂಗಳೂರು: 'ಯಕ್ಷಗಾನ ಸಾಹಿತ್ಯಕ್ಕೆ ಮೌಲ್ಯ ಸಿಗಬೇಕು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಯಕ್ಷಗಾನ ಸಾಹಿತ್ಯದ ಬಗ್ಗೆ ಪ್ರತ್ಯೇಕ ಗೋಷ್ಠಿ ಹಮ್ಮಿಕೊಳ್ಳಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಭರವಸೆ ನೀಡಿದರು.

ಯಕ್ಷವಾಹಿನಿ ಸಂಸ್ಥೆ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಯಕ್ಷ ಸಾಹಿತ್ಯ ಸಾಂಗತ್ಯ' ಸರಣಿ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಕನ್ನಡ ಅಸ್ಮಿತೆ ಉಳಿಸುವಲ್ಲಿ ಯಕ್ಷಗಾನ ಮಹತ್ವದ ಪಾತ್ರ ವಹಿಸುತ್ತಿದೆ. ಯಕ್ಷಗಾನ ಸಾಹಿತ್ಯವನ್ನು ಬೆಳೆಸುವುದಕ್ಕೆ ವಿಶೇಷ ಕಾರ್ಯಕ್ರಮಗಳನ್ನು ಸಾಹಿತ್ಯ ಪರಿಷತ್ತಿನಿಂದ ಆಯೋಜಿಸಲಾಗುವುದು' ಎಂದು ತಿಳಿಸಿದರು.

ಕವಿ ಬಿ.ಆರ್. ಲಕ್ಷ್ಮಣರಾವ್, 18ನೇ ಶತಮಾನದಲ್ಲಿ ರಚನೆಯಾದ ಹಳೆಮಕ್ಕಿ ರಾಮ ವಿರಚಿತ 'ಕೃಷ್ಣಾರ್ಜುನ ಕಾಳಗ' ಯಕ್ಷಗಾನ ಕೃತಿಯ ಬಗ್ಗೆ ಮಾತನಾಡಿದರು.

ಯಕ್ಷಗಾನ ವಿದ್ವಾಂಸ ಆನಂದರಾಮ ಉಪಾಧ್ಯ, ಯಕ್ಷವಾಹಿನಿಯ ನಟರಾಜ್ ಉಪಾಧ್ಯ, ಶ್ರೀಧರ್ ಡಿ.ಎಸ್., ಗಿಂಡಿಮನೆ ಮೃತ್ಯುಂಜಯ ಇದ್ದರು.

ಸೌಜನ್ಯದ ಭೇಟಿ

ನಟ ಶಿವರಾಜ್‌ಕುಮಾರ್ ಅವರು ಭಾನುವಾರ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಚೆನ್ನೈನಲ್ಲಿರುವ ಅವರ ನಿವಾಸದಲ್ಲಿ ಭೇಟಿ ಮಾಡಿ ಸನ್ಮಾನಿಸಿದರು. ಪತ್ನಿ ಗೀತಾ ಶಿವರಾಜ್‌ಕುಮಾರ್ ಇದ್ದರು. ಇದೊಂದು ಸೌಜನ್ಯದ ಭೇಟಿ ಎಂದು ಹೇಳಲಾಗಿದೆ. ಇದೇ ಸಂದರ್ಭದಲ್ಲಿ ಸ್ಟಾಲಿನ್ ಅವರು ನಟ ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ಸಂತಾಪ ಸೂಚಿಸಿದರು ಪ್ರಜಾವಾಣಿ ಚಿತ್ರ

ಕ್ರೈಸ್ತಧರ್ಮಕ್ಕೆ ಮತಾಂತರ ಆರೋಪ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಳಗುಂದ (ಗದಗ ಜಿಲ್ಲೆ): 'ಆಸೆ, ಆಮಿಷವೊಡ್ಡಿ ಕ್ರೈಸ್ತ ಸಮುದಾಯಕ್ಕೆ ಹಿಂದೂಗಳನ್ನು ಮತಾಂತರ ಮಾಡಲಾಗುತ್ತಿದೆ' ಎಂದು ಆರೋಪಿಸಿ, ಭಾನುವಾರ ಇಲ್ಲಿನ ವಿದ್ಯಾನಗರದ ಮನೆಯೊಂದರಲ್ಲಿ ಪ್ರಾರ್ಥನಾ ಸಭೆ ನಡೆಸುತ್ತಿದ್ದ ವೇಳೆ ಜೈ ಹನುಮಾನ್ ಸೇನೆ ಹಾಗೂ ಗಜಸೇನೆ ಸಂಘಟನೆ ಯುವಕರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

'ಕೆಲವು ದಿನಗಳಿಂದ ಪಾಸ್ಟರ್ ನಾಮದೇವ ಎನ್ನುವವರು ಮನೆ ಬಾಡಿಗೆಗೆ ಪಡೆದು ಇಲ್ಲಿನ ಹಲವು ಹಿಂದೂ ಕುಟುಂಬಗಳನ್ನು ಕ್ರೈಸ್ತ ಧರ್ಮಕ್ಕೆ ಸೇರುವಂತೆ ಪ್ರಚೋದನೆ ಮಾಡುತ್ತಿದ್ದಾರೆ. ಈಗಾಗಲೇ ಹಲವರು ಮತಾಂತರಗೊಂಡಿದ್ದಾರೆ' ಎಂದು ಪ್ರತಿಭಟನಾ ನಿರತರು ಆರೋಪಿಸಿದರು.

ಈ ಸಂದರ್ಭದಲ್ಲಿ ಪ್ರಾರ್ಥನೆಯಲ್ಲಿ ತೊಡಗಿದ್ದ ಫಾಸ್ಟರ್, ಅವರ ಬೆಂಬಲಿಗರು ಮತ್ತು ಪ್ರತಿಭಟನಾ ನಿರತರ ನಡುವೆ ವಾಗ್ವಾದ ನಡೆಯಿತು. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು. ಸಿಪಿಐ ಅಶೋಕ ಸದಲಗಿ ಅವರು ಎರಡು ಗುಂಪುಗಳನ್ನೂ ಠಾಣೆಗೆ ಕರೆಯಿಸಿ ಸಭೆ ನಡೆಸಿದರು.

'ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಿಲ್ಲ, ಅವರೆ ಸ್ವಯಂ ಪ್ರೇರಣೆಯಿಂದ ಪ್ರಾರ್ಥನೆಗೆ ಬಂದಿದ್ದಾರೆ' ಎಂದು ಪಾಸ್ಟರ್ ನಾಮದೇವ ಪ್ರತಿಕ್ರಿಯಿಸಿದರು.

ಜೈ ಹನುಮಾನ್ ಸೇನೆ ಸಂಘಟನೆಯ ಕಿರಣ ನೀಲಗುಂದ,'ಪಟ್ಟಣದಲ್ಲಿ ಹಲವು ದಿನಗಳಿಂದ ಅನಧಿಕೃತವಾಗಿ ಪ್ರಾರ್ಥನಾ ಸಭೆಗಳನ್ನ ನಡೆಸಿ ಬಡವರಿಗೆ, ವಿದ್ಯಾರ್ಥಿಗಳಿಗೆ ಆಸೆ ಆಮಿಷ ತೋರಿಸಿ ಕ್ರೈಸ್ತ ಧರ್ಮ ಪಾಲನೆ ಮಾಡುವಂತೆ ಒತ್ತಾಯಿಸಿದ್ದಾರೆ' ಎಂದು ದೂರಿದರು.

ಸೋಮವಾರ, ಫೆಬ್ರುವರಿ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 45 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಪ್ರವೇಶಕ್ಕಾಗಿ ಜಾಯಿಂಟ್ ಎಂಟ್ರೆನ್ಸ್ ಎಕ್ಸಾಮ್(ಜೆಇಇ) ಪಾಸ್ ಮಾಡಬೇಕು. ಪ್ರವೇಶ ಪರೀಕ್ಷೆ ವಿಧಾನ, ಕೋರ್ಸ್ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ಪಿ.ಎಫ್. ಬಡ್ಡಿ ದರ ಮಾರ್ಚ್‌ನಲ್ಲಿ ನಿರ್ಧಾರ 10

ಹನುಮನ ಜನ್ಮಸ್ಥಳ ವಿವಾದದ ನಡುವೆಯೇ ನಿರ್ಧಾರ

ಆಳ-ಅಗಲ: ಐಪಿಎಲ್: ಹಣದ ಹಂಗಾಮಾ

ಗೋವಾ, ಉತ್ತರಾಖಂಡದಲ್ಲಿ ಇಂದು ಮತದಾನ 9

ತಿರುಮಲ ಅಂಜನಾದ್ರಿ ಅಭಿವೃದ್ಧಿ: ಟಿಟಿಡಿ 9

ಒಂಬತ್ತು ತಿಂಗಳಿಂದ ಬಿಡಿಗಾಸೂ ಇಲ್ಲ ● ₹3,600 ಕೋಟಿ ಬಿಲ್ ಬಾಕಿ ● ಕೆಲಸ ಬಹುತೇಕ ಸ್ಥಗಿತ

ಎತ್ತಿನಹೊಳೆ ಕಾಮಗಾರಿಗೆ ಗ್ರಹಣ

● ವಿ.ಎಸ್. ಸುಬ್ರಹ್ಮಣ್ಯ

ಸಂಗ್ರಹ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಯಲುಸೀಮೆಯ ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಕೈಗೆತ್ತಿಕೊಂಡಿರುವ ಎತ್ತಿನಹೊಳೆ ಯೋಜನೆಯ ಕಾಮಗಾರಿಗಳಿಗೆ ಒಂಬತ್ತು ತಿಂಗಳಿಂದ ಬಿಡಿಗಾಸೂ ಬಿಡುಗಡೆಯಾಗಿಲ್ಲ. ₹3,600 ಕೋಟಿಗೂ ಹೆಚ್ಚು ಮೊತ್ತದ ಬಿಲ್ ಬಾಕಿ ಉಳಿದಿದ್ದು, ಶೇ 80ಕ್ಕೂ ಹೆಚ್ಚು ಸ್ಥಳಗಳಲ್ಲಿ ಗುತ್ತಿಗೆದಾರರು ಕಾಮಗಾರಿ ಸ್ಥಗಿತಗೊಳಿಸಿದ್ದಾರೆ.

ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿರುವ ವಿಶ್ವೇಶ್ವರಯ್ಯ ಜಲ ನಿಗಮ (ವಿಜೆಎನ್‌ಎಲ್) ಆರು ತಿಂಗಳ ಹಿಂದೆ ಸಲ್ಲಿಸಿರುವ ₹ 2,083.23 ಕೋಟಿ ಮೊತ್ತದ ಬಿಲ್‌ಗಳು ಹಣಕಾಸು ಇಲಾಖೆಯ ಮುಂದೆ ಬಾಕಿ ಉಳಿದಿವೆ. ಇನ್ನೂ ₹1,500 ಕೋಟಿ ಮೊತ್ತದ ಬಿಲ್ ಬರೆಯಬೇಕಿದೆ ಎಂದು ನಿಗಮದ ಮೂಲಗಳು ತಿಳಿಸಿವೆ.

ಯೋಜನೆಯಡಿ ಎರಡು ಹಂತಗಳಲ್ಲಿ 43 ಪ್ಯಾಕೇಜ್‌ಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 42 ಪ್ಯಾಕೇಜ್‌ಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಗಿದಿರುವ ಕೆಲಸಕ್ಕೆ ಬಿಲ್ ಸಲ್ಲಿಸಿ ಹಲವು ತಿಂಗಳುಗಳು ಕಳೆದರೂ ಹಣ ಪಾವತಿಯಾಗಿಲ್ಲ. ಇದರಿಂದ ಇಕ್ಕಟ್ಟಿಗೆ ಸಿಲುಕಿರುವ ಬಹುತೇಕ ಗುತ್ತಿಗೆದಾರರು, ಕಾಮಗಾರಿಗಳ ಸ್ಥಳಗಳಿಂದ ಕಾರ್ಮಿಕರನ್ನು ಹೊರ ಕಳುಹಿಸಿದ್ದಾರೆ.

ಕಾಲುವೆ ನಿರ್ಮಾಣ, ವಿತರಣಾ ತೊಟ್ಟಿಗಳ ನಿರ್ಮಾಣ, ಪಂಪ್ ಹೌಸ್ ನಿರ್ಮಾಣ, ರೈಸಿಂಗ್ ವಾಲ್ ನಿರ್ಮಾಣ, ಗುರುತ್ವ ಕಾಲುವೆ ನಿರ್ಮಾಣ, ಸುರಂಗ ಮಾರ್ಗಗಳ ನಿರ್ಮಾಣ, ಅಡ್ಡ ಮೋರಿಗಳ ನಿರ್ಮಾಣ ಸೇರಿದಂತೆ ಹಲವು ಬಗೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಲವು ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದರೆ, ಹಲವು ಕಾಮಗಾರಿಗಳು ಅರ್ಧಕ್ಕಿಂತ ಹೆಚ್ಚು ಮುಗಿದಿವೆ. ಬಿಲ್ ಪಾವತಿಯಲ್ಲಿ ವಿಳಂಬವಾಗುತ್ತಿರುವುದರಿಂದ ಕೆಲಸ ಮುಂದುವರಿಸಲು ಗುತ್ತಿಗೆದಾರರು ಆಸಕ್ತಿ ತೋರುತ್ತಿಲ್ಲ.

ಏಳು ಜಿಲ್ಲೆಗಳ 29 ತಾಲ್ಲೂಕುಗಳ ವ್ಯಾಪ್ತಿಯಲ್ಲಿ 38 ಪಟ್ಟಣಗಳು ಮತ್ತು 6,657 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ₹ 12,912.36 ಕೋಟಿ ವೆಚ್ಚದ ಯೋಜನೆಯನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಇತ್ತೀಚೆಗೆ ಗಡುವು ನೀಡಿದ್ದರು. ಆದರೆ, ಹಣ ಬಿಡುಗಡೆಯಲ್ಲಿ ಆಗಿರುವ ವಿಳಂಬದಿಂದ ಕಾಮಗಾರಿ ಬೇಗ ಪೂರ್ಣಗೊಳ್ಳುವ ಸಾಧ್ಯತೆ ಕಾಣಿಸುತ್ತಿಲ್ಲ ಎಂದು ವಿಜೆಎನ್‌ಎಲ್ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಬಿಲ್ ಬರೆಸುವುದಕ್ಕೂ ಹಿಂದೇಟು: ಆರು ತಿಂಗಳ ಹಿಂದೆ ಬಿಲ್‌ಗಳನ್ನು ಸಲ್ಲಿಸಿದ ನಂತರ ₹ 1,500 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳು ಪೂರ್ಣಗೊಂಡಿವೆ. ಆದರೆ, ಬಿಲ್ ಬರೆದ ತಕ್ಷಣವೇ ಶೇ 12ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸಬೇಕಿದೆ. ₹ 180 ಕೋಟಿ ಜಿಎಸ್‌ಟಿ ಪಾವತಿಸಿದರೂ ತ್ವರಿತವಾಗಿ ಬಿಲ್ ಪಾವತಿಯಾಗುವ ಭರವಸೆ ಇಲ್ಲದ ಕಾರಣ ಬಿಲ್ ಬರೆದು, ಸಲ್ಲಿಸದಂತೆ ಗುತ್ತಿಗೆದಾರರು ನಿಗಮದ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

'ಕಾಮಗಾರಿ ಮುಗಿದಿರುವ ಪ್ರಕರಣಗಳಲ್ಲಿ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ₹2,083.23 ಕೋಟಿ ಬಿಡುಗಡೆಗೆ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಿ ಆರು ತಿಂಗಳಾಗಿದೆ. ಇದುವರೆಗೂ ಅನುದಾನ ಬಿಡುಗಡೆಯಾಗಿಲ್ಲ' ಎಂದು ವಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣರಾವ್ ಪೇಶ್ವೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕೇವಲ ₹ 280 ಕೋಟಿ ಬಿಡುಗಡೆ?: ಬೃಹತ್ ಮೊತ್ತದ ಬಿಲ್‌ಗಳು ಬಾಕಿ ಇದ್ದರೂ ಎತ್ತಿನಹೊಳೆ ಯೋಜನಾ ವಿಭಾಗಕ್ಕೆ ಕೇವಲ ₹ 280 ಕೋಟಿ ಬಿಡುಗಡೆಗೆ ಹಣಕಾಸು ಇಲಾಖೆ ಸಮ್ಮತಿಸಿದೆ. ಒಂದೆರಡು ದಿನಗಳಲ್ಲಿ ನಿಗಮಕ್ಕೆ ಅನುದಾನ ಬಿಡುಗಡೆಯಾಗಲಿದ್ದು, ಗುತ್ತಿಗೆದಾರರ ನಡುವೆ ಹಂಚಿಕೆಗೆ ಸೂತ್ರ ರೂಪಿಸಲು ನಿಗಮದ ಅಧಿಕಾರಿಗಳು ಪ್ರಯಾಸಪಡುತ್ತಿದ್ದಾರೆ.

ಬೇಕಿದೆ ₹ 11,428 ಕೋಟಿ

ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸಲು ಈಗ ಬಾಕಿ ಇರುವ ಬಿಲ್ ಮೊತ್ತವೂ ಸೇರಿದಂತೆ ಇನ್ನೂ ₹ 11,428.54 ಕೋಟಿ ಅನುದಾನ ಅಗತ್ಯವಿದೆ ಎಂಬ ಮಾಹಿತಿಯನ್ನು ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಿದ್ದಾರೆ.

ಯೋಜನೆಗೆ ಅಗತ್ಯವಿರುವ ಜಮೀನು ಸ್ವಾಧೀನಪಡಿಸಿಕೊಳ್ಳಲು ₹ 1,301.06 ಕೋಟಿ, ಬಿಲ್ ಬರೆಯಬೇಕಿರುವುದು ಮತ್ತು ಬಾಕಿ ಇರುವ ಕಾಮಗಾರಿಗಳಿಗೆ ಒಟ್ಟು ₹ 8,044.25 ಕೋಟಿ ಹಾಗೂ ಆರು ತಿಂಗಳ ಹಿಂದೆ ಸಲ್ಲಿಸಿರುವ ಬಿಲ್ ಬಾಬ್ತು ₹ 2,083.23 ಕೋಟಿ ಅನುದಾನದ ಅಗತ್ಯವಿದೆ ಎಂದು ವಿಜೆಎನ್‌ಎಲ್ ಅಧಿಕಾರಿಗಳು ಬೇಡಿಕೆ ಮಂಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾರ್ಮಿಕರ ಶೆಡ್‌ಗಳೂ ಖಾಲಿ, ಖಾಲಿ

ಎತ್ತಿನಹೊಳೆ ಯೋಜನೆಯ ಕಾಮಗಾರಿಗಳ ಸ್ಥಳಗಳಲ್ಲಿ ಶೆಡ್‌ಗಳನ್ನು ನಿರ್ಮಿಸಿ ಕಾರ್ಮಿಕರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈಗ ಬಹುತೇಕ ಶೆಡ್‌ಗಳು ಖಾಲಿಯಾಗಿವೆ. ಕೆಲವೆಡೆ ಬೆರಳೆಣಿಕೆಯ ಭದ್ರತಾ ಸಿಬ್ಬಂದಿ ಮಾತ್ರ ಇದ್ದಾರೆ. ಕಾರ್ಮಿಕರನ್ನು ವಾಪಸ್ ಕರೆಸಿ, ಕೆಲಸ ಪುನರಾರಂಭಿಸುವಂತೆ ಗುತ್ತಿಗೆದಾರರನ್ನು ಮನವೊಲಿಸಲು ವಿಜೆಎನ್‌ಎಲ್ ಅಧಿಕಾರಿಗಳು ನಡೆಸಿದ ಪ್ರಯತ್ನವೂ ಫಲ ನೀಡಿಲ್ಲ.

ಐಪಿಒಗೆ ಅರ್ಜಿ ಸಲ್ಲಿಸಿದ ಎಲ್‌ಐಸಿ

ನವದೆಹಲಿ (ರಾಯಿಟರ್ಸ್/ಪಿಟಿಐ): ಕೇಂದ್ರ ಸರ್ಕಾರದ ಮಾಲೀಕತ್ವದ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತನ್ನ ಶೇಕಡ 5ರಷ್ಟು ಷೇರುಗಳನ್ನು ಐಪಿಒ ಮೂಲಕ ಮಾರಾಟ ಮಾಡಲು ಅನುಮತಿ ಕೋರಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಅರ್ಜಿ ಸಲ್ಲಿಸಿದೆ.

10

ಒಳ ಪುಟ

ಪಂಚಮಸಾಲಿ ಸಮಾಜದ ಮೂರನೇ ಪೀಠ ಅಸ್ತಿತ್ವಕ್ಕೆ 8

ಹೈಕೋರ್ಟ್ ಆದೇಶ ಪಾಲನೆಗೆ ಸೂಚನೆ

ಪ್ರೌಢಶಾಲೆ ಇಂದಿನಿಂದ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ 9 ಮತ್ತು 10ನೇ ತರಗತಿಗಳು ಸೋಮವಾರ (ಫೆ. 14) ಮತ್ತೆ ಆರಂಭವಾಗಲಿದೆ. ಆದರೆ, ಪದವಿಪೂರ್ವ ಮತ್ತು ಪದವಿ ಕಾಲೇಜುಗಳಿಗೆ ಮಂಗಳವಾರದ ವರೆಗೆ ರಜೆ ವಿಸ್ತರಿಸಲಾಗಿದೆ. ಶಾಲಾ–ಕಾಲೇಜುಗಳಲ್ಲಿ ಹಿಜಾಬ್– ಕೇಸರಿ ಶಾಲು ವಿವಾದ ಭುಗಿಲೆದ್ದ ಕಾರಣ ರಜೆ ಘೋಷಿಸಲಾಗಿತ್ತು.

ಈ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಸಮನ್ವಯದಿಂದ, ಸೌಹಾರ್ದದ ವಾತಾವರಣ ಮೂಡಿಸಲು ಶಾಲೆಗಳಿಗೆ ಭೇಟಿ ನೀಡಬೇಕು, ಶಾಂತಿ ಸಭೆಗಳನ್ನು ನಡೆಸಬೇಕು ಎಂದು ಸರ್ಕಾರ ಸೂಚಿಸಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

ಪ್ರೌಢಶಾಲೆಗಳಲ್ಲಿ ತರಗತಿಗಳು ಶಾಂತಿಯುತವಾಗಿ ನಡೆಯುವ ವಿಶ್ವಾಸವಿದೆ. ಪರಿಸ್ಥಿತಿ ಅವಲೋಕಿಸಿ ಪಿಯು, ಪದವಿ ಕಾಲೇಜುಗಳನ್ನು ಆರಂಭಿಸುವ ಬಗ್ಗೆ ತೀರ್ಮಾನಿಸಲಾಗುವುದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ದಾಖಲಾಗಿರುವ ರಿಟ್ ಅರ್ಜಿಗಳ ವಿಚಾರಣೆ ಇತ್ಯರ್ಥ ಆಗುವತನಕ ವಿದ್ಯಾರ್ಥಿಗಳು ಕೇಸರಿ ಶಾಲು, ಹಿಜಾಬ್ ಧರಿಸಿ ತರಗತಿಗಳಿಗೆ ಪ್ರವೇಶಿಸುವಂತಿಲ್ಲ. ಧಾರ್ಮಿಕ ಸಂಕೇತದ ಬಾವುಟಗಳನ್ನು ಪ್ರದರ್ಶನ ಮಾಡುವಂತಿಲ್ಲ' ಎಂದು ಹೈಕೋರ್ಟ್ ಮಧ್ಯಂತರ ಆದೇಶದಲ್ಲಿ ಸ್ಪಷ್ಟಪಡಿಸಿದೆ. ವಿಚಾರಣೆ ಫೆ. 14 ರಂದು ಮುಂದುವರಿಯಲಿದೆ.

ಸರ್ಕಾರದ ಸೂಚನೆಯ ಅನ್ವಯ, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಆಯಾ ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ. ಶಿಕ್ಷಣ ಇಲಾಖೆ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಪೊಲೀಸ್ ಇಲಾಖೆ ಸಹಕಾರದಲ್ಲಿ ತರಗತಿಗಳನ್ನು ಆರಂಭಿಸಬೇಕು. ಶಾಲೆಗಳಲ್ಲಿ ಶಾಂತಿ ಕಾಪಾಡಲು ಪೋಷಕರ ಹಾಗೂ ಶಾಲಾ ಮೇಲುಸ್ತುವಾರಿ ಅಭಿವೃದ್ಧಿ ಸಮಿತಿಯ (ಎಸ್‌ಡಿಎಂಸಿ) ಸಭೆ ನಡೆಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಬೇಕು ಎಂದು ತಿಳಿಸಿದ್ದಾರೆ.

8ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 8

ಆರೋಗ್ಯ ಇಲಾಖೆ ಗುತ್ತಿಗೆ ನೌಕರರ ಮುಷ್ಕರ ಇಂದಿನಿಂದ

ಬೆಂಗಳೂರು: ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 30 ಸಾವಿರ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಸಮಾನ ವೇತನ, ಸೇವಾ ಭದ್ರತೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸೋಮವಾರದಿಂದ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

4

ಐಪಿಎಲ್ ಹರಾಜು: ಕೊನೆಯ ದಿನ ವಿದೇಶಿಗರ ಪಾರುಪತ್ಯ

ಬೆಂಗಳೂರು: ಐಪಿಎಲ್ ಟೂರ್ನಿಯ ಮೆಗಾ ಹರಾಜಿನ ಎರಡನೇ ದಿನ ದೊಡ್ಡ ಮೊತ್ತ ಗಳಿಸುವ ಅದೃಷ್ಟ ವಿದೇಶಿ ಆಟಗಾರರದ್ದಾಯಿತು. ಮೊದಲ ದಿನ ಇಶಾನ್ ಕಿಶನ್ ಸೇರಿದಂತೆ ಭಾರತದ ಆಟಗಾರರೇ ಸಿಂಹಪಾಲು ಪಡೆದಿದ್ದರು. ಭಾನುವಾರ ಇಂಗ್ಲೆಂಡ್ ಆಟಗಾರ ಲಿಯಾಮ್ ಲಿವಿಂಗ್‌ಸ್ಟೋನ್ ಸೇರಿದಂತೆ ಪ್ರಮುಖ ವಿದೇಶಿ ಆಟಗಾರರು ದೊಡ್ಡ ಮೊತ್ತ ಗಳಿಸಿದರು.

ಮೇ ತಿಂಗಳಲ್ಲಿ 5ಜಿ ಹರಾಜು? 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸರ್ಕಾರದ ಮೇಲೆ ಮುಗಿಬೀಳಲು ಪ್ರತಿಪಕ್ಷಗಳು ಸಜ್ಜು

ಇಂದಿನಿಂದ ವಿಧಾನಮಂಡಲ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಈ ಸಾಲಿನ ಮೊದಲ ಅಧಿವೇಶನ ಸೋಮವಾರ ಆರಂಭವಾಗಲಿದ್ದು, ಹತ್ತು ದಿನಗಳ ಕಲಾಪದಲ್ಲಿ ಸರ್ಕಾರದ ಮೇಲೆ ಮುಗಿಬೀಳಲು ವಿರೋಧಪಕ್ಷಗಳು ಸಜ್ಜಾಗಿವೆ. ಹಿಜಾಬ್– ಕೇಸರಿ ಶಾಲು ವಿವಾದ, ಕಾನೂನು ಸುವ್ಯವಸ್ಥೆ ವೈಫಲ್ಯ, ಸರ್ಕಾರಿ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ಆರೋಪ ಸೇರಿದಂತೆ ಹಲವು ವಿಷಯಗಳು ಸದನದಲ್ಲಿ ಸದ್ದುಮಾಡುವ ಸಾಧ್ಯತೆ ಇದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಇದು ಮೊದಲ ಅಧಿವೇಶನ. ಸೋಮವಾರ ಬೆಳಿಗ್ಗೆ 11ಕ್ಕೆ ಜಂಟಿ ಅಧಿವೇಶನ ಉದ್ದೇಶಿಸಿ ಅವರು ಮಾತನಾಡುವರು. ಮಂಗಳವಾರದಿಂದ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ, ಪ್ರಶ್ನೋತ್ತರ ಸೇರಿದಂತೆ ದೈನಂದಿನ ಕಲಾಪಗಳು ನಡೆಯಲಿವೆ.

ಶಾಲೆ ಮತ್ತು ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಪ್ರವೇಶಿಸಲು ಅವಕಾಶ ನಿರಾಕರಿಸಿದ ನಂತರದ ಬೆಳವಣಿಗೆಗಳು, ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ತರಗತಿಗೆ ಬರಲು ಅವಕಾಶ ಕೋರಿ ಬೇಡಿಕೆ ಇಟ್ಟಿರುವುದು, ಇದೇ ವಿಚಾರದಲ್ಲಿ ರಾಜ್ಯದ ವಿವಿಧೆಡೆ ಹಿಂಸಾಚಾರ ನಡೆದಿರುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಕಾಂಗ್ರೆಸ್ ಮತ್ತು ಜೆಡಿಎಸ್ ಸಜ್ಜಾಗಿವೆ.

ಶಾಲೆ, ಕಾಲೇಜುಗಳಲ್ಲಿ 'ವಸ್ತ್ರ ರಾಜಕೀಯ'ದ ವಿವಾದವು ಮೊದಲ ದಿನದಿಂದಲೇ ವಿಧಾನಮಂಡಲದಲ್ಲಿ ಪ್ರತಿಧ್ವನಿಸುವ ಸಾಧ್ಯತೆ ಇದೆ. ಕೋವಿಡ್ ಮಾರ್ಗಸೂಚಿಗಳ ಪಾಲನೆ, ಮೇಕೆದಾಟು ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪಾದಯಾತ್ರೆ ಸಂದರ್ಭದ ಘಟನಾವಳಿಗಳನ್ನೂ ಸದನದಲ್ಲಿ ಪ್ರಸ್ತಾಪಿಸಿ, ವಾಗ್ದಾಳಿ ನಡೆಸುವುದಕ್ಕೆ ಕಾಂಗ್ರೆಸ್ ಸಿದ್ಧತೆ ಮಾಡಿಕೊಂಡಿದೆ.

ಸರ್ಕಾರದ ವಿವಿಧ ಕಾಮಗಾರಿಗಳ ಗುತ್ತಿಗೆ ಮೊತ್ತದಲ್ಲಿ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮಾಡಿರುವ ಆರೋಪದ ಕುರಿತು ಬೆಳಗಾವಿಯಲ್ಲಿ ನಡೆದಿದ್ದ ಅಧಿವೇಶನದಲ್ಲಿ ಹೆಚ್ಚು ಚರ್ಚೆಯಾಗಿರಲಿಲ್ಲ.

8ನೇ ಪುಟ ನೋಡಿ



ಪ್ರವಾಹ ನಿಯಂತ್ರಣಕ್ಕಾಗಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿ • ಹಣಕಾಸು ಲಭ್ಯತೆ ಇಲ್ಲದ ಕಾರಣ ಅನುದಾನಕ್ಕೆ ಕತ್ತರಿ

ಹೇಳಿದ್ದು ₹1,556 ಕೋಟಿ, ನೀಡುವುದು ₹411 ಕೋಟಿ!

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಪ್ರವಾಹ ಉಂಟಾಗುವುದನ್ನು ತಪ್ಪಿಸಲು ರಾಜ ಕಾಲುವೆ ಅಭಿವೃದ್ಧಿಗಾಗಿ ₹1,556.15 ಕೋಟಿ ನೀಡುವುದಾಗಿ ಭರವಸೆ ನೀಡಿದ್ದ ಸರ್ಕಾರ ಸದ್ಯಕ್ಕೆ ಈ ಉದ್ದೇಶಕ್ಕೆ ₹411.31 ಕೋಟಿಯನ್ನು ಮಾತ್ರ ಬಳಸಿಕೊಳ್ಳಲು ಸಿದ್ಧತೆ ನಡೆಸಿದ್ದು, ಇದು ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ.

2021ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ನಗರದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಅನೇಕ ಕಡೆಗಳಲ್ಲಿ ಪ್ರವಾಹ ಉಂಟಾಗಿತ್ತು. ತಗ್ಗು ಪ್ರದೇಶಗಳು ಜಲಾವೃತಗೊಂಡು ಮನೆಗಳಿಗೂ ಹಾನಿ ಉಂಟಾಗಿತ್ತು. ಹಲವೆಡೆ ರಾಜಕಾಲುವೆಗಳ ತಡೆಗೋಡೆಗಳು ಶಿಥಿಲಗೊಂಡಿದ್ದವು.

ರಾಜಕಾಲುವೆಗಳನ್ನು ಬಲಪಡಿಸುವ ಕಾಮಗಾರಿಗಳಿಗೆ ₹1,479.55 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಗೆ ಆರಂಭದಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಇದರಲ್ಲಿ ಬಿಟಿಎಂ ಬಡಾವಣೆ ಮತ್ತು ಜಯನಗರ ಕ್ಷೇತ್ರಗಳ ರಾಜಕಾಲುವೆಗಳ ಅಭಿವೃದ್ಧಿಯ ಪ್ರಸ್ತಾವಗಳು ಇರಲಿಲ್ಲ. ಬಳಿಕ ಬಿಟಿಎಂ ಬಡಾವಣೆಗೆ ₹ 35 ಕೋಟಿ ಹಾಗೂ ಜಯನಗರಕ್ಕೆ ₹41.50 ಕೋಟಿ ಸೇರಿಸಿ ಒಟ್ಟು ₹ 1,556.15 ಕೋಟಿ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಪರಿಷ್ಕೃತ ಪ್ರಸ್ತಾವವನ್ನು ಬಿಬಿಎಂಪಿ ಸಿದ್ಧಪಡಿಸಿತ್ತು.

61.32 ಕಿ.ಮೀ ಪ್ರಥಮ ಹಂತದ ರಾಜಕಾಲುವೆಗಳು ಹಾಗೂ 104.87 ಕಿ.ಮೀ ಉದ್ದದ ದ್ವಿತೀಯ ಹಂತದ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸುವ 306 ಕಾಮಗಾರಿಗಳ ಅನುಷ್ಠಾನಕ್ಕೆ ಬಿಬಿಎಂಪಿ ಕ್ರಿಯಾಯೋಜನೆ ತಯಾರಿಸಿತ್ತು. ಇದಕ್ಕೆ ಸಚಿವ ಸಂಪುಟ ಅನುಮೋದನೆಯನ್ನೂ ನೀಡಿತ್ತು. ಆದರೆ, ಹಣಕಾಸು ಲಭ್ಯತೆ ಇಲ್ಲದ ಕಾರಣಕ್ಕೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ಮೇರೆಗೆ ಈ ಅನುದಾನಕ್ಕೆ ಕತ್ತರಿ ಹಾಕಲು ಸರ್ಕಾರ ಸಿದ್ಧತೆ ನಡೆಸಿದೆ ಎಂದು ಗೊತ್ತಾಗಿದೆ.

ರಾಜಕಾಲುವೆ ದುರಸ್ತಿಗೆ ಸಂಬಂಧಿಸಿದ ಪ್ರಸ್ತಾವ ಸಲ್ಲಿಸುವ ಸಂದರ್ಭದಲ್ಲಿ ಕೆಲವು ಕ್ಷೇತ್ರಗಳಲ್ಲಿ ಅವಶ್ಯಕತೆಗಿಂತಲೂ ಅಧಿಕ ಮೊತ್ತಕ್ಕೆ ಅಂದಾಜುಪಟ್ಟಿ ತಯಾರಿಸಲಾಗಿತ್ತು. ಬಿಜೆಪಿಯ ಶಾಸಕರು ಪ್ರತಿನಿಧಿಸುವ ಕ್ಷೇತ್ರವೊಂದರಲ್ಲಿ ₹ 20 ಕೋಟಿ ವೆಚ್ಚದಲ್ಲಿ ರಾಜಕಾಲುವೆ ದುರಸ್ತಿ ನಡೆಸಬಹುದಾದ ಕಡೆ ₹ 70 ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗೆ ಅಂದಾಜುಪಟ್ಟಿ ರೂಪಿಸಿದ್ದ ಅಂಶ ಮುಖ್ಯಮಂತ್ರಿಯವರ ಗಮನಕ್ಕೆ ಬಂದಿತ್ತು. ಹಾಗಾಗಿ, ಈ ಬಗ್ಗೆ ಸಮಗ್ರವಾಗಿ ಚರ್ಚಿಸಿ ನಿರ್ಣಯಕ್ಕೆ ಬರುವಂತೆ ನಗರಾಭಿವೃದ್ಧಿ ಇಲಾಖೆಗೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದರು. ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಇದೇ 9ರಂದು ಅಧಿಕಾರಿಗಳ ಉನ್ನತ ಮಟ್ಟದ ಸಭೆ ನಡೆದಿದೆ. ತುರ್ತು ಅವಶ್ಯಕತೆ ಇರುವ ಕಾಮಗಾರಿಗಳನ್ನಷ್ಟೇ ಈ ವರ್ಷ ಕೈಗೊಂಡು, ಉಳಿದವುಗಳನ್ನು ಮುಂದಿನ ವರ್ಷಗಳಲ್ಲಿ ಕೈಗೆತ್ತಿಕೊಳ್ಳುವ ಬಗ್ಗೆ ಈ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪರಿಷ್ಕೃತ ಪಟ್ಟಿಯ ಪ್ರಕಾರ ಬಿಟಿಎಂ ಬಡಾವಣೆ, ಬಸವನಗುಡಿ, ಚಾಮರಾಜಪೇಟೆ, ಜಯನಗರ, ಗೋವಿಂದರಾಜನಗರ, ಪದ್ಮನಾಭನಗರ, ರಾಜಾಜಿನಗರ, ಶಿವಾಜಿನಗರ ಹಾಗೂ ಆನೇಕಲ್ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸದ್ಯಕ್ಕೆ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳದೇ ಇರಲು ನಿರ್ಧರಿಸಲಾಗಿದೆ ಎಂದು ಗೊತ್ತಾಗಿದೆ.

> **ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಅಭಿವೃದ್ಧಿಗೆ ಈ ವರ್ಷದಲ್ಲಿ ಎಷ್ಟು ಅನುದಾನ ನೀಡಬೇಕು ಎಂಬ ಕುರಿತು ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲ**
> **ರಾಕೇಶ್ ಸಿಂಗ್,** ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ರಾಜಕಾಲುವೆ ದುರಸ್ತಿ ಅನುದಾನ ವಿವರ (₹ಕೋಟಿಗಳಲ್ಲಿ)

ಕ್ಷೇತ್ರ	ಹಿಂದಿನ ಪ್ರಸ್ತಾವ	ಪರಿಷ್ಕೃತ ಪ್ರಸ್ತಾವ
ಸರ್ವಜ್ಞನಗರ	63.02	30.72
ಶಾಂತಿನಗರ	3	3.53
ಶಿವಾಜಿನಗರ	7.02	0
ಹೆಬ್ಬಾಳ	21.34	50
ಪುಲಕೇಶಿನಗರ	5.20	7.50
ಗಾಂಧಿನಗರ	2.10	0.17
ಚಾಮರಾಜಪೇಟೆ	9.80	0
ವಿಜಯನಗರ	77.71	25.71
ಬ್ಯಾಟರಾಯನಪುರ	59.10	26.30
ಬಿಟಿಎಂ ಬಡಾವಣೆ	35	0
ಜಯನಗರ	41.50	0
ಯಲಹಂಕ	105	90
ಕೆ.ಆರ್.ಪುರ	94.70	3.75
ಮಹದೇವಪುರ	95	2.50
ಬೊಮ್ಮನಹಳ್ಳಿ	200	2.50
ಬೆಂಗಳೂರು ದಕ್ಷಿಣ	151.30	2.80
ಯಶವಂತಪುರ	82.87	63
ರಾಜರಾಜೇಶ್ವರಿ ನಗರ	171.34	77.35
ಸಿ.ವಿ.ರಾಮನ್ ನಗರ	88.43	7.75
ಮಹಾಲಕ್ಷ್ಮಿ ಬಡಾವಣೆ	2.75	0.25
ಮಲ್ಲೇಶ್ವರ	2.90	0.98
ರಾಜಾಜಿನಗರ	5.10	0
ಗೋವಿಂದ ರಾಜನಗರ	50	0
ಬಸವನಗುಡಿ	22.50	0
ಪದ್ಮನಾಭನಗರ	22.50	0
ಚಿಕ್ಕಪೇಟೆ	11	1.70
ದಾಸರಹಳ್ಳಿ	125.85	14.80

'ರಾಜಕಾಲುವೆ ದುರಸ್ತಿ: ಅನುದಾನ ಕಡಿತ ಸರಿಯಲ್ಲ'

ಕಳೆದ ಮಳೆಗಾಲದಲ್ಲಿ ದಾಸರಹಳ್ಳಿ ಕ್ಷೇತ್ರದಲ್ಲಿ ಮೂರು– ನಾಲ್ಕು ಬಾರಿ ಪ್ರವಾಹ ಉಂಟಾಗಿ ಸಾವಿರಾರು ಮನೆಗಳಿಗೆ ಹಾನಿ ಉಂಟಾಗಿತ್ತು. ರಾಜಕಾಲುವೆಗಳು ಸಮರ್ಪಕವಾಗಿಲ್ಲದಿರುವುದೇ ಈ ಅನಾಹುತಕ್ಕೆ ಪ್ರಮುಖ ಕಾರಣ. ಇದನ್ನು ಆಧರಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ನಮ್ಮ ಕ್ಷೇತ್ರದ ರಾಜಕಾಲುವೆ ದುರಸ್ತಿಗೆ ತುರ್ತಾಗಿ ₹ 125 ಕೋಟಿ ಅನುದಾನ ಒದಗಿಸುವಂತೆ ಬಿಬಿಎಂಪಿ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದರು. ಇದಕ್ಕೆ ಸರ್ಕಾರ ಒಪ್ಪಿಗೆಯನ್ನೂ ಸೂಚಿಸಿತ್ತು. ಕೆಲವು ಕಾಮಗಾರಿಗಳಿಗೆ ಟೆಂಡರ್ ಕೂಡಾ ಆಹ್ವಾನಿಸಿದ್ದರು. ಈ ಹಂತದಲ್ಲಿ ಅನುದಾನವನ್ನು ₹ 15 ಕೋಟಿಗೆ ಕಡಿತ ಮಾಡುವ ಸರ್ಕಾರದ ನಡೆ ಸರಿಯಲ್ಲ. ಈ ಬಗ್ಗೆ ವಿಧಾನ ಮಂಡಲ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇನೆ.

ಆರ್.ಮಂಜುನಾಥ್, ಶಾಸಕರು, ದಾಸರಹಳ್ಳಿ

'ರಾಜಕಾಲುವೆ ಅಭಿವೃದ್ಧಿಗೆ ಆದ್ಯತೆ ನೀಡಬೇಕು'



ಪ್ರವಾಹ ಉಂಟಾಗುವ ಸಮಸ್ಯೆ ನೀಗಿಸಲು ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕಿದೆ. ಅನುದಾನ ಕಡಿತ ಮಾಡುವ ಮೂಲಕ ಈ ಸರ್ಕಾರ ಅದರಲ್ಲೂ ರಾಜಕೀಯ ಮಾಡಲು ಹೊರಟಿದೆ. ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ ಎನ್ನುವ ಮುಖ್ಯಮಂತ್ರಿಯವರು ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಅನುದಾನ ಹಂಚಿಕೆಯ ಪರಿಷ್ಕೃತ ಪಟ್ಟಿಯಲ್ಲಿ ಆಡಳಿತ ಪಕ್ಷದ ಕೆಲವೇ ಶಾಸಕರಿಗೆ ಬಹುಪಾಲು ಅನುದಾನ ಮೀಸಲಿಟ್ಟಿದ್ದಾರೆ. ಇದರಿಂದಾಗಿ ಬೆಂಗಳೂರಿನ ಅಭಿವೃದ್ಧಿ ಹಿನ್ನಡೆ ಆಗಲಿದೆ. ಜನರು ಸಮಸ್ಯೆಯಿಂದ ನರಳುವುದು ಮುಂದುವರಿಯಲಿದೆ.

ಕೃಷ್ಣ ಬೈರೇಗೌಡ, ಶಾಸಕ, ಬ್ಯಾಟರಾಯನಪುರ

'ಗೊಂದಲವನ್ನು ಮುಖ್ಯಮಂತ್ರಿಯವರೇ ಸರಿಪಡಿಸಲಿ'

ಮುಖ್ಯಮಂತ್ರಿಯವರು ಇತ್ತೀಚೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ನಗರದ ಶಾಸಕರ ಜೊತೆ ಸಭೆ ನಡೆಸಿದ್ದರು. ರಾಜಕಾಲುವೆ ಅಭಿವೃದ್ಧಿಗೆ ₹ 1,556 ಕೋಟಿ ವೆಚ್ಚದ ವಿಸ್ತೃತ ಯೋಜನೆ ಸಿದ್ಧಪಡಿಸಿರುವ ಬಗ್ಗೆ ಸ್ವತಃ ಮುಖ್ಯಮಂತ್ರಿ ಅವರೇ ಆ ಸಭೆಯಲ್ಲಿ ಮಾಹಿತಿ ನೀಡಿದ್ದರು. ಇದೀಗ ಕೆಲವು ಅಧಿಕಾರಿಗಳು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಈ ಗೊಂದಲವನ್ನು ಮುಖ್ಯಮಂತ್ರಿಯವರು ಸರಿಪಡಿಸುತ್ತಾರೆಎಂಬ ವಿಶ್ವಾಸ ಇದೆ.

ಸತೀಶ್ ರೆಡ್ಡಿ, ಶಾಸಕ, ಬೊಮ್ಮನಹಳ್ಳಿ ಕ್ಷೇತ್ರ

'ಬಿಜೆಪಿ ಜನರಿಗೆ ದ್ವೇಷ ಕಲಿಸುತ್ತಿದೆ'

ಹೈದರಾಬಾದ್: 'ಕರ್ನಾಟಕ ಸೇರಿದಂತೆ ಇತರೆ ರಾಜ್ಯದ ಜನರಿಗೆ ಬಿಜೆಪಿ ದ್ವೇಷ ಕಲಿಸುತ್ತಿದೆ. ದೇವರ ಹೆಸರಿನಲ್ಲಿ ಯುವ ಮನಸ್ಸುಗಳನ್ನು ಭ್ರಷ್ಟಗೊಳಿಸುತ್ತಿದೆ' ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ದೂರಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಅಧಿಕಾರದಲ್ಲಿ ಹೀಗೆಯೇ ಮುಂದುವರಿದರೆ, ನಮ್ಮ ದೇಶ ಹಾಳಾಗಬಹುದು. ಈ ಕೋಮು ಬೆಂಕಿ (ಹಿಜಾಬ್–ಕೇಸರಿ ವಿವಾದ) ದೇಶದೆಲ್ಲೆಡೆ ಹಬ್ಬಿದರೆ ಪರಿಸ್ಥಿತಿ ಹೇಗಿರಬಹುದು? ನಮಗೆ ಅಭಿವೃದ್ಧಿ, ಬಂಡವಾಳಗಳ ಅಗತ್ಯವಿದೆಯೇ ಹೊರತು ಕೋಮು ಗಲಭೆಗಳಲ್ಲ' ಎಂದರು.

'ಮುಂದೆ ಏನಾಗುತ್ತದೆ ಎಂಬುದನ್ನು ಈಗಾಗಲೇ ಹೇಳಲು ಸಾಧ್ಯವಿಲ್ಲ. ಆದರೆ, ಬಿಜೆಪಿಯನ್ನು ಹೊಡೆದೋಡಿಸಲು ಎಲ್ಲಾ ರಾಜಕೀಯ ಶಕ್ತಿಗಳು ಒಗ್ಗೂಡಬೇಕು' ಎಂದು ಹೇಳಿದರು.

'ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಭೇಟಿಯಾಗಲು ನಾನು ಯಾವುದೇ ಸಮಯ ಮುಂಬೈಗೆ ತೆರಳಬಹುದು. ಅಲ್ಲದೆ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೂಡ ಹೈದರಾಬಾದ್‌ಗೆ ಭೇಟಿ ನೀಡುವ ಸಾಧ್ಯತೆಗಳಿವೆ' ಎಂದು ತಿಳಿಸಿದರು.

ಕೋವಿಡ್: ಹೊಸ ಪ್ರಕರಣ 2,372ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. 24 ಗಂಟೆಗಳ ಅವಧಿಯಲ್ಲಿ 2,372 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಈ ಸಂಖ್ಯೆ ಕಳೆದ ತಿಂಗಳು 50 ಸಾವಿರದ ಗಡಿ ದಾಟಿತ್ತು. ಈ ತಿಂಗಳು ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದೆ. ಒಂದು ದಿನದ ಅವಧಿಯಲ್ಲಿ 1.02 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 2.31 ರಷ್ಟು ವರದಿಯಾಗಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 39.26 ಲಕ್ಷಕ್ಕೆ ಏರಿಕೆಯಾಗಿದೆ.

ಎರಡು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿ, 23 ಜಿಲ್ಲೆಗಳಲ್ಲಿ ಎರಡು ಅಂಕಿಯಲ್ಲಿ ಇದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 1,059 ಮಂದಿ ಸೋಂಕಿತರಾಗಿದ್ದಾರೆ. ಮೈಸೂರಿನಲ್ಲಿ 148 ಹಾಗೂ ಬಳ್ಳಾರಿಯಲ್ಲಿ 112 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100 ಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 2,501 ಮಂದಿ ಸೇರಿದಂತೆ ರಾಜ್ಯದಲ್ಲಿ 5,395 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.51 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 35,697ಕ್ಕೆ ಇಳಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 27 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಏಳು, ಮೈಸೂರಿನಲ್ಲಿ ನಾಲ್ವರು, ದಕ್ಷಿಣ ಕನ್ನಡದಲ್ಲಿ ಮೂವರು, ತುಮಕೂರು, ಧಾರವಾಡ ಹಾಗೂ ದಾವಣಗೆರೆಯಲ್ಲಿ ತಲಾ ಇಬ್ಬರು, ಬಾಗಲಕೋಟೆ, ಹಾವೇರಿ, ಕಲಬುರಗಿ, ಕೊಡಗು, ಉಡುಪಿ, ವಿಜಯಪುರ ಹಾಗೂ ಯಾದಗಿರಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 1.13ಕ್ಕೆ ಏರಿಕೆಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,640ಕ್ಕೆ ತಲುಪಿದೆ.







ಚಿತ್ರಾವಳಿ

ಉದಯಭಾನು ಕಲಾಸಂಘವು ನಾರಾಯಣ ನೇತ್ರಾಲಯದ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಕಣ್ಣಿನ ಪೊರೆ ಉಚಿತ ಶಸ್ತ್ರಚಿಕಿತ್ಸೆ ಶಿಬಿರವನ್ನು ಸ್ವರ್ಣಭಾರತಿ ಸಹಕಾರ ಬ್ಯಾಂಕಿನ ಅಧ್ಯಕ್ಷ ವೆಂಕಟರಾಮ ರೆಡ್ಡಿ ಉದ್ಘಾಟಿಸಿದರು. ವೈದ್ಯೆ ರಿಖಿತ ಮುಖರ್ಜಿ, ಶಿಬಿರದ ಸಂಯೋಜಕ ಸುಭಾಷ್, ಸಂಘದ ಕಾರ್ಯಾಧ್ಯಕ್ಷ ಬಿ.ಎಸ್.ಸತ್ಯನಾರಾಯಣ, ಕಾರ್ಯದರ್ಶಿ ನರಸಿಂಹ, ಸಹಾಯಕ ಕಾರ್ಯದರ್ಶಿ ಕೆ.ಎನ್.ಸೋಮಶೇಖರ್ ಇದ್ದಾರೆ.



ಕೊಡಿಗೇಹಳ್ಳಿಯಲ್ಲಿ ನೂತನ ಡಿಜಿಟಲ್ ಗ್ರಂಥಾಲಯವನ್ನು ಉದ್ಘಾಟಿಸಿದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಡಾ.ಎನ್. ನಂಜುಂಡೇಶ್ ಪುಸ್ತಕಗಳನ್ನು ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ದೇವರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್. ಭಾಗೀರಥಿ, ಸದಸ್ಯರಾದ ಸಿದ್ದಲಿಂಗಸ್ವಾಮಿ, ಕೋಮಲ ಇದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

AUTOMOTIVE
Four Wheelers Buying
Others

AUDI : NOW IS YOUR CHANCE
Drive Home your Dream AUDI!
The Audi A3, A4, A6, and the Audi Q3, Q5 & Q7
Mileage: Less driven cars
HURRY FOR NEVER BEFORE OFFERS!!
Call : +91 99008 33557
Avail 310 check points and warranty!!

Graphic Designers
WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Part-Time Jobs
WORK FROM Home, Earn 30- 50K per month. Age:32+, PUC and above. Malleshwaram. 7899493370

BUSINESS
Business Offers
Finance
NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

JOB OPPORTUNITIES
Accounts & Finance
WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Multiple Vacancy
REQUIRED, TEAMLEADER, Telecaller, Backend & Field executive For Banking Loan collection (salary upto 20,000- 25,000). Direct recruitment to company Contact: 9620206756, 9620200756.

WANTED BUSINESS Partner Non Veg Hotel 10 Lakhs Investment Monthly Income 2.5 Lakhs: 9606701007/ 8892501007

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact: 9880856233 /9845114560 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸಂಕ್ಷಿಪ್ತ ಸುದ್ದಿ

ಫೆ.19ಕ್ಕೆ ಧರ್ಮಸ್ಥಳಕ್ಕೆ ಪಾದಯಾತ್ರೆ

ಬೆಂಗಳೂರು: ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸಮಿತಿಯು ಶಿವರಾತ್ರಿ ಅಂಗವಾಗಿ ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಇದೇ 19ರಿಂದ ಪಾದಯಾತ್ರೆ ಹಮ್ಮಿಕೊಂಡಿದೆ.

19ರ ಮುಂಜಾನೆ 3.15 ಗಂಟೆಗೆ ಬೆಂಗಳೂರಿನಿಂದ ಪಾದಯಾತ್ರೆ ಆರಂಭಗೊಳ್ಳಲಿದೆ. ನೆಲಮಂಗಲ, ಕುಣಿಗಲ್, ಹಿರಿಸಾವೆ, ಬೇಲೂರು, ಕೊಟ್ಟಿಗೆಹಾರ, ಚಾರ್ಮಾಡಿ ಮಾರ್ಗವಾಗಿ ಫೆ.27ಕ್ಕೆ ಧರ್ಮಸ್ಥಳ ತಲುಪಲಿದೆ.

'ಭಜನೆ ಮಾಡುತ್ತಾ ಪಾದಯಾತ್ರೆ ಸಾಗಲಿದೆ. ಪಾದಯಾತ್ರೆಯಲ್ಲಿ ಭಾಗವಹಿಸುವವರಿಗೆ ಸಮಿತಿಯಿಂದ ಊಟದ ವ್ಯವಸ್ಥೆಯೂ ಇರಲಿದೆ. ಆಸಕ್ತರು ಫೆ.18ರ ಸಂಜೆ 6 ಗಂಟೆಗೆ ಮಹಾಲಕ್ಷ್ಮಿ ಬಡಾವಣೆಯ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನಕ್ಕೆ ಬಂದು ಸೇರಬೇಕು' ಎಂದು ಸಮಿತಿಯ ಪ್ರಕಟಣೆ ತಿಳಿಸಿದೆ.

ಸಂಪರ್ಕ:9844701158

ರಾಮೋಹಳ್ಳಿ ಗ್ರಾ.ಪಂ: ಉಪಾಧ್ಯಕ್ಷೆಯಾಗಿ ಕುಮಾರಿ ಆಯ್ಕೆ

ರಾಜರಾಜೇಶ್ವರಿ ನಗರ: ರಾಮೋಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಕುಮಾರಿ ಶ್ರೀನಿವಾಸ್ ಅವರು ಅವಿರೋಧವಾಗಿ ಆಯ್ಕೆಯಾದರು. ಹಿಂದೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿದ್ದ ಚಂದ್ರಪ್ಪ ಅವರು ರಾಜೀನಾಮೆ ನೀಡಿದ್ದರಿಂದ ಆ ಸ್ಥಾನ ತೆರವಾಗಿತ್ತು.

ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿಷ್ಣುಕಾಂತ್ ಅವರು ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಕುಮಾರಿ ಶ್ರೀನಿವಾಸ್

ಮಣಿಪಾಲ್ ಆಸ್ಪತ್ರೆ: ಮಹಿಳೆಯರಿಗೆ ವಿಡಿಯೊ ಸಮಾಲೋಚನೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹವು ಮಹಿಳೆಯರಿಗಾಗಿಯೇ ಪ್ರತ್ಯೇಕ ವಿಡಿಯೊ ಸಮಾಲೋಚನೆ ವ್ಯವಸ್ಥೆ ರೂಪಿಸಿದ್ದು, ಇದೇ ಸೋಮವಾರ ಚಾಲನೆ ದೊರೆಯಲಿದೆ.

'ಮಹಿಳೆಯರಿಂದ ಮಹಿಳೆಯರಿಗಾಗಿ' ಎಂಬ ಪರಿಕಲ್ಪನೆಯಡಿ ಈ ಸಮಾಲೋಚನೆ ನಡೆಸಲಾಗುತ್ತದೆ. ಮಹಿಳೆಯರ ಎಲ್ಲ ಅನಾರೋಗ್ಯ ಸಮಸ್ಯೆಗಳಿಗೆ ಮಹಿಳಾ ತಜ್ಞರು ಅಗತ್ಯ ಸಲಹೆ, ಸೂಚನೆಗಳನ್ನು ನೀಡಲಿದ್ದಾರೆ. ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ತಜ್ಞ ವೈದ್ಯರು ಲಭ್ಯವಿರುತ್ತಾರೆ. ಈ ಸೇವೆಗೆ ₹ 250 ನಿಗದಿಪಡಿಸಲಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

ಸಮಾಲೋಚನೆಗೆ ಮೊ. ಸಂಖ್ಯೆ: 89511 46852 ಅಥವಾ 97311 22666

ನಗರದಲ್ಲಿ ಇಂದು

ಗವಿಪುರ ಗೋಸಾಯಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾಗಿ ಮಂಜುನಾಥ ಸ್ವಾಮೀಜಿ ಅವರ ಪಟ್ಟಾಭಿಷೇಕ: ಸಾನ್ನಿಧ್ಯ–ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಪತಂಜಲಿ ಯೋಗಾಶ್ರಮದ ಬಾಬಾ ರಾಮದೇವ್, ಧರ್ಮಸ್ಥಳದ ಡಾ.ಡಿ.ವೀರೇಂದ್ರ ಹೆಗ್ಗಡೆ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಶ್ರೀ ರವಿಶಂಕರ್ ಗುರೂಜಿ, ಸಿದ್ದೇಶ್ವರ ಸ್ವಾಮೀಜಿ, ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಪಿ.ಜಿ.ಆರ್.ಸಿಂಧ್ಯ, ಅತಿಥಿಗಳು–ಬಿ.ಎಸ್.ಯಡಿಯೂರಪ್ಪ, ಸಿದ್ದರಾಮಯ್ಯ, ಸ್ಥಳ–ಮಠದ ಆವರಣ, ಗವಿಪುರ, ಬೆಳಿಗ್ಗೆ 9.30ರಿಂದ ವಿವಿಧ ಕಾರ್ಯಕ್ರಮಗಳು.

100 ಹಾಸಿಗೆಗಳ ಸಾಮರ್ಥ್ಯದ ಕೋವಿಡ್ ಐಸಿಯು ಘಟಕಕ್ಕೆ ಚಾಲನೆ: ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಅತಿಥಿಗಳು–ದೇವಿ ಪ್ರಸಾದ್ ಶೆಟ್ಟಿ, ಸೋಂಜಾಯ್ ಚಟರ್ಜಿ, ಕಿರಣ್ ಮಜುಂದಾರ್ ಶಾ, ಸ್ಥಳ–ನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸಸ್, ಹೊಸೂರು ರಸ್ತೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೆಳಿಗ್ಗೆ 9.30

ಸೌರವ್ ಗಂಗೂಲಿ

ಪುಲ್ವಾಮಾ ಹುತಾತ್ಮರಿಗೆ ಚಿತ್ರನಮನ: ಕಲಾವಿದ ಹರ್ಷ ಅವರಿಂದ ಒಂದು ಗಂಟೆ ಅವಧಿಯಲ್ಲಿ ಹುತಾತ್ಮರ 40 ಚಿತ್ರಗಳ ರಚನೆ, ಅತಿಥಿಗಳು–ಜಿ.ಕೆ.ಗಣಪತಿ ರೆಡ್ಡಿ, ಸುಶೀಲಮ್ಮ, ಹರಿಕೃಷ್ಣ ಮಾರಂ, ಅನ್ವಿತಾ ಬೆಳವಲ್, ಆಯೋಜನೆ–ಬೆಳವಲ್ ಎಜುಕೇಷನ್ ಚಾರಿಟಬಲ್ ಟ್ರಸ್ಟ್, ಸ್ಥಳ–ಸ್ಟೇಫಿಟ್ ಹೆಲ್ತ್ ಆ್ಯಂಡ್ ಫಿಟ್ನೆಸ್ ವರ್ಲ್ಡ್, ಬನ್ನೇರುಘಟ್ಟ ರಸ್ತೆ, ಸಂಜೆ 5

'ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣ ಕಸಿಯುವ ತಂತ್ರ'

ಶ್ರೀನಗರ (ಪಿಟಿಐ): ಹಿಜಾಬ್ ವಿವಾದವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ ಬಿಜೆಪಿ ಮತಗಳ ಧ್ರುವೀಕರಣ ಮಾಡುತ್ತಿದೆ. ಹಿಜಾಬ್ ಅನ್ನು ನಿಷೇಧಿಸುವ ಮೂಲಕ ಮುಸ್ಲಿಂ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ದೂರ ಇಡುವ ಕುತಂತ್ರ ರೂಪಿಸಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಸಿಎಂ ಮೆಹಬೂಬಾ ಮುಫ್ತಿ ಆರೋಪಿಸಿದರು.

ಇಲ್ಲಿ ಮಾತನಾಡಿದ ಅವರು, ಮತಕ್ಕಾಗಿ ದೇಶ ವಿಭಜಿಸಲು ಬಿಜೆಪಿ ಮುಂದಾಗಿದೆ ಎಂದು ದೂರಿದರು.

'ಹಿಜಾಬ್ ವಿವಾದ: ಧಾರ್ಮಿಕ ಭಾವನೆಗಳು, ಸಂವಿಧಾನವನ್ನು ಗೌರವಿಸಿ'

ಶ್ರೀನಗರ (ಪಿಟಿಐ): ದೇಶದ ಪ್ರತಿಯೊಬ್ಬ ನಾಗರಿಕ ಕೂಡ ಇತರರ ಧಾರ್ಮಿಕ ಭಾವನೆಗಳನ್ನು ಮತ್ತು ಸಂವಿಧಾನವನ್ನು ಗೌರವಿಸಬೇಕು ಎಂದು ಜಮ್ಮು–ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹೇಳಿದ್ದಾರೆ.

'ನಾನು ಎರಡು ವಿಚಾರಗಳ ಬಗ್ಗೆ ಹೇಳಲು ಇಚ್ಛಿಸುತ್ತೇನೆ. ಧಾರ್ಮಿಕ ಭಾವನೆಗಳನ್ನು ಗೌರವಿಸಿ ಮತ್ತು ಭಾರತೀಯ ಸಂವಿಧಾನವನ್ನೇ ಪರಮೋಚ್ಛವಾಗಿ ಪರಿಗಣಿಸಿ. ಪ್ರತಿಯೊಬ್ಬ ಭಾರತೀಯನೂ ಈ ಎರಡು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು' ಎಂದು ಅವರು ಹೇಳಿದ್ದಾರೆ.

ಹಿಜಾಬ್ ವಿಚಾರವಾಗಿ ಕರ್ನಾಟಕದಲ್ಲಿ ಸೃಷ್ಟಿಯಾಗಿರುವ ವಿವಾದದ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ.

ಸದ್ಯ, ಹಿಜಾಬ್ ವಿಚಾರ ನ್ಯಾಯಾಲಯದಲ್ಲಿ ಇರುವುದರಿಂದ ಹೆಚ್ಚೇನೂ ಪ್ರತಿಕ್ರಿಯಿಸಲಾಗದು ಎಂದು ಮನೋಜ್ ಸಿನ್ಹಾ ಹೇಳಿದ್ದಾರೆ.

ಕವಯತ್ರಿ ಎಂ.ಆರ್. ಕಮಲಾ ಅಭಿಮತ

'ಆತ್ಮಕಥೆಗಳಲ್ಲಿ ಹೆಣ್ಣು ಪೂರ್ಣ ಅಭಿವ್ಯಕ್ತಿಗೊಳ್ಳಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣ್ಣು ಮಕ್ಕಳು ಆತ್ಮಕಥೆಗಳಲ್ಲಿ ಸಂಪೂರ್ಣವಾಗಿ ಅಭಿವ್ಯಕ್ತಿಗೊಳ್ಳುವುದಿಲ್ಲ. ಕೆಲವನ್ನು ಹೊರಗಡೆ ಹಾಕಲಾಗದ, ಒಳಗಡೆ ಇಟ್ಟುಕೊಳ್ಳಲಾಗದ ಗೊಂದಲದಲ್ಲಿ ಅವರು ಇರುತ್ತಾರೆ' ಎಂದು ಕವಯತ್ರಿ ಎಂ.ಆರ್. ಕಮಲಾ ತಿಳಿಸಿದರು.

ವಿಕಾಸ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಪೂರ್ಣಿಮಾ ಸುರೇಶ್ ಅವರ 'ಮಧ್ಯಮಾವತಿ' ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿದರು. 'ರೂಪಕಾತ್ಮಕ ಕವಿತೆಗಳಲ್ಲಿ ಹೆಣ್ಣು ಮಕ್ಕಳು ಸಂಪೂರ್ಣವಾಗಿ ವ್ಯಕ್ತವಾಗುತ್ತಾರಾ? ಅಂತಹ ಸಾಮಾಜಿಕ ವಾತಾವರಣ ಇದೆಯೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಸಂದರ್ಭದಲ್ಲಿ ರೂಪಕಗಳ ಮೂಲಕ ಕೆಲವನ್ನು ಹೊರ ಹಾಕುತ್ತಾ ಹೋಗುತ್ತಾರೆ. ಪೂರ್ಣಿಮಾ ಸುರೇಶ್ ಅವರು ಕೂಡ ಬೆಕ್ಕು, ನೊಣದಂತಹ ರೂಪಕಗಳ ನೆರವಿನಿಂದ ಅಂತರಂಗದ ತಲ್ಲಣಗಳನ್ನು ಪೂರ್ಣವಾಗಿ ಅಭಿವ್ಯಕ್ತಿಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ' ಎಂದು ಹೇಳಿದರು.

ಕವನ ಸಂಕಲನದ ಬಗ್ಗೆ ಮಾತನಾಡಿದ ಪತ್ರಕರ್ತ ಜೋಗಿ, 'ಕವಿತೆಗಳು ಬದುಕಿನ ಸೂಕ್ಷ್ಮ ಆಯಾಮಗಳನ್ನು ನವಿರಾಗಿ ಸ್ಪರ್ಶಿಸುತ್ತವೆ. ಬಹುತೇಕ ಕವಿತೆಗಳು ಆತ್ಮಕಥೆಯ ಸೌಂದರ್ಯವನ್ನು ಒಳಗೊಂಡಿವೆ. ಬದುಕಿನ ಸೂಕ್ಷ್ಮ ಆಯಾಮಗಳನ್ನು ವಿಶ್ಲೇಷಿಸುತ್ತವೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕವಯತ್ರಿ ಪೂರ್ಣಿಮಾ ಸುರೇಶ್, 'ಭಾವಪಲ್ಲಟಗಳ ತೀವ್ರತೆಯನ್ನು ಹಿಡಿದಿಡುವ ಮನಸ್ಥಿತಿಯ ಭಾಗವಾಗಿ 'ಮಧ್ಯಮಾವತಿ' ಕವಿತೆಗಳು ರೂಪುಗೊಂಡಿವೆ' ಎಂದು ಹೇಳಿದರು.

ಕವಿ ಬಿ.ಆರ್. ಲಕ್ಷ್ಮಣರಾವ್, 'ಭಾವಗಳನ್ನು ಹಿಡಿದಿಡುವ ಸೂಕ್ಷ್ಮತೆ, ಪ್ರಬುದ್ಧತೆಯನ್ನು ಕವಿತೆಗಳಲ್ಲಿ ಕಾಣಬಹುದು' ಎಂದರು.

'ಮಧ್ಯಮಾವತಿ' ಕವನ ಸಂಕಲನವನ್ನು ಎಂ.ಆರ್. ಕಮಲಾ ಬಿಡುಗಡೆ ಮಾಡಿದರು. ಪೂರ್ಣಿಮಾ ಸುರೇಶ, ಬಿ.ಆರ್. ಲಕ್ಷ್ಮಣರಾವ್ ಹಾಗೂ ಜೋಗಿ ಇದ್ದಾರೆ –ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ರಸ್ತೆ ಸರಿಪಡಿಸಿ



ಕೆಂಗೇರಿ ಉಪನಗರ ಹೊಸ ಬೈರೋಹಳ್ಳಿ ಮಾರ್ಗದ ಹದಗೆಟ್ಟ ರಸ್ತೆ

ನೈಸ್ ರಸ್ತೆಯ ಅಂಡರ್‌ಪಾಸ್ ಹತ್ತಿರದ ಕೆಂಗೇರಿ ಉಪನಗರ-ಹೊಸ ಬೈರೋಹಳ್ಳಿ ರಸ್ತೆಯು ಹಲವು ದಿನಗಳಿಂದ ಹಾಳಾಗಿದೆ. ಇದರಿಂದ ವಾಹನ ಸವಾರರಿಗೆ ವಿಪರೀತ ತೊಂದರೆಯಾಗುತ್ತಿದೆ. ಈ ರಸ್ತೆಯನ್ನು ಮೈಸೂರು ರಸ್ತೆಗೆ ಪರ್ಯಾಯವಾಗಿ ಬಳಸುವುದರಿಂದ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತವೆ. ರಸ್ತೆ ಹದಗೆಟ್ಟಿರುವುದರಿಂದ ಅಪಘಾತಗಳು ಸಂಭವಿಸುತ್ತಲೇ ಇವೆ. ಆದರೆ, ರಸ್ತೆಯ ದುರಸ್ತಿಗೆ ಸಂಬಂಧಪಟ್ಟವರು ಮುಂದಾಗಿಲ್ಲ. ದೂಳಿನ ಸಮಸ್ಯೆಯೂ ಅಧಿಕವಾಗಿರುವುದರಿಂದ ಬೈಕ್ ಸವಾರರಿಗೆ ಬಹಳ ಸಮಸ್ಯೆಯಾಗಿದೆ. ಶೀಘ್ರವಾಗಿ ಈ ರಸ್ತೆಯನ್ನು ಸರಿಪಡಿಸಿ, ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಿ.

ಲಕ್ಷ್ಮೀಕಾಂತ್, ಕೆಂಗೇರಿ ಉಪನಗರ

ಶೌಚಾಲಯದ ಬೀಗ ತೆರೆಯಿರಿ

ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಶೌಚಾಲಯಗಳಿಗೆ ಬೀಗ ಹಾಕಿರುವುದು

ಕೆಂಪೇಗೌಡ ಬಸ್ ನಿಲ್ದಾಣಕ್ಕೆ (ಮೆಜೆಸ್ಟಿಕ್) ಪ್ರತಿದಿನ ಲಕ್ಷಾಂತರ ಪ್ರಯಾಣಿಕರು ಬರುತ್ತಾರೆ ಹಾಗೂ ವಿವಿಧ ಸ್ಥಳಗಳಿಗೆ ತೆರಳುತ್ತಾರೆ. ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಶೌಚಾಲಯಗಳಿದ್ದರೂ ಅವು ಬಳಕೆಗೆ ಪೂರಕವಾಗಿಲ್ಲ. ನಿಲ್ದಾಣದಲ್ಲಿರುವ ಶೌಚಾಲಯಕ್ಕೆ ಬೀಗ ಹಾಕಿರುವುದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಪುರುಷರು ಅಕ್ಕಪಕ್ಕದ ಸ್ಥಳಗಳಲ್ಲೇ ಮೂತ್ರ ವಿಸರ್ಜನೆ ಮಾಡುತ್ತಾರೆ. ಆದರೆ, ಮಹಿಳಾ ಪ್ರಯಾಣಿಕರು ಏನು ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳೇ ಉತ್ತರಿಸಬೇಕು. ಶೌಚಾಲಯದ ಬಳಿ ಸ್ವಚ್ಛತೆಯೂ ಇಲ್ಲ. ದುರ್ನಾತ ಬೀರುವುದರಿಂದ ಜನ ಮೂಗುಮುಚ್ಚಿ ನಡೆಯುವ ಸ್ಥಿತಿ ನಿರ್ಮಾಣವಾಗಿದೆ. ಬಂದ್ ಆಗಿರುವ ಶೌಚಾಲಯವನ್ನು ಪ್ರಯಾಣಿಕರ ಬಳಕೆಗೆ ಮುಕ್ತಗೊಳಿಸಬೇಕು. ಈ ಬಗ್ಗೆ ಸಂಬಂಧಪಟ್ಟವರು ಕ್ರಮ ಜರುಗಿಸಬೇಕು.

ನಬಿಸಾಬ ಆರ್.ಬಿಂಜವಾಡಗಿ, ಜಯನಗರ ನಿವಾಸಿ

ರಘುವನಹಳ್ಳಿ ಮತ್ತು ಅಂಜನಾಪುರ ರಸ್ತೆಯ ದುಸ್ಥಿತಿ

ದೂಳಿನ ರಸ್ತೆಯಲ್ಲೇ ವಾಹನ ಸಂಚಾರ

ಕನಕಪುರ ರಸ್ತೆಯ ರಘುವನಹಳ್ಳಿಯಿಂದ ಅಂಜನಾಪುರ ರಸ್ತೆ ಸಂಪರ್ಕಿಸುವ ಮಾರ್ಗ ಹಾಳಾಗಿದೆ. ಸುಮಾರು 2 ಕಿ.ಮೀಗಳಷ್ಟು ದೂರ ಇರುವ ಈ ರಸ್ತೆಯಲ್ಲಿ ಮೊದಲು ಗುಂಡಿಗಳು ಹೆಚ್ಚಾಗಿದ್ದವು. ಆದರೂ ಪ್ರಯಾಣಿಕರು ಇದೇ ರಸ್ತೆಯಲ್ಲಿ ಸಂಚರಿಸುತ್ತಿದ್ದರು. ಕೆಲವು ತಿಂಗಳುಗಳ ಹಿಂದೆ ಕೇಬಲ್ ಅಳವಡಿಕೆಗಾಗಿ ಈ ರಸ್ತೆಯನ್ನು ಅಗೆಯಲಾಯಿತು. ಆ ಕಾಮಗಾರಿ ಈವರೆಗೆ ಪೂರ್ಣಗೊಂಡಿಲ್ಲ.
ಸ್ವಲ್ಪ ದಿನಗಳ ನಂತರ ರಸ್ತೆಗೆ ಜಲ್ಲಿ ಕಲ್ಲುಗಳನ್ನು ಹಾಕಲಾಯಿತು. ಈ ರಸ್ತೆಯಲ್ಲಿ ದೊಡ್ಡ ವಾಹನಗಳು ಹೆಚ್ಚಾಗಿ ಸಂಚರಿಸುವುದರಿಂದ ವಿಪರೀತವಾಗಿ ದೂಳು ಏಳುತ್ತದೆ. ಬೈಕ್ ಸವಾರರು ದೂಳಿನಲ್ಲೇ ಸಂಚರಿಸುವ ಅನಿವಾರ್ಯತೆ ಎದುರಾಗಿದೆ. ವಾಹನಗಳ ಸಂಚಾರ ಹೆಚ್ಚಾಗಿರುವ ಈ ರಸ್ತೆಯನ್ನು ಶೀಘ್ರವಾಗಿ ಸರಿಪಡಿಸಬೇಕು.

ವೆಂಕಟೇಶ್, ನಾರಾಯಣ ನಗರದ ನಿವಾಸಿ

ಟ್ರಾಫಿಕ್ ಕಂಬ ತೆರವು ಮಾಡಿ

ಹೊಸಕೆರೆಹಳ್ಳಿ ರಿಂಗ್ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ಟ್ರಾಫಿಕ್ ಕಂಬ

ಹೊಸಕೆರೆಹಳ್ಳಿ ರಿಂಗ್ ರಸ್ತೆಯ ಅಂಡರ್‌ಪಾಸ್ ವೃತ್ತದಲ್ಲಿ ನಾಲ್ಕು ರಸ್ತೆಗಳು ಸೇರುತ್ತವೆ. ಇಲ್ಲಿ ಸಂಚಾರ ನಿಯಂತ್ರಣಕ್ಕಾಗಿ ಸಿಗ್ನಲ್ ಕಂಬಗಳನ್ನು ಅಳವಡಿಸಲಾಗಿತ್ತು. ಕೆಲ ದಿನಗಳ ನಂತರ ಅವುಗಳ ಅವಶ್ಯಕತೆ ಇಲ್ಲದಿರುವುದನ್ನು ಮನಗಂಡು, ಸಿಗ್ನಲ್‌ಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ಆದರೆ, ಟ್ರಾಫಿಕ್ ಕಂಬವನ್ನು ಕಿರಿದಾದ ಪಾದಚಾರಿ ಮಾರ್ಗದಲ್ಲೇ ಬಿಡಲಾಗಿದೆ. ಕಂಬದಿಂದ ಪಾದಚಾರಿಗಳಿಗೆ ಬಹಳ ತೊಂದರೆಯಾಗಿದೆ. ಎನ್‌ಸಿಇಆರ್‌ಟಿ ಮುಂದಿರುವ ಕಂಬಗಳು ಅಪಾಯಕ್ಕೆ ಆಹ್ವಾನ ನೀಡುವಂತಿವೆ. ನಿರುಪಯುಕ್ತವಾಗಿರುವ ಈ ಟ್ರಾಫಿಕ್ ಕಂಬವನ್ನು ತೆರವು ಮಾಡಿ, ಪಾದಚಾರಿಗಳ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕು.

ಸತ್ಯಬೋಧ, ಹೊಸಕೆರೆಹಳ್ಳಿ ಬಡಾವಣೆ

ವಿದ್ಯಾಸಾಗರ್ ಶಾಲೆ ಪ್ರಕರಣ: ಶಿಕ್ಷಕಿ ವಿರುದ್ಧದ ದೂರು ಪರಿಶೀಲನೆ

‘ಸಾಮರಸ್ಯ ಹಾಳು ಮಾಡುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರಾಲೇಔಟ್ ಬಳಿಯ ‘ವಿದ್ಯಾಸಾಗರ್ ಇಂಗ್ಲಿಷ್ ಪಬ್ಲಿಕ್ ಸ್ಕೂಲ್’ ಪ್ರಕರಣ ತಿರುವು ಪಡೆದುಕೊಂಡಿದ್ದು, ಪೋಷಕರಲ್ಲದ ವ್ಯಕ್ತಿಗಳು ಶಾಲೆ ಬಳಿ ಬಂದು ಗಲಾಟೆ ಮಾಡಿರುವುದಾಗಿ ಶಾಲೆ ಆಡಳಿತ ಮಂಡಳಿ ಆರೋಪಿಸಿದೆ.

ಶನಿವಾರ ನಡೆದ ಘಟನೆ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಶಾಲಾ ಆಡಳಿತ ಮಂಡಳಿ ಕಾರ್ಯದರ್ಶಿ ಡಾ. ಎಸ್. ರಾಜು, ‘ಪೋಷಕರಲ್ಲದ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಸಣ್ಣ ವಿಚಾರವನ್ನು ಗೊಂದಲಗೀಡು ಮಾಡಿ ಗಾಳಿ ಸುದ್ದಿ ಹರಡಿಸಿ ಸಮಾಜದ ಸಾಮರಸ್ಯ ಹಾಳು ಮಾಡಲು ಯತ್ನಿಸಿದ್ದಾರೆ’ ಎಂದಿದ್ದಾರೆ.

‘22 ವರ್ಷಗಳ ಇತಿಹಾಸವಿರುವ ಶಾಲೆಯಲ್ಲಿ ಬಡ- ಮಧ್ಯಮ ಕುಟುಂಬದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಸಮವಸ್ತ್ರ, ಶೂ ಮತ್ತು ಪಠ್ಯಪುಸ್ತಕವನ್ನು ಉಚಿತವಾಗಿ ನೀಡಲಾಗುತ್ತಿದೆ’ ಎಂದೂ ಹೇಳಿದ್ದಾರೆ.

‘ಶಿಕ್ಷಕಿ ಶಶಿಕಲಾ ಮತ್ತು ವಿದ್ಯಾರ್ಥಿಗಳ ನಡುವೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಮಾತುಕತೆ ನಡೆದಿತ್ತು. ಅದನ್ನು ತಪ್ಪಾಗಿ ಗ್ರಹಿಸಿದ ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ಗೊಂದಲ ಸೃಷ್ಟಿಯಾಗಿ, ಗಲಾಟೆ ನಡೆಯಿತು’ ಎಂದಿದ್ದಾರೆ.

‘ಹಿಜಾಬ್ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಯಾವುದೇ ವಿಚಾರ ಪ್ರಸ್ತಾಪವಾಗಿಲ್ಲ. ಗಾಳಿ ಸುದ್ದಿ ಹರಡಿಸಿದ್ದ ಕೆಲವರು ವಿನಾಕಾರಣ ಗೊಂದಲ ಸೃಷ್ಟಿಸಿ, ಹಲವರನ್ನು ಪ್ರಚೋದಿಸಿದರು. ಇದನ್ನು ಶಾಲಾ ಆಡಳಿತ ಮಂಡಳಿ ಖಂಡಿಸುತ್ತದೆ’ ಎಂದು ಅವರು ತಿಳಿಸಿದ್ದಾರೆ.

ಅಮಾನತು ಹಿಂಪಡೆದ ಮಂಡಳಿ: ಗಣಿತ ಶಿಕ್ಷಕಿ ಶಶಿಕಲಾ ಅವರನ್ನು ಅಮಾನತು ಮಾಡಿದ್ದ ತೀರ್ಮಾನವನ್ನು ಶಾಲಾ ಆಡಳಿತ ಮಂಡಳಿ ಹಿಂಪಡೆದಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಎಸ್. ರಾಜು, ‘ಶಿಕ್ಷಕಿ ಶಶಿಕಲಾ ಮೇಲಿನ ಆರೋಪದ ಬಗ್ಗೆ ವಿಚಾರಣೆ ನಡೆಯುತ್ತಿದ್ದು, ತಪ್ಪಿತಸ್ಥರೆಂದು ಕಂಡುಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದಿದ್ದಾರೆ.

ಪೊಲೀಸರಿಂದ ದೂರು ಪರಿಶೀಲನೆ

‘ಅವಾಚ್ಯ ಶಬ್ದಗಳನ್ನು ಬಳಸಿ ವಿದ್ಯಾರ್ಥಿಗಳು ಹಾಗೂ ಮುಸ್ಲಿಂ ಸಮುದಾಯವನ್ನು ನಿಂದಿಸಿರುವ ಶಿಕ್ಷಕಿ ವಿರುದ್ಧ ಕ್ರಮ ಕೈಗೊಳ್ಳಿ’ ಎಂಬುದಾಗಿ ವಿದ್ಯಾರ್ಥಿನಿಯೊಬ್ಬರು ಚಂದ್ರಾ ಲೇಔಟ್ ಠಾಣೆಗೆ ದೂರು ನೀಡಿದ್ದಾರೆ.

ಪರಿಶೀಲನೆ ನಡೆಸುತ್ತಿರುವ ಪೊಲೀಸರು, ‘ದೂರಿನ ಸಂಗತಿಗಳಿಗೆ ಪುರಾವೆಗಳು ಸಿಕ್ಕಿಲ್ಲ. ಎಫ್‌ಐಆರ್ ದಾಖಲು ಸಂಬಂಧ ಪರಿಶೀಲನೆ ನಡೆಯುತ್ತಿದೆ’ ಎಂದಿದ್ದಾರೆ.

‘ಸೋಮವಾರ ಶಾಲೆ ಆರಂಭವಾಗಲಿದೆ. ಮುಂಜಾಗ್ರತಾ ಕ್ರಮವಾಗಿ ಶಾಲೆ ಸುತ್ತಮುತ್ತ ಬಿಗಿ ಭದ್ರತೆ ಕೈಗೊಳ್ಳಲಾಗಿದೆ’ ಎಂದೂ ಹೇಳಿದ್ದಾರೆ.

18 ದ್ವಿಚಕ್ರ ವಾಹನ ಜಪ್ತಿ: ನಾಲ್ವರ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ 4 ಆರೋಪಿಗಳನ್ನು ಕೋಣನಕುಂಟೆ ಪೊಲೀಸರು ಬಂಧಿಸಿದ್ದಾರೆ.

‘ವಿಕ್ರಮ್, ಶ್ರೀನಿವಾಸ್, ಬಸಪ್ಪ ಹಾಗೂ ಸಲೀಂ ಬಂಧಿತರು. ಅವರಿಂದ ₹ 7 ಲಕ್ಷ ಮೌಲ್ಯದ 18 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಕದ್ದ ವಾಹನಗಳನ್ನು ತಮಿಳುನಾಡಿಗೆ ತೆಗೆದುಕೊಂಡು ಮಾರುತ್ತಿದ್ದರು. ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದೂ ತಿಳಿಸಿವೆ.

ಹೋಟೆಲ್‌ನಲ್ಲಿ ಗಲಾಟೆ: ಗ್ರಾಹಕನ ಮೇಲೆ ಹಲ್ಲೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಹೋಟೆಲೊಂದರಲ್ಲಿ ಶನಿವಾರ ರಾತ್ರಿ ಗಲಾಟೆ ನಡೆದಿದ್ದು, ಮದ್ಯ ಸರಬರಾಜು ಸಿಬ್ಬಂದಿಯೊಬ್ಬ ಗ್ರಾಹಕನ ಮೇಲೆ ಹಲ್ಲೆ ಮಾಡಿರುವ ಆರೋಪ ವ್ಯಕ್ತವಾಗಿದೆ.

‘ಊಟಕ್ಕೆಂದು ಹೋಟೆಲ್‌ಗೆ ಹೋಗಿದ್ದ ವೇಳೆ ಸಿಬ್ಬಂದಿಯೊಬ್ಬ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ’ ಎಂದು ಆರೋಪಿಸಿ ಬನ್ನೇರುಘಟ್ಟ ನಿವಾಸಿ ಇಶಾಂತ್ ಎಂಬುವರು ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದಾರೆ.

‘ಆರೋಪಿತ ಸಿಬ್ಬಂದಿ ಹಾಗೂ ಹೋಟೆಲ್ ವ್ಯವಸ್ಥಾಪಕನನ್ನು ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ. ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಇಶಾಂತ್ ಹಾಗೂ ಸ್ನೇಹಿತರು ಹೋಟೆಲ್‌ಗೆ ಹೋಗಿದ್ದರು. ಮದ್ಯ ತರುವಂತೆ ಆರ್ಡರ್ ಮಾಡಿದ್ದರು. ಸಿಬ್ಬಂದಿ ಮದ್ಯ ತರುವುದು ತಡವಾಗಿತ್ತು. ಅದೇ ವಿಚಾರಕ್ಕೆ ಜಗಳ ಶುರುವಾಗಿ, ವಿಕೋಪಕ್ಕೆ ಹೋಗಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಿಟ್ಟಾದ ಸಿಬ್ಬಂದಿ, ತಟ್ಟೆಯಿಂದ ಇಶಾಂತ್ ಹಣೆಗೆ ಹೊಡೆದಿದ್ದ. ಗಾಯಗೊಂಡ ಇಶಾಂತ್ ಅವರನ್ನು ಸ್ನೇಹಿತರೇ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ’ ಎಂದೂ ವಿವರಿಸಿವೆ.

ಬಾಲಕನಿಗೆ ಲೈಂಗಿಕ ಕಿರುಕುಳ: ದೂರು

ಚೀಲೂರು(ನ್ಯಾಮತಿ): 6ನೇ ತರಗತಿ ಓದುತ್ತಿರುವ ಚೀಲೂರು ಗ್ರಾಮದ 11 ವರ್ಷದ ಮುಸ್ಲಿಂ ಬಾಲಕನಿಗೆ ಅದೇ ಗ್ರಾಮದ ಇಬ್ಬರು ಮುಸ್ಲಿಂ ಯುವಕರು ಲೈಂಗಿಕ ಕಿರುಕುಳ ನೀಡಿರುವ ಪ್ರಕರಣ ನಡೆದಿದೆ.

ಕಳೆದ ಮೂರು ತಿಂಗಳಿನಿಂದ ಯುವಕರು ಲೈಂಗಿಕ ಕಿರುಕುಳ ನೀಡುವ ಜೊತೆಗೆ ಅದರ ವಿಡಿಯೊವನ್ನು ಮಾಡಿ ಬಾಲಕನಿಗೆ ಹೆದರಿಸಿದ್ದು, ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ನಂತರ ಪೋಷಕರ ಗಮನಕ್ಕೆ ಬಂದಿದೆ. ಕ್ರಮ ಕೈಗೊಳ್ಳಬೇಕು ಎಂದು ಕಿರುಕುಳಕ್ಕೆ ಒಳಗಾದ ಬಾಲಕನ ಪೋಷಕರು ನ್ಯಾಮತಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಗಾಂಜಾ ಮಾರಾಟ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಡಿಶಾದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಆರೋಪದಡಿ ಭದ್ರತಾ ಸಿಬ್ಬಂದಿ ಸೇರಿ ಮೂವರನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಒಡಿಶಾದ ಶಿಬ್ರಾಜ್, ನಗರದ ನಿವಾಸಿಗಳಾದ ರಾಘವೇಂದ್ರ, ನಾಗೇಶ್ ಬಂಧಿತರು. ಅವರಿಂದ 10 ಕೆ.ಜಿ ಗಾಂಜಾ ಹಾಗೂ ₹1,500 ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಶಿಬ್ರಾಜ್, ಸೆಕ್ಯುರಿಟಿ ಕಂಪನಿಯೊಂದಕ್ಕೆ ಸೇರಿದ್ದ. ಆತನನ್ನು ಕೆಲ ಕಚೇರಿಗಳಿಗೆ ಸೆಕ್ಯುರಿಟಿ ಗಾರ್ಡ್ ಆಗಿ ನೇಮಿಸಲಾಗಿತ್ತು. ಆಗಾಗ ಆತ ಊರಿಗೆ ರೈಲಿನಲ್ಲಿ ಹೋಗಿ ಬರುತ್ತಿದ್ದ. ವಾಪಸು ಬರುವಾಗ ಬ್ಯಾಗ್‌ನಲ್ಲಿ ಗಾಂಜಾ ಪೊಟ್ಟಣ ಬಚ್ಚಿಟ್ಟುಕೊಂಡು ತರುತ್ತಿದ್ದ.’

ನಂದಿನಿ ಲೇಔಟ್ ಠಾಣೆ ಪೊಲೀಸರು ಜಪ್ತಿ ಮಾಡಿರುವ ಗಾಂಜಾ

‘ಕೊಠಡಿಯಲ್ಲೇ ಶಿಬ್ರಾಜ್, ಗಾಂಜಾ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ. ಅದನ್ನೇ ರಾಘವೇಂದ್ರ ಹಾಗೂ ನಾಗೇಶ್ ಮಾರಾಟ ಮಾಡುತ್ತಿದ್ದರು. ಬಂದ ಹಣವನ್ನು ಆರೋಪಿಗಳು ಹಂಚಿಕೊಳ್ಳುತ್ತಿದ್ದರು’ ಎಂದೂ ತಿಳಿಸಿದರು.

ಯಶವಂತಪುರದಲ್ಲಿ ಇಬ್ಬರ ಬಂಧನ: ಆಟೊದಲ್ಲಿ ಗಾಂಜಾ ಸಾಗಿಸುತ್ತಿದ್ದ ಇಬ್ಬರನ್ನು ಯಶವಂತಪುರ ಪೊಲೀಸರು ಬಂಧಿಸಿದ್ದಾರೆ.

‘ಷರೀಫ್‌ನಗರದಲ್ಲಿ ಗ್ರಾಹಕರಿಗೆ ಮಾರಾಟ ಮಾಡಲು ಗಾಂಜಾ ಸಾಗಿಸಲಾಗುತ್ತಿತ್ತು. ದಾಳಿ ಮಾಡಿ 3 ಕೆ.ಜಿ ಗಾಂಜಾ ಹಾಗೂ ₹ 600 ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಗಾಂಜಾ; ವಿದ್ಯಾರ್ಥಿಗಳನ್ನು ಹಿಡಿದುಕೊಟ್ಟ ಜನ

ಬೆಂಗಳೂರು: ನಗರದ ಕಾಲೇಜೊಂದರ ಇಬ್ಬರ ವಿದ್ಯಾರ್ಥಿಗಳ ಬಳಿ 1 ಕೆ.ಜಿ ಗಾಂಜಾ ಪತ್ತೆಯಾಗಿದ್ದು, ಅವರಿಬ್ಬರನ್ನು ಬ್ಯಾಡರಹಳ್ಳಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

‘ವಿದ್ಯಾರ್ಥಿಗಳಿಬ್ಬರು ದ್ವಿಚಕ್ರ ವಾಹನವನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿದ್ದರು. ಇದನ್ನು ಗಮನಿಸಿದ್ದ ಸ್ಥಳೀಯರು, ಅವರಿಬ್ಬರನ್ನು ಹಿಡಿದುಕೊಂಡು ವಿಚಾರಿಸಿದ್ದರು. ವಿದ್ಯಾರ್ಥಿಗಳ ಜೇಬಿನಲ್ಲಿ ಗಾಂಜಾ ಪೊಟ್ಟಣಗಳು ಸಿಕ್ಕಿದ್ದವು. ಅವರಿಬ್ಬರನ್ನು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ವಶಕ್ಕೆ ಒಪ್ಪಿಸಲಾಯಿತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ವಿದ್ಯಾರ್ಥಿಗಳು ವಾಸವಿದ್ದ ಕೊಠಡಿಯಲ್ಲೂ ಪೊಲೀಸರು ತಪಾಸಣೆ ಮಾಡಿದರು. ವಿದ್ಯಾರ್ಥಿಗಳ ಬಳಿ ಒಟ್ಟು 1 ಕೆ.ಜಿ ಗಾಂಜಾ ಹಾಗೂ ಪೌಡರ್ ರೂಪದ ಡ್ರಗ್ಸ್ ಪತ್ತೆಯಾಗಿದೆ’ ಎಂದೂ ತಿಳಿಸಿದರು.

ಪೊಲೀಸರು, ‘ತನಿಖೆ ನಡೆದಿದೆ. ಸದ್ಯಕ್ಕೆ ವಿದ್ಯಾರ್ಥಿಗಳ ಹೆಸರು ಬಹಿರಂಗಪಡಿಸಲಾಗದು’ ಎಂದರು.

ಎತ್ತಿನ ಹಗ್ಗಕ್ಕೆ ಸಿಲುಕಿ ಡಿವೈಎಸ್‌ಪಿಗೆ ಗಾಯ

ಬಂಗಾರಪೇಟೆ: ತಾಲ್ಲೂಕಿನ ದೋಣಿಮೊಡಗು ಪಂಚಾಯಿತಿ ವ್ಯಾಪ್ತಿಯ ತನಿಮೊಡಗು ಗ್ರಾಮದ ಸಂಕ್ರಾಂತಿ (ರಾಸುಗಳಿಗೆ ಕಿಚ್ಚು ಹಾಯಿಸುವ) ಹಬ್ಬದಂದು ಪೊಲೀಸ್ ಬಂದೋಬಸ್ತ್ ವೀಕ್ಷಣೆಗೆ ಅಲ್ಲಿಗೆ ತೆರಳಿದ್ದ ಡಿವೈಎಸ್ಪಿ ಮುರಳೀಧರ ಅವರ ಕಾಲು ಎತ್ತಿನ ಹಗ್ಗಕ್ಕೆ ಸಿಲುಕಿ ಗಾಯಗೊಂಡಿರುವ ಘಟನೆ ಭಾನುವಾರ ನಡೆದಿದೆ.

ಎತ್ತಿನ ಹಗ್ಗ ಸುತ್ತಿಕೊಂಡು ಕೆಳಗೆ ಬಿದ್ದ ಡಿವೈಎಸ್ಪಿ ಅವರಿಗೆ ಸ್ವಲ್ಪಹೊತ್ತು ಪ್ರಜ್ಞೆ ತಪ್ಪಿತ್ತು. ಕೂಡಲೆ ಅವರನ್ನು ಆಂಧ್ರಪ್ರದೇಶದ ಪಿಇಎಸ್ ಕಾಲೇಜು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪ್ರಥಮ ಚಿಕಿತ್ಸೆ ಪಡೆದು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಸಂಕ್ರಾಂತಿ ಹಬ್ಬ ಆಚರಿಸಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿ ತನಿಮೊಡುಗು ಗ್ರಾಮಸ್ಥರು ಕಾಮಸಮುದ್ರ ಠಾಣೆಗೆ ಮನವಿ ಸಲ್ಲಿಸಿದ್ದರು. ರಾಸುಗಳಿಗೆ ಪೂಜೆ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದ ಪೊಲೀಸರು ಎತ್ತುಗಳ ಓಟಕ್ಕೆ ಅವಕಾಶ ಕೊಟ್ಟಿರಲಿಲ್ಲ. ಜಲ್ಲಿಕಟ್ಟು ನಡೆಸುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಪೋಸ್ಟ್ ಮಾಡಿದ್ದು, ಮುನ್ನೆಚ್ಚರಿಕೆಯಾಗಿ ಭಾನುವಾರ ಗ್ರಾಮದಲ್ಲಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ವಕೀಲ ಜಗದೀಶ್ ಕೆ.ಎನ್‌. ಮಹಾದೇವ್ ಬಂಧನ

‘ವಕೀಲನ ಮರ್ಮಾಂಗಕ್ಕೆ ಒದ್ದು ಕೊಲೆಗೆ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಟಿ ಸಿವಿಲ್ ನ್ಯಾಯಾಲಯ ಆವರಣದಲ್ಲಿ ಗಲಾಟೆ ಮಾಡಿ, ವಕೀಲರೊಬ್ಬರ ಮರ್ಮಾಂಗಕ್ಕೆ ಒದ್ದು ಕೊಲೆಗೆ ಯತ್ನಿಸಿದ ಆರೋಪದಡಿ ವಕೀಲ ಜಗದೀಶ್ ಕೆ.ಎನ್. ಮಹಾದೇವ್ ಅವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಭಾನುವಾರ ಬೆಳಿಗ್ಗೆ ಬಂಧಿಸಿದ್ದಾರೆ.

ಜಗದೀಶ್

‘ಫೆ. 10,11ರಂದು ನಡೆದಿರುವ ಪ್ರತ್ಯೇಕ ಘಟನೆ ಸಂಬಂಧ ವಕೀಲ ಜಿ. ನಾರಾಯಣಸ್ವಾಮಿ (37) ಹಾಗೂ ಇತರರು ದೂರು ನೀಡಿದ್ದಾರೆ. ಎರಡು ಗುಂಪುಗಳ ನಡುವೆ ದ್ವೇಷ ಬಿತ್ತುವುದು (ಐಪಿಸಿ 153ಎ), ಕ್ರಿಮಿನಲ್ ಪಿತೂರಿ (120ಬಿ), ಅಕ್ರಮ ಕೂಟ (ಐಪಿಸಿ 143), ದೊಂಬಿ (ಐಪಿಸಿ 147), ಅಕ್ರಮವಾಗಿ ಗುಂಪು ಸೇರುವುದು (ಐಪಿಸಿ 149), ಕೊಲೆ ಯತ್ನ (ಐಪಿಸಿ 307), ಹಲ್ಲೆ (ಐಪಿಸಿ 323), ಅಕ್ರಮ ಬಂಧನ (ಐಪಿಸಿ 341), ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಜಗದೀಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಕೊಡಿಗೇಹಳ್ಳಿಯಲ್ಲಿರುವ ಮನೆಯಲ್ಲಿ ಅವರನ್ನು ಬಂಧಿಸಿ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದರು. ಜಗದೀಶ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ವಹಿಸಲಾಗಿದೆ’ ಎಂದೂ ತಿಳಿಸಿದರು.

‘ಐಪಿಎಸ್ ಅಧಿಕಾರಿ ರವಿ ಚನ್ನಣ್ಣನವರ ಸಲ್ಲಿಸಿರುವ ಮಾನನಷ್ಟ ಮೊಕದ್ದಮೆಗೆ ಆಕ್ಷೇಪಣೆ ಸಲ್ಲಿಸಲು ಜಗದೀಶ್ ಹಾಗೂ ಇತರರು ನ್ಯಾಯಾಲಯಕ್ಕೆ ಬಂದಿದ್ದರು. ಅದೇ ವೇಳೆ ಗಲಾಟೆ ನಡೆದಿದೆ. ಕೆಲವರು ವಿಡಿಯೊ ಚಿತ್ರೀಕರಿಸಿದ್ದು, ಆ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಗಲಾಟೆ ಸಂಬಂಧ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ನೀಡಿದ್ದಾರೆ’ ಎಂದೂ ಹೇಳಿದರು.

ದೂರಿನ ವಿವರ: ‘ಜಗದೀಶ್ ಮಹಾದೇವ್, ಪ್ರಶಾಂತಿ ಸುಭಾಷ್, ಶರತ್ ಖಾದ್ರಿ ಹಾಗೂ ಇತರರು ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ. ವಕೀಲರು ಮತ್ತು ಕೆಲವು ವ್ಯಕ್ತಿಗಳ ಬಗ್ಗೆ ಅವರೆಲ್ಲರೂ ಅವಹೇಳನಕಾರಿಯಾಗಿ ನಿಂದಿಸಿದ್ದರು. ಆ ರೀತಿ ಮಾಡದಂತೆ ಅವರೆಲ್ಲರಿಗೂ ವಕೀಲದ ಸಂಘದಿಂದ ಬುದ್ದಿ ಮಾತು ಹೇಳಿದ್ದೆವು’ ಎಂದು ವಕೀಲ ನಾರಾಯಣಸ್ವಾಮಿ ದೂರಿನಲ್ಲಿ ತಿಳಿಸಿದ್ದಾರೆ.

‘ನನ್ನ ವಿರುದ್ಧ ದ್ವೇಷ ಸಾಧಿಸಲಾರಂಭಿಸಿದ ಜಗದೀಶ್ ಹಾಗೂ ಇತರರು, ಫೆ.10ರಂದು ನ್ಯಾಯಾಲಯದ ಆವರಣದಲ್ಲಿ ಗಲಾಟೆ ಮಾಡಿ ಜೀವ ಬೆದರಿಕೆಯೊಡ್ಡಿದ್ದರು. ಫೆ. 11ರಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ಜಗದೀಶ್ ಹಾಗೂ 50 ಮಂದಿ ನ್ಯಾಯಾಲಯ ಆವರಣಕ್ಕೆ ನುಗ್ಗಿ ಗಲಾಟೆ ಮಾಡಿ ದೊಂಬಿ ಎಬ್ಬಿಸಿದರು.’

‘ಸ್ಥಳದಲ್ಲಿ ಅಶಾಂತಿ ವಾತಾವರಣ ಉಂಟು ಮಾಡಿದ್ದ ಆರೋಪಿಗಳು, ನನ್ನ ಕುತ್ತಿಗೆ ಹಿಸುಕಿ ಮರ್ಮಾಂಗಕ್ಕೆ ಒದ್ದು ಕೊಲೆಗೆ ಯತ್ನಿಸಿದರು. ಕೆಲ ವಕೀಲರನ್ನು ತಡೆದು, ಜೀವ ಬೆದರಿಕೆ ಹಾಕಿದರು.

ಮಾನಹಾನಿಕಾರಕ ಹೇಳಿಕೆ ನೀಡಿ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಹರಿಬಿಟ್ಟರು.

300 ಜನರಿಂದ ಬೆದರಿಕೆ ಕರೆ ಮಾಡಿಸಿದ್ದಾರೆ’ ಎಂದೂ ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಕ್ರಮ ಕೈಗೊಳ್ಳದ ಪೊಲೀಸರು’

‘ವಕೀಲ ಜಗದೀಶ್ ಅವರ ಮಗ ಹಾಗೂ ಇತರರ ಮೇಲೂ ಹಲ್ಲೆ ಆಗಿದೆ. ಈ ಬಗ್ಗೆ ಎಫ್‌ಐಆರ್ ದಾಖಲಾಗಿದೆ. ಆದರೆ, ಪೊಲೀಸರು ತಪ್ಪಿತಸ್ಥರನ್ನು ಇದುವರೆಗೂ ಬಂಧಿಸಿಲ್ಲ’ ಎಂದು ಜಗದೀಶ್ ಆಪ್ತರು ಆರೋಪಿಸಿದ್ದಾರೆ.

‘ಐಪಿಎಸ್ ಅಧಿಕಾರಿಯೊಬ್ಬರ ಭ್ರಷ್ಟಾಚಾರದ ವಿರುದ್ಧ ಜಗದೀಶ್ ಹೋರಾಟ ಮಾಡುತ್ತಿದ್ದರು. ಅದೇ ಅಧಿಕಾರಿ ಹೂಡಿದ್ದ ಮೊಕದ್ದಮೆಗೆ ಆಕ್ಷೇಪಣೆ ಸಲ್ಲಿಸಲು ನ್ಯಾಯಾಲಯಕ್ಕೆ ಬಂದಿದ್ದಾಗ ಗಲಾಟೆ ಆಗಿದೆ. ಹಿರಿಯ ಅಧಿಕಾರಿಗಳ ಒತ್ತಡಕ್ಕೆ ಒಳಗಾಗಿ ಪೊಲೀಸರು ಕೆಲಸ ಮಾಡುತ್ತಿದ್ದಾರೆ’ ಎಂದೂ ದೂರಿದರು.

‘ಚಿತ್ರೀಕರಣ ತಡೆದ ಪೊಲೀಸರು’

‘ಮನೆಗೆ ಪೊಲೀಸರು ಬರುತ್ತಿದ್ದಂತೆ ಜಗದೀಶ್ ಅವರು ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಣ ಮಾಡಲಾರಂಭಿಸಿದ್ದರು. ಆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ನೇರಪ್ರಸಾರವಾಗುತ್ತಿತ್ತು. ಅದನ್ನು ಪ್ರಶ್ನಿಸಿದ ಪೊಲೀಸರು, ವಿಡಿಯೊ ಮಾಡದಂತೆ ಬೆದರಿಸಿ ಮೊಬೈಲ್ ಕಸಿದುಕೊಂಡಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ಅಟಲ್‌ಜೀ ಜನಸ್ನೇಹಿ ಕೇಂದ್ರ: ಪ್ರಮಾಣಪತ್ರಗಳ ಶುಲ್ಕ ಏರಿಕೆ

ಬೆಂಗಳೂರು: ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ವಿತರಿಸಲಾಗುವ ವಿವಿಧ ಪ್ರಮಾಣಪತ್ರಗಳ ಬಳಕೆದಾರರ ಶುಲ್ಕವನ್ನು ಫೆ. 7ರಿಂದಲೇ ಅನ್ವಯವಾಗುವಂತೆ ಹೆಚ್ಚಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ನೇರವಾಗಿ ಕೇಂದ್ರಗಳಿಗೆ ಭೇಟಿ ನೀಡಿ ಜಾತಿ, ಆದಾಯ ಪ್ರಮಾಣಪತ್ರ, ಆರ್‌ಟಿಸಿ ಸೇರಿದಂತೆ ಇತರೆ ಪ್ರಮಾಣಪತ್ರ ಪಡೆಯಲು ಹಾಲಿ ಇರುವ ಶುಲ್ಕವನ್ನು (ಪ್ರತಿ ಪ್ರಮಾಣಪತ್ರಕ್ಕೆ) ₹ 25ರಿಂದ ₹ 40ಕ್ಕೆ ಹೆಚ್ಚಿಸಲಾಗಿದೆ.

ನಾಗರಿಕರು ಅಂಚೆ ಅಥವಾ ತ್ವರಿತ ಅಂಚೆ ಮೂಲಕ ಪಡೆಯಲು ಇಚ್ಛಿಸಿದರೆ ಅದಕ್ಕೆ ಪ್ರತ್ಯೇಕ ಶುಲ್ಕ ನಿಗದಿಪಡಿಸಲಾಗಿದೆ. ಸಾಧಾರಣ ಅಂಚೆ ಮೂಲಕ ಪಡೆಯಲು ₹ 45 (ಅಂಚೆ ಶುಲ್ಕ ₹ 5 ಸೇರಿ), ನೋಂದಾಯಿತ ಅಂಚೆಗೆ ₹ 60 (ಅಂಚೆ ಶುಲ್ಕ ₹ 20 ಸೇರಿ) ಮತ್ತು ತ್ವರಿತ ಅಂಚೆಗೆ ₹ 70 (ಅಂಚೆ ಶುಲ್ಕ ₹ 30 ಸೇರಿ) ಶುಲ್ಕ ನಿಗದಿಪಡಿಸಲಾಗಿದೆ.

ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಅಡಿಯಲ್ಲಿರುವ ನಾಡ ಕಚೇರಿಗಳಲ್ಲಿ ಸಾರ್ವಜನಿಕರಿಗೆ 11 ಸೇವಾ ಶುಲ್ಕ ರಹಿತ, 43 ಸೇವಾ ಶುಲ್ಕ ಸಹಿತ ಅರ್ಜಿಗಳ ಸೇರಿ ಒಟ್ಟು 54 ಸೇವೆಗಳನ್ನು ನೀಡಲಾಗುತ್ತಿದೆ.

2006 ರಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಇ-ಆಡಳಿತ ಇಲಾಖೆ ಅನುಷ್ಠಾನಗೊಳಿಸಿದ್ದ 'ನೆಮ್ಮದಿ' ಯೋಜನೆಯನ್ನು 2012 ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ಕಂದಾಯ ಇಲಾಖೆಗೆ ವರ್ಗಾಯಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಪ್ರಮಾಣಪತ್ರಗಳಿಗೆ ನಿಗದಿಪಡಿಸಿದ್ದ ಶುಲ್ಕ ₹ 15 ಅನ್ನು ₹ 25ಕ್ಕೆ ಹೆಚ್ಚಿಸಲಾಗಿತ್ತು. ಬಳಕೆದಾರರ ಶುಲ್ಕದಿಂದ ತಾಂತ್ರಿಕ ಸಂಪನ್ಮೂಲಗಳನ್ನು ನೇಮಿಸುವ ವೆಚ್ಚ, ಡೇಟಾ ಎಂಟ್ರಿ ಆಪರೇಟರ್‌ಗಳು, ಹಾರ್ಡ್‌ವೇರ್, ಸ್ಟೇಷನರಿ ಮತ್ತು ಇತರೆ ವೆಚ್ಚಗಳು, ಬಿಎಸ್‌ಎನ್‌ಎಲ್ ಅಂತರ್ಜಾಲ ಸಂಪರ್ಕ, ಮೊಬೈಲ್ ಶುಲ್ಕಗಳು ಮತ್ತು ಇತರ ಖರ್ಚುಗಳನ್ನು ನಿರ್ವಹಿಸಲಾಗುತ್ತದೆ. ಹೀಗಾಗಿ, ಶುಲ್ಕವನ್ನು ಹೆಚ್ಚಿಸಲು ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿದ್ದರು.

ವಿವಿಧ ಸೇವೆಗಳನ್ನು ಒದಗಿಸಲು ರಾಜ್ಯದಾದ್ಯಂತ ಹೋಬಳಿ ಮಟ್ಟದಲ್ಲಿ 769 ಅಟಲ್‌ಜೀ ಜನಸ್ನೇಹಿ ಕೇಂದ್ರಗಳು, 122 ಸ್ವಾಗತ ಕಚೇರಿಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಜಾತಿ, ಆದಾಯ, ವಾಸ ಸ್ಥಳ ದೃಢೀಕರಣ, ಆರ್‌ಟಿಸಿ ಹಾಗೂ ಭೂಮಿ ಸೇವೆಗಳಿಗೆ ಸಂಬಂಧಿಸಿದ ಇತರ ಪ್ರಮಾಣಪತ್ರಗಳನ್ನು ವಿತರಣೆ ಮಾಡಲಾಗುತ್ತದೆ.

ಸಾಗರ ತಾಲ್ಲೂಕು ಬ್ರಾಹ್ಮಣ ಬೇದೂರು ಅರಣ್ಯದಲ್ಲಿ ಕೆಂಪು ಕಲ್ಲು ಸಾಗಣೆ

ಬೆಟ್ಟ ಅಗೆತ; ಭೂಕುಸಿತದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಾಗರ ತಾಲ್ಲೂಕಿನ ಬ್ರಾಹ್ಮಣ ಬೇದೂರು ಬೆಟ್ಟದ ಮೇಲ್ಭಾಗದಲ್ಲಿ ನಡೆಯುತ್ತಿರುವ ಕೆಂಪು ಕಲ್ಲು ಗಣಿಗಾರಿಕೆ ತಡೆಯದಿದ್ದರೆ 2022ರ ಮಳೆಗಾಲದಲ್ಲಿ ಭಾರಿ ಭೂಕುಸಿತ ಸಂಭವಿಸುವ ಸಾಧ್ಯತೆ ಇದೆ ಎಂದು ಪರಿಸರ ವಿಜ್ಞಾನಿಗಳ ತಂಡ ಎಚ್ಚರಿಸಿದೆ.

ರಾಜ್ಯ ಜೀವ ವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ವಿಜ್ಞಾನಿಗಳಾದ ಡಾ.ಟಿ.ವಿ. ರಾಮಚಂದ್ರ, ಡಾ.ಕೇಶವ ಕೊರ್ಸೆ, ಡಾ.ಮಾರುತಿ ಅವರನ್ನು ಒಳಗೊಂಡ ತಂಡ ಬೆಟ್ಟಕ್ಕೆ ಈಚೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

ಬೇದೂರು ಗ್ರಾಮದ ದಟ್ಟ ಹಸಿರು ಬೆಟ್ಟದ ಮೇಲ್ಭಾಗದ ಸರ್ವೆ ನಂಬರ್ 77, 78, 74ರಲ್ಲಿ ಸುಮಾರು 17 ಎಕರೆ ಪ್ರದೇಶದಲ್ಲಿ 2 ವರ್ಷಗಳಿಂದ ಕೆಂಪು ಕಲ್ಲು ತೆಗೆಯಲಾಗುತ್ತಿದೆ. ಅರಣ್ಯ ಇಲಾಖೆಯಿಂದ ಯಾವುದೇ ಪರವಾನಗಿ ಇಲ್ಲದೆ ಎತ್ತರದ ಬೆಟ್ಟದಲ್ಲಿ ಗಣಿಗಾರಿಕೆ ಪ್ರದೇಶಕ್ಕೆ ಸಂಪರ್ಕ ಕಲ್ಪಿಸಲು ರಸ್ತೆ ನಿರ್ಮಿಸಲಾಗಿದೆ. 2020ರ ಮಳೆಗಾಲದಲ್ಲಿ ಗಣಿಗಾರಿಕೆಯ ಕಂದಕಗಳಲ್ಲಿ ನೀರು ತುಂಬಿಕೊಂಡು ಜಲ ಒತ್ತಡ ನಿರ್ಮಾಣವಾಗಿ ಬೆಟ್ಟದ ಬುಡದಲ್ಲಿ ಭೂಕುಸಿತ ಸಂಭವಿಸಿತ್ತು. ನಾಲ್ಕು ಮನೆಗಳು ನೆಲಸಮವಾಗಿದ್ದವು. ಗ್ರಾಮಸ್ಥರು ತಾಲ್ಲೂಕು, ಜಿಲ್ಲಾಡಳಿತ, ಅರಣ್ಯ ಇಲಾಖೆ, ಗಣಿ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಗಣಿಗಾರಿಕೆ ನಿಂತಿಲ್ಲ.

ಸಾಗರ ತಾಲ್ಲೂಕಿನ ಬ್ರಾಹ್ಮಣ ಬೇದೂರು ಬೆಟ್ಟದ ಮೇಲ್ಭಾಗದಲ್ಲಿ ಮಣ್ಣು ಗಣಿಗಾರಿಕೆ.

ತಂಡ ನೀಡಿದ ಅಧ್ಯಯನ ವರದಿ ಅನ್ವಯ ಬೇದೂರು ಬೆಟ್ಟದ ಅರಣ್ಯ ಪ್ರದೇಶದಲ್ಲಿ ನಿರಂತರ ಗಣಿಗಾರಿಕೆ, ರಸ್ತೆ ನಿರ್ಮಾಣ, ಭಾರಿ ವಾಹನಗಳ ಸಂಚಾರದ ಕಾರಣ ಭೂಕುಸಿತವಾಗಿದೆ. ಇದೇ ಸ್ಥಿತಿ ನಾಲ್ಕೈದು ತಿಂಗಳು ಮುಂದುವರಿದರೆ 15 ರೈತ ಕುಟುಂಬಗಳ ಮನೆಗಳು ಕೊಚ್ಚಿಹೋಗುವ, ತೋಟ-ಗದ್ದೆಗಳು ನಾಶವಾಗುವ ಪರಿಸ್ಥಿತಿ ಬರಬಹುದು ಎಂದು ಎಚ್ಚರಿಸಿದೆ. ವರದಿಯನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಪತ್ತು ಪ್ರಾಧಿಕಾರದ ಮುಖ್ಯಸ್ಥರು, ಗಣಿ ಇಲಾಖೆ ನಿರ್ದೇಶಕರು, ಅರಣ್ಯ ಇಲಾಖೆ, ಶಿವಮೊಗ್ಗ ಜಿಲ್ಲಾಧಿಕಾರಿಗೆ ನೀಡಲಾಗಿದೆ.

ಗಣಿಗಾರಿಕೆಯನ್ನು ತಕ್ಷಣ ತಡೆಯಬೇಕು. ಹಾನಿಗೆ ಒಳಗಾದ ಕುಟುಂಬಗಳಿಗೆ ಪರಿಹಾರ ತಕ್ಷಣ ಬಿಡುಗಡೆ ಮಾಡಬೇಕು.
ಅನಂತ ಹೆಗಡೆ ಅಶೀಸರ, ಮಾಜಿ ಅಧ್ಯಕ್ಷರು, ರಾಜ್ಯ ಜೀವ ವೈವಿಧ್ಯ ಮಂಡಳಿ

ಕಂದಾಯ ಕಾಯ್ದೆ, ಅರಣ್ಯ, ಜೀವ ವೈವಿಧ್ಯ, ಗಣಿ, ಪಂಚಾಯತ್ ರಾಜ್ ಕಾಯ್ದೆಗಳ ನೇರ ಉಲ್ಲಂಘನೆಯಾಗಿದೆ. ಜಿಲ್ಲಾಡಳಿತ ತಕ್ಷಣ ಗಣಿಗಾರಿಕೆ ನಿಷೇಧಿಸಬೇಕು. ಬೆಟ್ಟದಲ್ಲಿ ಗಣಿಗಾರಿಕೆ ಕಾರಣ ನಿರ್ಮಾಣವಾದ ರಸ್ತೆ ಸಂಚಾರ ನಿರ್ಬಂಧಿಸಬೇಕು. ಸ್ಥಳೀಯ ಗ್ರಾಮ ಪಂ. ಸಂಭವನೀಯ ಭೂಕುಸಿತದ ಬಗ್ಗೆ ರೈತರಲ್ಲಿ ಜಾಗೃತಿ ಮಾಡಿಸಬೇಕು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

ಸುದ್ದಿ 2 ನಿಮಿಷ

ಒಬಿಸಿ ಮೀಸಲಾತಿಗೆ ಅಡ್ಡಿ: ಜಾತಿ ಗಣತಿ ವರದಿಯಿಂದ ಪರಿಹಾರ– ಸಿದ್ದರಾಮಯ್ಯ

ಬೆಂಗಳೂರು: 'ಸುಪ್ರೀಂಕೋರ್ಟ್ ಇತ್ತೀಚೆಗೆ ನೀಡಿದ್ದ ಆದೇಶದ ಹಿನ್ನೆಲೆಯಲ್ಲಿ ಒಬಿಸಿ ವರ್ಗಕ್ಕೆ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿಗೆ ಎದುರಾಗುವ ಅಡ್ಡಿಯನ್ನು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ವರದಿಯಿಂದ ಪರಿಹರಿಸಿಕೊಳ್ಳಬಹುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿರುವ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಕ್ಷಣ ವಿರೋಧಪಕ್ಷಗಳ ನಾಯಕರು ಮತ್ತು ಕಾನೂನು ತಜ್ಞರ ಸಭೆ ಕರೆದು ಈ ಬಗ್ಗೆ ಚರ್ಚಿಸಬೇಕು. ಸುಪ್ರೀಂಕೋರ್ಟ್ ಆದೇಶದಿಂದ ಸೃಷ್ಟಿಯಾಗಿರುವ ಬಿಕ್ಕಟ್ಟು ಪರಿಹಾರಕ್ಕೆ ಅಭಿಪ್ರಾಯ ಪಡೆದು ಹಿಂದುಳಿದ ಜಾತಿಗಳಿಗೆ ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸುಪ್ರೀಂ ಕೋರ್ಟ್ ಆದೇಶದಿಂದ ಅವರು ಅವಕಾಶ ಕಳೆದುಕೊಂಡರೆ ಅದು ಸಾಮಾಜಿಕ ನ್ಯಾಯದ ಉಲ್ಲಂಘನೆಯಾಗುತ್ತದೆ. ಮೂರು ಹಂತದ ಪರಿಶೀಲನೆ ನಡೆಸಿ ಹಿಂದುಳಿದ ಜಾತಿಗಳ ರಾಜಕೀಯ ಮೀಸಲಾತಿ ರೂಪಿಸಬೇಕೆಂದು ಸುಪ್ರೀಂಕೋರ್ಟ್ ಹೇಳಿದೆ. ಹಿರಿಯ ವಕೀಲ ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ಕಾರ್ಯವ್ಯಾಪ್ತಿಯಲ್ಲಿ ರಾಜಕೀಯ ಕ್ಷೇತ್ರ ಸೇರಿಲ್ಲದಿದ್ದರೂ ಎಲ್ಲ ಜಾತಿಯ ಜನರ ರಾಜಕೀಯ ಪ್ರಾತಿನಿಧ್ಯದ ಮಾಹಿತಿಯನ್ನು ಸಂಗ್ರಹಿಸಿದೆ. ರಾಜ್ಯ ಸರ್ಕಾರ ಈ ಅಂಶವನ್ನು ಗಮನಕ್ಕೆ ತಂದರೆ ಸುಪ್ರೀಂಕೋರ್ಟ್ ಗಣನೆಗೆ ತೆಗೆದುಕೊಳ್ಳಬಹುದು' ಎಂದು ಅಭಿಪ್ರಾಯಪಟ್ಟರು.

'2010ರಲ್ಲಿಯೇ ಸುಪ್ರೀಂಕೋರ್ಟ್ ರಾಜಕೀಯ ಮೀಸಲಾತಿಗೆ ಪ್ರತ್ಯೇಕ ಮಾನದಂಡ ರೂಪಿಸಲು ಆದೇಶಿಸಿತ್ತು. ಇದನ್ನು ಪರಿಶೀಲಿಸಲು ಆಗ ಮುಖ್ಯಮಂತ್ರಿ ಆಗಿದ್ದ ನಾನು ಕಾನೂನು ಸಚಿವರಾಗಿದ್ದ ಟಿ.ಬಿ. ಜಯಚಂದ್ರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದೆ. ಅದೇ ಸಮಿತಿಯನ್ನು ಪುನರ್ ರಚಿಸಿ ಬಿಕ್ಕಟ್ಟಿಗೆ ಪರಿಹಾರಕ್ಕೆ ಪ್ರಯತ್ನಿಸಬೇಕು' ಎಂದಿದ್ದಾರೆ.



ಪ್ರಶಸ್ತಿ ಪ್ರದಾನ

ಮೂಡುಬಿದಿರೆ ಸಮೀಪದ ಕಾಂತಾವರ ಕನ್ನಡ ಸಂಘದಲ್ಲಿ ಭಾನುವಾರ ಲೇಖಕಿ ಡಾ. ತಾರಿಣಿ ಶುಭದಾಯಿನಿ ಅವರಿಗೆ ಮುದ್ದಣ ಕಾವ್ಯ ಪ್ರಶಸ್ತಿ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರಿಗೆ ಪಾ.ವೆಂ. ಆಚಾರ್ಯ ಹೆಸರಿನ ಪತ್ರಿಕಾ ಮಾಧ್ಯಮ ಪ್ರಶಸ್ತಿ ಹಾಗೂ ಡಾ. ಬೇಲೂರು ರಘುನಂದನ ಅವರಿಗೆ 'ರಂಗಸನ್ಮಾನ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್.ಎನ್. ಸೇತುರಾಮ್, ಹರಿಕೃಷ್ಣ ಪುನರೂರು, ಡಾ.ನಾ. ಮೊಗಸಾಲೆ ಹಾಗೂ ಇತರರು ಇದ್ದರು

ಹಂಪಿ ವಿ.ವಿಯಲ್ಲಿ ದುರ್ಬಳಕೆ: ಮಲ್ಲಿಕಾ ಘಂಟಿ ಪ್ರತಿಕ್ರಿಯೆ

'ಸರಿ ಎಂದವರಿಂದಲೇ ಈಗ ಆರೋಪ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ನಾನು ಕುಲಪತಿಯಿದ್ದಾಗ, ಹಾಲಿ ಕುಲಪತಿ ಪ್ರೊ.ಸ.ಚಿ.ರಮೇಶ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರೆ, ಕುಲಸಚಿವ ಪ್ರೊ.ಎ.ಸುಬ್ಬಣ್ಣ ರೈ ಅವರು ಕಟ್ಟಡ ಸಲಹಾ ಸಮಿತಿ ಸದಸ್ಯರಾಗಿದ್ದರು. ಎಲ್ಲ ಕಾಮಗಾರಿ, ಖರೀದಿ ಪ್ರಕ್ರಿಯೆಗಳು ಸರಿ ಇವೆ ಎಂದು ಅನುಮೋದನೆ ನೀಡಿದ್ದರು. ಇವರಿಬ್ಬರೂ ಈಗ ಕಾಮಗಾರಿ, ಖರೀದಿಯಲ್ಲಿ ಅಕ್ರಮವಾಗಿದೆ ಎಂದು ಆರೋಪಿಸುವುದು ಎಷ್ಟು ಸರಿ' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಎಸ್.ಘಂಟಿ ಅವರು ಪ್ರಶ್ನಿಸಿದ್ದಾರೆ.

'ಕುಲಸಚಿವ ಸುಬ್ಬಣ್ಣ ರೈ ಅವರಿದ್ದ ಆಗಿನ ಪರಿಶೀಲನಾ ಸಮಿತಿಯು, ಕೆಆರ್‌ಐಡಿಎಲ್ ಸಂಸ್ಥೆಯು ನಿರ್ವಹಿಸಿದ್ದ ಕಾಮಗಾರಿಗಳು ತೃಪ್ತಿಕರವಾಗಿವೆ ಎಂದು 2018ರ ಆ.8ರ ಸಭೆಯಲ್ಲಿ ತೀರ್ಮಾನಿಸಿ, ಹಣ ಪಾವತಿಗೆ ಒಪ್ಪಿಗೆ ಸೂಚಿಸಿದ್ದರು. ಆಡಳಿತಾತ್ಮಕ ವಿಚಾರಣೆ ನಡೆಸಿ, ಕ್ರಮಕೈಗೊಳ್ಳುವುದಾದರೆ ಇವರಿಬ್ಬರ ವಿರುದ್ಧವೇ ಮೊದಲು ಕ್ರಮ ಜರುಗಿಸಬೇಕು' ಎಂದೂ ಅವರು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

'2015ರಿಂದ 2019ರವರೆಗೆ ನಮ್ಮ ಅವಧಿಯಲ್ಲಿ ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಕಾಮಗಾರಿ, ಖರೀದಿ ಮಾಡಲಾಗಿದೆ ಎಂಬುದು ಸತ್ಯಕ್ಕೆ ದೂರವಾದುದು. ಎಲ್ಲ ಕಾಮಗಾರಿಗಳನ್ನು ಕಟ್ಟಡ ಸಲಹಾ ಸಮಿತಿ, ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು, ಕೆಆರ್‌ಐಡಿಎಲ್ ಸಂಸ್ಥೆ ಮೂಲಕ ನಿರ್ವಹಿಸಲಾಗಿದೆ. ಅದು ಸರ್ಕಾರದ ಅಂಗ ಸಂಸ್ಥೆ. ಸಾಮಗ್ರಿಗಳನ್ನು ಕಿಯೋನಿಕ್ಸ್, ಎಂಎಸ್‌ಐಎಲ್, ಕೆಆರ್‌ಐಡಿಎಲ್, ಜೆಮ್ ಮೂಲಕ ಖರೀದಿಸಲಾಗಿದೆ. ಇದರಲ್ಲಿ ಹಣ ದುರ್ಬಳಕೆ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದಿದ್ದಾರೆ.

'ಕಾಮಗಾರಿಗಳ ಭೌತಿಕ ತಪಾಸಣಾ ಸಮಿತಿಯು ವರದಿಯಲ್ಲಿ ನಿಯಮಾನುಸಾರ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ವಿಶ್ವವಿದ್ಯಾಲಯಕ್ಕೆ ಮಾಹಿತಿ ನೀಡಿದೆ. ಕಟ್ಟಡ ಕಾಮಗಾರಿಗಳನ್ನು ಕೆಆರ್‌ಐಡಿಎಲ್ ನಿರ್ವಹಿಸಿದ್ದು, ಕೆಟಿಪಿಪಿ ಕಾಯ್ದೆ ಉಲ್ಲಂಘಿಸುವ ಪ್ರಶ್ನೆ ಮೂಡುವುದಿಲ್ಲ. ನನ್ನ ಹಾಗೂ ನನ್ನ ಅವಧಿಯಲ್ಲಿ ಕುಲಸಚಿರಾಗಿದ್ದ ಡಿ.ಪಾಂಡುರಂಗಬಾಬು ಅವರ ತೇಜೋವಧೆಗೆ, ಈಗ ಅವ್ಯವಹಾರನಡೆದಿದೆ ಎಂದು ಆರೋಪಿಸಲಾಗುತ್ತಿದೆ. ಇದರಲ್ಲಿ ಹುರುಳಿಲ್ಲ' ಎಂದಿದ್ದಾರೆ.

'ಸೋಮನಾಥ ನೇಮಕ ನಿಯಮಬಾಹಿರ'

'ಜೈಲು ಶಿಕ್ಷೆ ಕೂಡ ಅನುಭವಿಸಿ ಬಂದಿರುವ ಎಚ್.ಎಂ. ಸೋಮನಾಥ ಅವರ ಅಮಾನತನ್ನು ರದ್ದುಪಡಿಸಿ ಅವರನ್ನು ಕಾನೂನು ಘಟಕಕ್ಕೆ ನೇಮಿಸಿಕೊಂಡಿರುವ ಕುಲಪತಿ ಪ್ರೊ.ಸ.ಚಿ. ರಮೇಶ ಕ್ರಮ ನಿಯಮಬಾಹಿರ' ಎಂದು ಮಲ್ಲಿಕಾ ಎಸ್. ಘಂಟಿ ಆರೋಪಿಸಿದ್ದಾರೆ.

'ಅಮಾನತಾಗಿದ್ದ ಸೋಮನಾಥ ವಿರುದ್ಧ ಮಿಟ್ಟಲಕೋಡ ಎಂಬ ನಿವೃತ್ತ ನ್ಯಾಯಾಧೀಶರ ಏಕ ಸದಸ್ಯ ವಿಚಾರಣಾ ಸಮಿತಿಯಿಂದ ತನಿಖೆ ನಡೆಸಿ ವರದಿ ಪಡೆಯಲಾಗಿದೆ. ಅದರ ಪ್ರಕಾರ ಸೋಮನಾಥ ವಿರುದ್ಧದ 8 ಆರೋಪಗಳಲ್ಲಿ ಐದು ಸಾಬೀತಾಗಿವೆ. ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ. ಆದರೆ, ಕುಲಪತಿ ರಮೇಶ ಅದನ್ನು ಮರೆಮಾಚಿ ಕೆಲಸಕ್ಕೆ ನೇಮಿಸಿದ್ದಾರೆ. ಇಷ್ಟೇ ಅಲ್ಲ, ಭ್ರಷ್ಟಾಚಾರ ನಡೆದಿದೆ ಎಂದು ಲೋಕಾಯುಕ್ತಕ್ಕೆ ದೂರು ಕೊಟ್ಟಿರುವ ಸೋಮನಾಥ ಅವರನ್ನೇ ಕಾನೂನು ಘಟಕದ ಅಧಿಕಾರಿಯಾಗಿ ನೇಮಿಸಿರುವ ಕ್ರಮ ಸರಿಯಲ್ಲ. ಇದರಿಂದ ದಾಖಲೆಗಳು ತಿರುಚಿರುವ ಶಂಕೆ ಇದೆ' ಎಂದರು.

ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರ ಮುಷ್ಕರ ಇಂದಿನಿಂದ

ಬೆಂಗಳೂರು: ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 30 ಸಾವಿರ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಸಮಾನ ವೇತನ, ಸೇವಾ ಭದ್ರತೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸೋಮವಾರದಿಂದ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಮುಷ್ಕರ ನಡೆಯಲಿದೆ.

'14ರಿಂದ ಕಪ್ಪುಪಟ್ಟಿ ಧರಿಸಿ ಮುಷ್ಕರ ನಡೆಸುತ್ತೇವೆ. ಫೆ.21ರಿಂದ ಎರಡನೇ ಹಂತದಲ್ಲಿ ಧರಣಿ ಮಾಡಲಾಗುವುದು. ನೌಕರರು ಆತ್ಮಸ್ಥೈರ್ಯದಿಂದ ಕೆಲಸ ಮಾಡುವಂತೆ ಅಸ್ಸಾಂ, ಹರಿಯಾಣ, ಮಣಿಪುರ ಹಾಗೂ ಇತರೆ ರಾಜ್ಯಗಳು ಕೈಗೊಂಡ ಉತ್ತಮ ನಿರ್ಧಾರಗಳನ್ನು ರಾಜ್ಯದಲ್ಲಿಯೂ ಕೈಗೊಳ್ಳಬೇಕು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ವಿಶ್ವಾರಾಧ್ಯ ಎಚ್. ವೈ. ಆಗ್ರಹಿಸಿದ್ದಾರೆ.

'ನೌಕರರ ಕುಂದುಕೊರತೆಗಳ ಬಗ್ಗೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ವರದಿ ಅನುಷ್ಠಾನಗೊಳಿಸಲು ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ. ಹೋರಾಟ ನಡೆಸಿದರೂ ಸರ್ಕಾರ ಸ್ಪಂದಿಸಿಲ್ಲ. ಹೀಗಾಗಿ, ಮುಷ್ಕರದ ಹಾದಿ ಹಿಡಿಯುತ್ತಿದ್ದೇವೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ತರಳಬಾಳು ಹುಣ್ಣಿಮೆ' ಉತ್ಸವ ಇಂದಿನಿಂದ

ಪ್ರಜಾವಾಣಿ ವಾರ್ತೆ

ಸಿರಿಗೆರೆ: ಇಲ್ಲಿನ ತರಳಬಾಳು ಬೃಹನ್ಮಠದಲ್ಲಿ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಫೆ.14ರಿಂದ 16ರವರೆಗೆ 'ತರಳಬಾಳು ಹುಣ್ಣಿಮೆ' ಉತ್ಸವ ನಡೆಯಲಿದೆ.

ಶ್ರೀಮಠದ ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಸಂಗಮದ 'ಹುಣ್ಣಿಮೆ' ಕಾರ್ಯಕ್ರಮ ಕೋವಿಡ್ ಕಾರಣಕ್ಕೆ ಒಂಬತ್ತು ದಿನಗಳ ಬದಲಾಗಿ ಮೂರು ದಿನ ನಡೆಯಲಿದೆ. ಮಠದ ಗುರುಶಾಂತೇಶ್ವರ ಭವನದ ಎದುರು ವೇದಿಕೆ ಸಜ್ಜಾಗಿದೆ. ವೇದಿಕೆ ಮುಂಭಾಗದಲ್ಲಿ ಸಮಾರಂಭ ವೀಕ್ಷಿಸಲು ಐದು ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮ ಸರಳವಾಗಿ ನಡೆಯುತ್ತಿದ್ದರೂ ಸ್ವಾಮೀಜಿ ಅವರ ಸಿಂಹಾಸನಾರೋಹಣ ದಿನ ಹೆಚ್ಚಿನ ಜನರು ಸೇರುವ ನಿರೀಕ್ಷೆ ಇದೆ.

ವಿಚಾರಗೋಷ್ಠಿ, ಮಲ್ಲಕಂಬ, ಜಡೆಕೋಲಾಟ, ಲಂಬಾಣಿ ನೃತ್ಯ, ವಚನ ನೃತ್ಯ, ಜನಪದ ನೃತ್ಯ ಸೇರಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆರುಗು ನೀಡಲಿವೆ. ಹಿರಿಯ ಗುರುಗಳಾದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರ ಕಾಲದ 'ಚಿತ್ರಪಟಲ' ಆಕರ್ಷಿಸಲಿದೆ.

ಭಕ್ತರಿಂದ ಈಗಾಗಲೇ ದೇಣಿಗೆಯ ಮಹಾಪೂರ ಹರಿದುಬಂದಿದೆ. ಪಾಯಸ, ಲಾಡು, ಅನ್ನ, ಸಾಂಬಾರ್, ಉಪ್ಪಿನಕಾಯಿ, ಕಡಲೆಕಾಳು, ಬದನೆಕಾಯಿ ಪಲ್ಯದ ಪ್ರಸಾದದ ವ್ಯವಸ್ಥೆ ನಡೆಯುತ್ತಿದೆ. ಭಕ್ತರು ಮಾಸ್ಕ್ ಧರಿಸಿ ಅಂತರ ಕಾಪಾಡಿಕೊಳ್ಳಬೇಕು. ಕಾರ್ಯಕ್ರಮವನ್ನು 'Taralabalu Mutt Sirigere' ಯೂಟ್ಯೂಬ್ ಚಾನಲ್ ಮೂಲಕವೂ ವೀಕ್ಷಿಸಬಹುದು ಎಂದು ಮಠದ ಪ್ರಕಟಣೆ ತಿಳಿಸಿದೆ.

ಒಳನೋಟ

ಗಾಂಜಾ ಸುಳಿಯಲ್ಲಿ ರಾಜ್ಯ

ಬೆಂಗಳೂರು: 'ಗಾಂಜಾ ಗಮ್ಮತ್ತಿನ ಆಪತ್ತು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಫೆ.13) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಡ್ರಗ್ಸ್'ನಿಂದ ದೂರವಿರಿ

ಇಂದಿನ ಯುವಕರು ಮಾದಕ ವಸ್ತುಗಳ ವ್ಯಸನಗಳಿಗೆ ಅಂಟಿಕೊಂಡಿದ್ದಾರೆ. ಇದು, ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಯುವ ಜನರು ಅದರಿಂದ ಹೊರಬರುವುದು ಕಷ್ಟ. ಸದೃಢ ಸಮಾಜ ನಿರ್ಮಾಣಕ್ಕಾಗಿ ಯುವಜನರು ಮಾದಕ ವಸ್ತುಗಳಿಂದ ದೂರವಿರಬೇಕು. ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬದುಕು ರೂಪಿಸಿಕೊಳ್ಳಬೇಕು.

ರಾಹುಲ್ ಜಾಧವ, ಕಲಬುರಗಿ

ನಿಷೇಧವಿದ್ದರೂ ಜಾಲ ಸಕ್ರಿಯ

ರಾಜ್ಯದ ಯುವ ಸಮೂಹ ಕ್ಷಣಿಕ ಸುಖದ ನಶೆಯಲ್ಲಿ ತೇಲುತ್ತಿರುವುದು ಕಳವಳಕಾರಿ ಸಂಗತಿ. ಈ ಸಮಸ್ಯೆ



ಭವಿಷ್ಯದಲ್ಲಿ ಮತ್ತಷ್ಟು ಗಂಭೀರವಾಗುವುದರಲ್ಲಿ ಅನುಮಾನವಿಲ್ಲ. ಡೆಲಿವರಿ ಸಿಬ್ಬಂದಿಯೇ ಗಾಂಜಾ ಪೂರೈಕೆದಾರರಾಗಿರುವುದು ಆತಂಕ ತರಿಸಿದೆ. ಇಂತಹ ಚಟುವಟಿಕೆಗಳ ಮೇಲೆ ನಿಗಾ ವಹಿಸುವುದು ಅಗತ್ಯ. ನಿಷೇಧದ ನಡುವೆಯೂ ಜಾಲವಾಗಿ ಹಬ್ಬಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಈ ಜಾಲದಲ್ಲಿ ಯಾರೇ ಇದ್ದರೂ ಶಿಕ್ಷೆಗೆ ಒಳಪಡಿಸಬೇಕು. ಯುವ ಜನರನ್ನು ಅಪಾಯದಿಂದ ರಕ್ಷಿಸಬೇಕು.

ಸುರೇಶ್, ಗಂಗಾವತಿ

ಪೊಲೀಸರಿಗೆ ಮಾಹಿತಿ ಇರುತ್ತದೆ

ಯುವ ಜನರು ಹೆಚ್ಚಾಗಿ ಗಾಂಜಾ ವ್ಯಸನಿಗಳಾಗುತ್ತಿರುವುದು ಬೇಸರದ ಸಂಗತಿ. ಮಾದಕ ವಸ್ತು ಸೇವನೆಯಿಂದ ಸಂತೋಷ ಕ್ಷಣಿಕ. ಆದರೆ, ದೇಹಕ್ಕೆ ಹಾನಿ ಅಪಾರ. ಇತ್ತೀಚಿನ ದಿನಗಳಲ್ಲಿ ಕಾಲೇಜು ವಿದ್ಯಾರ್ಥಿಗಳೂ ಈ ವ್ಯಸನಕ್ಕೆ ಒಳಗಾಗುತ್ತಿರುವುದು ಆತಂಕದ ವಿಚಾರ. ಪೊಲೀಸರಿಗೆ ಇದರ ಮಾಹಿತಿ ಇದ್ದರೂ ಕ್ರಮ ಕೈಗೊಳ್ಳದಿರುವುದರಿಂದ ಜಾಲವಾಗಿ ಬೆಳೆಯುತ್ತಿದೆ. ಈ ಜಾಲದಲ್ಲಿ ಶ್ರೀಮಂತರ ಮಕ್ಕಳು ಹೆಚ್ಚಾಗಿ ಶಾಮೀಲಾಗಿರುತ್ತಾರೆ. ಇವರ ವಿರುದ್ಧ ಕಾನೂನು ಕ್ರಮ ಕೈಗೊಂಡರೆ ಮಾತ್ರ ರಾಜ್ಯ ಸುಭದ್ರ.

ದಿಲೀಪ್, ದಾವಣಗೆರೆ

'ಗಾಂಜಾ ಸಿಟಿ'ಯಾಗಿದೆ

ಗಾರ್ಡನ್ ಸಿಟಿಯಾಗಿದ್ದ ಬೆಂಗಳೂರು 'ಗಾಂಜಾ ಸಿಟಿ'ಯಾಗಿದೆ. ಸರ್ಕಾರದ ನಿರ್ಲಕ್ಷ್ಯವೇ ಗಾಂಜಾ ಅವ್ಯವಹಾರಕ್ಕೆ ಕಾರಣ. ಕಳೆದ ವರ್ಷಗಳಲ್ಲಿ ಮಾದಕ ಜಾಲದಲ್ಲಿ ಬಂಧನಕ್ಕೆ ಒಳಗಾಗಿದ್ದ ನಟಿಯರಿಗೆ ಯಾವುದೇ ಕಠಿಣ ಶಿಕ್ಷೆ ಆಗದಿರುವುದರಿಂದಲೂ ಡ್ರಗ್ಸ್ ಜಾಲ ನಿರ್ಭೀತಿಯಿಂದ ತಲೆ ಎತ್ತಿದೆ. ಸಿರಿವಂತರು, ರಾಜಕಾರಣಿಗಳು, ಅಧಿಕಾರಿಗಳು ಮತ್ತು ಸೆಲೆಬ್ರಿಟಿಗಳ ಮಕ್ಕಳೇ ಜಾಲದಲ್ಲಿ ಮುಂಚೂಣಿಯಲ್ಲಿದ್ದಾರೆ. ಮಾದಕ ವಸ್ತುಗಳ ಮಾರಾಟ ಮಾಡುವ ಮತ್ತು ಕೊಳ್ಳುವವರನ್ನು ಪತ್ತೆ ಹಚ್ಚಿ, ಶಿಕ್ಷೆ ನೀಡಬೇಕು.

ಎಸ್.ಜಿ.ಹಿರೇಮಠ, ಧಾರವಾಡ

ಪ್ರಭಾವಿಗಳ ಆಸರೆ

ಗಾಂಜಾ ಜಾಲಕ್ಕೆ ಪ್ರಭಾವಿಗಳು ಆಸರೆಯಾಗಿರುವುದರಿಂದ ಸಂತೆಯಲ್ಲಿ ತರಕಾರಿ ಸಿಗುವಷ್ಟು ಸುಲಭವಾಗಿ ಗಾಂಜಾ ಲಭ್ಯವಾಗುತ್ತಿದೆ. ಇದು, ಪೊಲೀಸ್ ಇಲಾಖೆಗೂ ಗೊತ್ತಿದೆ. ಗಾಂಜಾ ಮಾರಾಟಕ್ಕೆ ಪೊಲೀಸರೇ ಪರವಾನಗಿ ಆಗಿದ್ದಾರೆ. ಈ ಕಾರಣದಿಂದ ಗಾಂಜಾ ದಂಧೆಯಾಗಿ ಪರಿಣಮಿಸಿದೆ. ದಂಧೆಯನ್ನು ಪೋಷಿಸುತ್ತಿರುವ ಪ್ರಭಾವಿಗಳನ್ನು ಹೊರಗೆಳೆಯಬೇಕಿದೆ.

ದೀಪು ರಾವ್, ಬೆಂಗಳೂರು

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ರಾಯಚೂರು ಅರಣ್ಯ ವಿಭಾಗ, ರಾಯಚೂರು
ವಿಳಾಸ : ಕೋರ್ಟ ರಸ್ತೆ, ರಾಯಚೂರು–584101, ದೂ.: 08532-230029 ಈ–ಮೇಲ್ : dcf.trcr@gmail.com

ಸಂ: ಎ2/ಬಜೆಟ್/ಕಾಂಪಾ/ರೂ.ಸ್ಟಾಕ್/ಟೆಂಡರ್/ಸಿಆರ್–63/2021–22 ದಿನಾಂಕ : 09–02–2022

:: ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ ::
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ) ಎರಡನೇ ಸಲ)

ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ತಿಳಿಯಪಡಿಸುವುದೇನೆಂದರೆ, 2021–22ನೇ ಸಾಲಿನಲ್ಲಿ ರಾಯಚೂರು ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಕಾಂಪಾ ಘಟಕದ ಯೋಜನೆಯಡಿಯಲ್ಲಿ "Protection of plantation & Forest through rubble stone wall" ಕಾಮಗಾರಿಯನ್ನು ಹಾಗೂ ಅಭಿವೃದ್ಧಿ ಘಟಕದ ನಿಯಂತ್ರಣದಲ್ಲಿರುವ ಯೋಜನೆಯಡಿಯಲ್ಲಿ "Formation of Barbed wire fencing (4 strands) with cement pillars fence post" ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ರಾಯಚೂರು ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ಈಗಾಗಲೇ ನೊಂದಾಯಿತ ಗುತ್ತಿಗೆದಾರರು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಬಿಡ್‌ಗಳನ್ನು ಸಲ್ಲಿಸಲು ದಿನಾಂಕ : 19–02–2022 ಸಂಜೆ 4.00 ಗಂಟೆ ಕೊನೆಯ ದಿನ ಇದ್ದು, ತಾಂತ್ರಿಕ ಬಿಡ್‌ಗಳನ್ನು ದಿನಾಂಕ : 20–02–2022 ರಂದು ಸಂಜೆ 4.00 ಗಂಟೆ ನಂತರ ತೆರೆಯಲಾಗುವುದು. ಯಶಸ್ವಿ ತಾಂತ್ರಿಕ ಬಿಡ್‌ಗಳಿಗೆ ಆರ್ಥಿಕ ಬಿಡ್‌ಗಳನ್ನು ದಿನಾಂಕ : 21–02–2022 ರಂದು 4.00 ಗಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಅಥವಾ ಈ ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ಅಥವಾ ಕಚೇರಿಯ ದೂರವಾಣಿ ಸಂಖ್ಯೆ : 08532–230029 ಗೆ ಸಂಪರ್ಕಿಸಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ
ಪ್ರಾದೇಶಿಕ ಅರಣ್ಯ ವಿಭಾಗ, ರಾಯಚೂರು
ವಾ.ಸಾ.ಸಂ.ಇ/ರಾಯಚೂರು/619/ಎಂ.ಸಿ.&ಎ/2021–22

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಕೃಭಾಜನಿನಿ ಐಬಿಸಿ ವಿಭಾಗ–1 ಕೆಂಭಾವಿ–585216,
ತಾ: ಸುರಪುರ, ಜಿ: ಯಾದಗೀರ, ದೂ: 08443-278674, ಇ–ಮೇಲ್: ee_ibcdiv1kembhavi@yahoo.com

ಸಂಖ್ಯೆ: ಕೃಭಾಜನಿನಿ/ಐಬಿಸಿ/ವಿಭಾಗ–1/ಟಿಬಿ/2021–22/1065 ದಿನಾಂಕ: 08.02.2022

ತಿದ್ದುಪಡಿ ಸಂ.–1 (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: Roads and bridges ಅಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು 01 ಕಾಮಗಾರಿಗೆ ಮರು ಟೆಂಡರ್ ಪ್ರಕಟಣೆ ನೀಡುವ ಕುರಿತು.
ಉಲ್ಲೇಖ: 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ.: 2021–22/1006, ದಿನಾಂಕ: 31.12.2021.
ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಪಟ್ಟಂತೆ ಈ ಮೂಲಕ ಮೇಲ್ಕಾಣಿಸಿದ ಟೆಂಡರಿನಲ್ಲಿ ಪ್ರಕಟಿಸಲಾದ ದಿನಾಂಕಗಳಲ್ಲಿ ಹಾಗೂ ನೋಟಿಫಿಕೇಶನನಲ್ಲಿ ಬದಲಾವಣೆ ಮಾಡಲಾಗಿದೆ ಹಾಗೂ ಒಟ್ಟು 01 ಕಾಮಗಾರಿಗೆ ಅಂದಾಜು ಮೊತ್ತ 67.99 ಲಕ್ಷ ರೂ.ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕೆಳಕಾಣಿಸಿದ ದಿನಾಂಕಗಳನ್ನು ಬದಲಾವಣೆ ಮಾಡಲಾಗಿದೆ.
ಬದಲಾವಣೆ ಮಾಡಿದ ಕ್ಯಾಲೆಂಡರ್ ಇವೆಂಟ್ಸ್‌ಗಳು:

ಕ್ರ.ಸಂ.	ನೋಟಿಫಿಕೇಶನ ದಿನಾಂಕ: 31–12–2021 ರಂತೆ	ಬದಲಾವಣೆ ಮಾಡಿದ ಕ್ಯಾಲೆಂಡರ ಇವೆಂಟ್ಸಗಳು
1	Instead of requisite Earnest Money Deposit- Annexure Declaration should be uploaded (NSIC/MSME Certificates are not admissible) in prescribed format as per G.O.FD.Exp-675 Dtd: 22.12.2020. ಇ.ಎಂ.ಡಿ ಮೊತ್ತ:0.00 ಲಕ್ಷಗಳು	The requisite Earnest Money Deposit in e-cash only (NSIC / MSME certificates are not admissible). ಇ.ಎಂ.ಡಿ ಮೊತ್ತ:1.36 ಲಕ್ಷಗಳು
2	ಗುತ್ತಿಗೆದಾರರು ದಿನಾಂಕ: 06–01–2022 ರಿಂದ 04–02–2022 ರ ಸಾಯಂಕಾಲ 4.30 ಘಂಟೆಯವರೆಗೆ ಇ–ಟೆಂಡರ ಮುಸ್ತಕವನ್ನು Access ಮಾಡಬಹುದು.	ಗುತ್ತಿಗೆದಾರರು ದಿನಾಂಕ: 15–02–2022 ರಿಂದ 28–02–2022 ರ ಸಾಯಂಕಾಲ 4.30 ಘಂಟೆಯವರೆಗೆ ಇ–ಟೆಂಡರ ಮುಸ್ತಕವನ್ನು Access ಮಾಡಬಹುದು.
3	ಭರ್ತಿಗೊಳಿಸಿದ ಇ–ಟೆಂಡರ ಮುಸ್ತಕವನ್ನು ದಿನಾಂಕ: 06–01–2022 ರಿಂದ 04–02–2022 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.	ಭರ್ತಿಗೊಳಿಸಿದ ಇ–ಟೆಂಡರ ಮುಸ್ತಕವನ್ನು ದಿನಾಂಕ: 15–02–2022 ರಿಂದ 28–02–2022 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.
4	ತಾಂತ್ರಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 07.02.2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.	ತಾಂತ್ರಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 03.03.2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
5	ಆರ್ಥಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 09.02.2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.	ಆರ್ಥಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 05.03.2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.

ಇನ್ನುಳಿದ ನಿಯಮ ಶರತ್ತುಗಳು ಉಲ್ಲೇಖದಲ್ಲಿರುವಂತೆ ಟೆಂಡರ ಪ್ರಕಟಣೆ ಸಂಖ್ಯೆ (1) ರಲ್ಲಿರುವಂತೆ ಯಥಾಸ್ಥಿತಿಯಲ್ಲಿ ಇರುತ್ತವೆ. ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಲಾದ ಅಧಿಕಾರಿಗಳ ಕಚೇರಿಯಲ್ಲಿ ಸಮಯದಲ್ಲಿ ಅಥವಾ http://eproc.karnataka.gov.in/eportal/Index.seam ರಲ್ಲಿ .ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ–585216
ವಾ.ಸಾ.ಸಂ.ಇ/ಯಾದಗಿರಿ/381/ಎಂಸಿಎ/2021–22

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
Azadi Ka Amrit Mahotsav

14 ಮತ್ತು 15 ವರ್ಷ ಪಕ್ವತಾ ಅವಧಿಯ ಕರ್ನಾಟಕ ಸರ್ಕಾರ ಭದ್ರತಾ ಪತ್ರಗಳ ಹರಾಜು

ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು ₹4000 **ಕೋಟಿ** ರೂಪಾಯಿಗಳ (ಮುಖ ಬೆಲೆ) ಭದ್ರತಾ ಪತ್ರಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.

ಬಹುದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸಲ್ಯೂಶನ್ (ಈ–ಕುಬೇರ್) ವ್ಯವಸ್ಥೆಯ ಮೂಲಕ **ಫೆಬ್ರವರಿ 15, 2022 (ಮಂಗಳವಾರ)**ರಂದು ನಡೆಸಲಾಗುವುದು. ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ **(https://rbiretaildirect.org.in)** ನಾನ್–ಕಾಂಪಿಟಿಟೀವ್ ಸ್ಕೀಮ್ ಅನುಸಾರ ವೈಯಕ್ತಿಕ ವಿನಿಯೋಜಕರು ಕೂಡ ಬಿಡ್ ಮಾಡಬಲ್ಲರು. ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ **ಫೆಬ್ರವರಿ 11, 2022 (ಶುಕ್ರವಾರ)** ದಿನಾಂಕದ ಪತ್ರಿಕಾ ಪ್ರಕಟಣೆ **RBI** ವೆಬ್ ತಾಣ **(www.rbi.org.in)**ಯನ್ನು ನೋಡಿ.

"ಹಣ ನೀಡುವ ಭರವಸೆ ಕೊಡುವ ಇ-ಮೇಲ್/ಎಸ್‌ಎಂಎಸ್/ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ"

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notification

The Karnataka State Cricket Association, M. Chinnaswamy Stadium, Cubbon Road, Bangalore, invites sealed tenders from GST Compliant, registered contractors who have completed similar work , for providing & installation of entrance canopy for Karnataka State Cricket Stadium at Autonagar, Belgaum
The details of issue/submission of tender document are as follows :-
1. Name of work :- Providing & Installation of entrance canopy for Karnataka State Cricket Stadium at Autonagar, Belgaum
2. Estimated Cost :- Rs. 42.00 Lakhs
3. Earnest Money Deposit :- Rs. 42,000/- should be enclosed in the technical bid cover
4. Cost of tender form :- Rs. 2,500/- plus GST (Non Refundable)
5. Date of issue of tender form :- 15/2/2022 to 02/3/2022
6. Pre bid meeting :- 4/3/2022 at 3.30 p.m
7. Last date of submission of filled tender form two covers bid system :- 8/3/2022 up to 4.30 p.m (Technical & Commercial Separately)
8. Technical bid opening :- On the same day between 5.00 p.m to 5.30 p.m
In case there is a delay, the date & time would be informed to the bidders.
9. Completion of work by :- 3(Three) months from the date of work order
Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkatesh Prasad, AGM Civil Engineering Dept , Mobile No. 9945604515/8150900022

Hon. Secretary, KSCA

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052.

ಸಂಖ್ಯೆ: ಕವಶಿಸಸ/ಸಕಾಅ/ಟೆಂಡರ್–31/2021–22 ದಿನಾಂಕ: 11.02.2022

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **1) ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲೂಕು, ಕಡ್ಲೆಗುಡ್ಡ (ಬೊಮ್ಮನಹಳ್ಳಿ) ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಯ ಕಟ್ಟಡ ಸಂಕೀರ್ಣಕ್ಕೆ ಆವರಣ ಗೋಡೆ. ಆಡಿಟೋರಿಯಂ ಮತ್ತು ಮೂಲಭೂತ ಸೌಕರ್ಯ ನಿರ್ಮಾಣ ಕಾಮಗಾರಿ (ಟೆಂಡರ್ ಇಂಡೆಂಟ್ ಸಂಖ್ಯೆ: 2966). 2) ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕು, ಯಡೆಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣದಲ್ಲಿ ಅಭಿವೃದ್ಧಿ ಕಾಮಗಾರಿ (ಟೆಂಡರ್ ಇಂಡೆಂಟ್ ಸಂಖ್ಯೆ: 2808). 3) ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ವ್ಯಾಪ್ತಿಯ ಅತ್ತಿಬೆಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಅಗತ್ಯವಿರುವ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿ (ಟೆಂಡರ್ ಇಂಡೆಂಟ್ ಸಂಖ್ಯೆ: 2967)** ಇ–ಪೋರ್ಟಲ್ ಮುಖಾಂತರ ದಿನಾಂಕ: **11.02.2022** ರಂದು ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **14.03.2022** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
DIPR/DDU/YC/3344/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



'ಹೋಟೆಲ್ ಮ್ಯಾನೇಜ್‌ಮೆಂಟ್' ಪ್ರವೇಶಕ್ಕೆ ಜೆಇಇ

ಬೇದ್ರೆ ಮಂಜುನಾಥ್

> ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಪ್ರವೇಶಕ್ಕಾಗಿ ಜಾಯಿಂಟ್ ಎಂಟ್ರೆನ್ಸ್ ಎಕ್ಸಾಮ್(ಜೆಇಇ) ಪಾಸ್ ಮಾಡಬೇಕು. ಪ್ರವೇಶ ಪರೀಕ್ಷೆ ವಿಧಾನ, ಕೋರ್ಸ್ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ದೇಶದಲ್ಲಿ ಹೋಟೆಲ್ ಉದ್ಯಮ ವಿಸ್ತಾರಗೊಂಡಿದ್ದು, ಈ ಕ್ಷೇತ್ರದ ನಿರ್ವಹಣೆಗೆ ಸಾಕಷ್ಟು ಉದ್ಯೋಗಗಳೂ ಸೃಷ್ಟಿಯಾಗಿವೆ. ಈ ಉದ್ಯಮಕ್ಕೆ ಅಗತ್ಯವಾದ ಸಿಬ್ಬಂದಿ ಅಥವಾ ನೌಕರರನ್ನು ಅಣಿಗೊಳಿಸಲು ನ್ಯಾಷನಲ್ ಕೌನ್ಸಿಲ್ ಫಾರ್ ಹೋಟೆಲ್ ಮ್ಯಾನೇಜ್‌ಮೆಂಟ್ (ಎನ್‌ಸಿಎಚ್‌ಎಂ) ಮತ್ತು ಇಂದಿರಾಗಾಂಧಿ ಮುಕ್ತ ವಿವಿ (ಇಗ್ನೊ) ಜಂಟಿಯಾಗಿ ದೇಶದಾದ್ಯಂತ 60ಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ಮ್ಯಾನೇಜ್‌ಮೆಂಟ್ ಕಾಲೇಜುಗಳಲ್ಲಿ 'ಹಾಸ್ಪಿಟಾಲಿಟಿ ಆ್ಯಂಡ್ ಹೋಟೆಲ್ ಅಡ್ಮಿನಿಸ್ಟ್ರೇಷನ್ (Hospitality and Hotel Administration)' ವಿಷಯದ ಬಿ.ಎಸ್ಸಿ ಪದವಿ ಕೋರ್ಸ್ (B.Sc HHA –) ನಡೆಸುತ್ತಿದೆ.

ಕೋರ್ಸ್ ಪ್ರವೇಶಕ್ಕೆ ವಿದ್ಯಾರ್ಥಿಗಳು 'ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ' ನಡೆಸುವ 'ಜಾಯಿಂಟ್ ಎಂಟ್ರೆನ್ಸ್ ಟೆಸ್ಟ್(ಜೆಇಇ) ಪರೀಕ್ಷೆ ಪಾಸ್ ಮಾಡಬೇಕು. 12ನೇ ತರಗತಿ(2ನೇ ಪಿಯುಸಿ) ತೇರ್ಗಡೆಯಾದ ಮತ್ತು 2ನೇ ಪಿಯುಸಿ ಅಂತಿಮ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳು ಈ ಪ್ರವೇಶ ಪರಿಕ್ಷೆ ತೆಗೆದುಕೊಳ್ಳಬಹುದು. ಸಾಮಾನ್ಯವಾಗಿ ಈ ಪ್ರವೇಶ ಪರೀಕ್ಷೆಗೆ ಮಾರ್ಚ್ ತಿಂಗಳ ಅಂತ್ಯದವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಕಾಶವಿರುತ್ತವೆ. ಏಪ್ರಿಲ್ ಅಥವಾ ಮೇ ತಿಂಗಳ ಕೊನೆಯಲ್ಲಿ ಪರೀಕ್ಷೆ ನಡೆಯುವ ಸಾಧ್ಯತೆ ಇರುತ್ತದೆ.

ಜೆಇಇ–ಪ್ರಶ್ನೆ ಪತ್ರಿಕೆ ಹೀಗಿರುತ್ತದೆ

ಮೂರು ಗಂಟೆ ಅವಧಿಯ ಕಂಪ್ಯೂಟರ್ ಆಧಾರಿತ ಈ ಪ್ರವೇಶ ಪರೀಕ್ಷೆಯ ಪತ್ರಿಕೆಯಲ್ಲಿ ಒಟ್ಟು ಐದು ವಿಭಾಗಗಳಿದ್ದು, 200 ಪ್ರಶ್ನೆಗಳಿರುತ್ತವೆ. ಪ್ರತಿ ಪ್ರಶ್ನೆಗೆ 4 ಅಂಕಗಳು. ಸರಿ ಉತ್ತರಕ್ಕೆ 4 ಅಂಕ, ತಪ್ಪಾದ ಉತ್ತರಕ್ಕೆ ಒಂದು ಅಂಕ ಕಳೆಯುವ ನೆಗೆಟಿವ್ ಮಾರ್ಕಿಂಗ್ ಪದ್ಧತಿ ಇದೆ. ಪ್ರಶ್ನೆಗಳು ಈ ಕೆಳಕಂಡ ವಿಷಯಗಳನ್ನು ಆಧರಿಸಿರುತ್ತವೆ.

1. ಅಂಕಿ–ಸಂಖ್ಯೆ ಸಾಮರ್ಥ್ಯ ಮತ್ತು ಅನಾಲಿಟಿಕಲ್ ಅಪ್ಟಿಟ್ಯೂಡ್ ಟೆಸ್ಟ್ (30 ಅಂಕಗಳು) (Numerical Ability and Analytical Aptitude)
2. ರೀಸನಿಂಗ್ ಅಂಡ್ ಲಾಜಿಕಲ್ ಡಿಡಕ್ಷನ್ (30 ಅಂಕಗಳು) (Reasoning and Logical Deduction)
3. ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳು(30 ಅಂಕಗಳು) (General Knowledge & Current Affairs)
4. ಇಂಗ್ಲಿಷ್ ಭಾಷಾ ಪತ್ರಿಕೆ(60 ಅಂಕಗಳು)(English Language)
5. ಆಪ್ಟಿಟ್ಯೂಡ್ ಫಾರ್ ಸರ್ವೀಸ್ ಸೆಕ್ಟರ್ (50 ಅಂಕಗಳು) (Aptitude for Service Sector)

ಕೋರ್ಸ್ ವಿವರ: ಮೂರು ವರ್ಷಗಳ (6 ಸೆಮಿಸ್ಟರ್) ಈ ಕೋರ್ಸ್‌ನಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಆತಿಥ್ಯಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಪ್ರಯೋಗ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಕಲಿಸಿಕೊಡಲಾಗುತ್ತದೆ. ಸಸ್ಯಾಹಾರ ಮತ್ತು ಮಾಂಸಾಹಾರ ಪದ್ಧತಿಯಲ್ಲಿ ಪ್ರತ್ಯೇಕ ತರಗತಿಗಳಿವೆ. ಕಲಿಯುವವರ ಅನುಕೂಲಕ್ಕೆ ತಕ್ಕಂತೆ ಹೊಸ ವಿಷಯಗಳ ಸೇರ್ಪಡೆಗೆ ಅವಕಾಶವಿದೆ. ಆಹಾರ ತಯಾರಿಕೆ, ಲೆಕ್ಕಪತ್ರ ನಿರ್ವಹಣೆ, ಹಣಕಾಸು ನಿರ್ವಹಣೆ, ಪ್ರವಾಸೋದ್ಯಮ ಮಾರ್ಕೆಟಿಂಗ್ ಮತ್ತು ಮ್ಯಾನೇಜ್‌ಮೆಂಟ್, ಫುಡ್ ಅಂಡ್ ಬೆವರೇಜ್ ಸರ್ವೀಸ್, ಹೌಸ್ ಕೀಪಿಂಗ್, ಆಹಾರ ಸುರಕ್ಷತೆ ಮತ್ತು ಗುಣಮಟ್ಟ, ಮಾನ ಸಂಪನ್ಮೂಲ ನಿರ್ವಹಣೆ ಮತ್ತು ಸ್ಟ್ರಾಟಜಿಕ್ ಮ್ಯಾನೇಜ್‌ಮೆಂಟ್ ವಿಷಯಗಳನ್ನು ಕಲಿಸಲಾಗುತ್ತದೆ.

ಉದ್ಯೋಗಾವಕಾಶಗಳು: ವಿಮಾನ, ರೈಲು ಮತ್ತು ನೌಕಾಯಾನ ಕ್ಷೇತ್ರಗಳಲ್ಲಿರುವ ಆತಿಥ್ಯ ಮತ್ತು ಸೇವಾ ವಿಭಾಗಗಳು, ಹೋಟೆಲ್ ಮ್ಯಾನೇಜ್‌ಮೆಂಟ್/ ಫುಡ್ ಕ್ರಾಫ್ಟ್ ಸಂಸ್ಥೆಗಳು ಸೇರಿದಂತೆ ವಿವಿಧ ಕಡೆಗಳಲ್ಲಿ ವಿಪುಲ ಉದ್ಯೋಗಾವಕಾಶಗಳಿವೆ. ಜೊತೆಗೆ, ಸ್ವಯಂ ಉದ್ಯೋಗವನ್ನೂ ಆರಂಭಿಸಬಹುದು. ಹೆಚ್ಚಿನ ವಿವರಗಳಿಗೆ https://nchmjee.nta.nic.in/ https://nta.ac.in/HotelManagementexam ಜಾಲತಾಣ ನೋಡಿ.

ಆನ್‌ಲೈನ್– ಆಫ್‌ಲೈನ್‌ನಲ್ಲಿ ಪ್ರವಾಸೋದ್ಯಮ ಕೋರ್ಸ್

ಆರ್.ಬಿ.ಗುರುಬಸವರಾಜ

ಕೋರ್ಸ್ ಕಾರ್ನರ್

ಭಾರತದಲ್ಲಿನ ಅತಿದೊಡ್ಡ ಮತ್ತು ಹೆಚ್ಚು ಲಾಭದಾಯಕ ಉದ್ಯಮಗಳಲ್ಲಿ ಪ್ರವಾಸೋದ್ಯಮವೂ ಒಂದು. ವೇಗವಾಗಿ ಬೆಳೆಯುತ್ತಿರುವ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿವೆ. ಈ ಉದ್ಯೋಗಗಳಿಗೆ ಅನುಗುಣವಾಗಿ ಕಡಿಮೆ ಅವಧಿಯ ಸರ್ಟಿಫಿಕೆಟ್ ಹಾಗೂ ಡಿಪ್ಲೊಮಾ ಕೋರ್ಸ್‌ನಿಂದ ಪದವಿ ಹಾಗೂ ಸ್ನಾತಕೋತ್ತರ ಹಾಗೂ ಪಿ.ಎಚ್‌ಡಿವರೆಗೆ ವಿವಿಧ ಕೋರ್ಸ್‌ಗಳಿವೆ. ವಿದ್ಯಾರ್ಥಿಗಳು ತಮ್ಮ ಅರ್ಹತೆ ಮತ್ತು ಆಸಕ್ತಿಗೆ ತಕ್ಕಂತೆ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಅರ್ಹತೆ: ಸರ್ಟಿಫಿಕೆಟ್ ಕೋರ್ಸ್‌ಗಳ ಪ್ರವೇಶಕ್ಕೆ ಅಭ್ಯರ್ಥಿಗಳು ಪಿಯುಸಿಯಲ್ಲಿ ಶೇ 45 ರಿಂದ ಶೇ 50 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಡಿಪ್ಲೊಮಾ ಹಾಗೂ ಪದವಿ ಕೋರ್ಸ್‌ಗಳಿಗೆ ಪಿಯುಸಿಯಲ್ಲಿ ಶೇ 50 ರಿಂದ ಶೇ 60ರಷ್ಟು ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅಭ್ಯರ್ಥಿಗಳು ಶೇ 45 ರಿಂದ 60ರಷ್ಟು ಅಂಕಗಳೊಂದಿಗೆ ಪದವಿ ಪೂರ್ಣ ಗೊಳಿಸಿರಬೇಕು. ಪಿ.ಎಚ್‌ಡಿ ಕೋರ್ಸ್‌ಗಳಿಗೆ ಶೇ 50 ರಿಂದ ಶೇ 60 ರಷ್ಟು ಅಂಕಗಳೊಂದಿಗೆ ಸ್ನಾತಕ ಪದವಿ ಪೂರ್ಣಗೊಳಿಸಿರಬೇಕು.

ಪ್ರವಾಸೋದ್ಯಮ ಕೋರ್ಸ್‌ಗಳನ್ನು ಆಫ್‌ಲೈನ್(ಭೌತಿಕ) ತರಗತಿಗಳ ಜೊತೆಗೆ ದೂರಶಿಕ್ಷಣ ಹಾಗೂ ಆನ್‌ಲೈನ್ ಮೂಲಕವೂ ಕಲಿಯಬಹುದು. ಭೌತಿಕ ತರಗತಿಯ ಕೋರ್ಸ್‌ಗಳಿಗೆ ಅನ್ವಯವಾಗುವ ಅರ್ಹತಾ ನಿಯಮಗಳೇ ದೂರಶಿಕ್ಷಣ ಮತ್ತು ಆನ್‌ಲೈನ್ ಕೋರ್ಸ್‌ಗಳಿಗೂ ಅನ್ವಯವಾಗುತ್ತವೆ.

ವೃತ್ತಿ ಅವಕಾಶಗಳು: ಟ್ರಾವೆಲ್ ಏಜೆಂಟ್, ಟ್ರಾವೆಲ್ ಎಕ್ಸಿಕ್ಯೂಟಿವ್, ಪ್ರವಾಸೋದ್ಯಮ ವ್ಯವಸ್ಥಾಪಕರು, ಪ್ರಯಾಣ ಅಧಿಕಾರಿ/ ಸಂಯೋಜಕರು, ಏರ್‌ಲೈನ್ಸ್/ ಗ್ರೌಂಡ್ ಸ್ಟಾಫ್, ಪ್ರವಾಸಿ ಮಾರ್ಗದರ್ಶಿ, ಸಾರಿಗೆ ಅಧಿಕಾರಿ, ಟ್ರಾವೆಲ್ ಕೌನ್ಸಿಲರ್/ಸಮಾಲೋಚಕರು, ಟೂರ್ ಆಪರೇಟರ್, ಟ್ರಾವೆಲ್ ರೈಟರ್, ಇತ್ಯಾದಿ ವೃತ್ತಿಗಳನ್ನು ಪಡೆಯಲು ಅವಕಾಶಗಳಿವೆ.

ಇಲ್ಲೆಲ್ಲ ವೃತ್ತಿ ಅವಕಾಶಗಳು : ಪ್ರವಾಸೋದ್ಯಮ ನೀತಿ ಮತ್ತು ಕಾನೂನು, ಪ್ರವಾಸೋದ್ಯಮ ಮಾರ್ಕೆಟಿಂಗ್, ನಿರ್ವಹಣೆ, ಟ್ರಾವೆಲ್ ಏಜೆನ್ಸಿ ತರಬೇತಿ, ಪ್ರವಾಸ ಮಾರ್ಗದರ್ಶಿ ಕೌಶಲಗಳು ಮತ್ತು ತರಬೇತಿ, ಮಾನವ ಸಂಪನ್ಮೂಲ ನಿರ್ವಹಣೆ, ಕಚೇರಿ ನಿರ್ವಹಣೆ ಮತ್ತು ಕಾರ್ಯಗಳು, ಏರ್ ಟಿಕೆಟಿಂಗ್, ಸಾರ್ವಜನಿಕ ಸಂಪರ್ಕಗಳು, ಪ್ರವಾಸ ಕಾರ್ಯಾಚರಣೆಗಳಲ್ಲಿ ವೃತ್ತಿ ಅವಕಾಶಗಳಿವೆ.

ಅಲ್ಪಾವಧಿ ಸರ್ಟಿಫಿಕೆಟ್ ಕೋರ್ಸ್‌ಗಳು

- ಪ್ರವಾಸೋದ್ಯಮ ಆನ್‌ಲೈನ್ ಕೋರ್ಸ್ : 4 ವಾರಗಳು
- ಪ್ರಯಾಣ ಮತ್ತು ಪ್ರವಾಸೋದ್ಯಮ ಕೋರ್ಸ್ (ಹಂತ-1) : 80 ಗಂಟೆಗಳು
- ಪ್ರವಾಸೋದ್ಯಮ ಮತ್ತು ಹಾಸ್ಪಿಟಾಲಿಟಿ ಕೋರ್ಸ್ : 15-20 ಗಂಟೆಗಳು
- ಆನ್‌ಲೈನ್ ಪ್ರವಾಸೋದ್ಯಮ ಕೋರ್ಸ್ : 14 ಗಂಟೆಗಳು
- ಪ್ರಯಾಣ ಮತ್ತು ಪ್ರವಾಸೋದ್ಯಮ ಕೋರ್ಸ್ : 20 ಗಂಟೆಗಳು (6 ತಿಂಗಳೊಳಗೆ ಪೂರ್ಣಗೊಳಿಸಬೇಕು)
- ಪ್ರವಾಸೋದ್ಯಮ ಇಂಡಸ್ಟ್ರಿ ಮ್ಯಾನೇಜ್‌ಮೆಂಟ್ ಪರಿಚಯ ಕೋರ್ಸ್ : 4 ವಾರಗಳು
- ಪ್ರವಾಸೋದ್ಯಮ ಮತ್ತು ಪ್ರಯಾಣ ನಿರ್ವಹಣೆ : 7 ವಾರಗಳು
- ಪ್ರವಾಸೋದ್ಯಮ ವಿವಿಧ ಕೋರ್ಸ್‌ಗಳು : 4 ರಿಂದ 6 ತಿಂಗಳವರೆಗೆ
- ಪ್ರಯಾಣ ಮತ್ತು ಪ್ರವಾಸೋದ್ಯಮ ತಜ್ಞ : 12 ತಿಂಗಳು
- ಪ್ರಯಾಣ ಮತ್ತು ಪ್ರವಾಸೋದ್ಯಮ ಡಿಪ್ಲೊಮಾ : 24 ವಾರಗಳು.

'ಐಟಿ' ಟ್ರೆಂಡಿಂಗ್ ಕೋರ್ಸ್ ಯಾವುದು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಎಂಬಿಎ ಮುಗಿಸಿ ಎಂಎನ್‌ಸಿ ಕಂಪನಿಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನನಗೆ ಸಾಫ್ಟ್‌ವೇರ್ ಕೋರ್ಸ್ ಮಾಡುವ ಆಸೆ. ಆದರೆ ನನಗೆ ಯಾವ ಕೋರ್ಸ್ ಸೂಕ್ತ ಹಾಗೂ ಸದ್ಯ ಐಟಿ ಕ್ಷೇತ್ರದಲ್ಲಿ ಟ್ರೆಂಡಿಂಗ್ ಇರುವ ಕೋರ್ಸ್ ಯಾವುದು ಎಂಬುದು ತಿಳಿಯುತ್ತಿಲ್ಲ. ಈ ವಿಷಯದಲ್ಲಿ ನನಗೆ ಸಹಾಯ ಮಾಡಿ.

ಬೆಳಕು, ಮಂಡ್ಯ

ಕೃತಕ ಬುದ್ಧಿಮತ್ತೆ (ಎಐ) ಮತ್ತು ರೊಬೊಟಿಕ್ಸ್ ಈಗ ಬೇಡಿಕೆಯಲ್ಲಿರುವ ಹಾಗೂ ಭವಿಷ್ಯದಲ್ಲೂ ಬೇಡಿಕೆಯನ್ನು ನಿರೀಕ್ಷಿಸಬಹುದಾದ ಕ್ಷೇತ್ರ. ರೊಬೊಟಿಕ್ಸ್, ಕಂಪ್ಯೂಟರ್ ಸೈನ್ಸ್, ಆರ್ಟಿಫಿಷಿಯಲ್ ಎಂಜಿನಿಯರಿಂಗ್, ಮೆಷಿನ್ ಲರ್ನಿಂಗ್ ಇತ್ಯಾದಿ ವಿಷಯಗಳ ಕುರಿತು ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸ್ ಮಾಡಿ ಈ ಕ್ಷೇತ್ರಗಳಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಪ್ರೈಮ್ ಮಿನಿಸ್ಟರ್ ಸ್ಕಾಲರ್‌ಶಿಪ್ ಸ್ಕೀಮ್ 2021-22

- ವಿವರ: ಪ್ರೈಮ್ ಮಿನಿಸ್ಟರ್ ಸ್ಕಾಲರ್‌ಶಿಪ್ ಸ್ಕೀಮ್ 2021-22, ಮಾಜಿ ಸೈನಿಕರು / ಮಾಜಿ ಕೋಸ್ಟ್ ಗಾರ್ಡ್ ಸಿಬ್ಬಂದಿಗಳ ಅವಲಂಬಿತ ಮಕ್ಕಳು ಮತ್ತು ಮೃತರ ಪತ್ನಿಯರು ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿದ್ದಾರೆ.
- ಅರ್ಹತೆ: ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 60 ಅಂಕಗಳೊಂದಿಗೆ 10 + 2 / ಡಿಪ್ಲೊಮಾ / ಡಿಗ್ರಿ ಪದವಿ ಹೊಂದಿರುವ ಮತ್ತು ವೃತ್ತಿಪರ ಪದವಿ ಕೋರ್ಸ್‌ನ ಮೊದಲ ವರ್ಷದಲ್ಲಿ (ಲ್ಯಾಟರಲ್ ಎಂಟ್ರಿ ಮತ್ತು ಇಂಟಗ್ರೇಟೆಡ್ ಕೋರ್ಸ್‌ಗಳನ್ನು ಹೊರತುಪಡಿಸಿ) ಪ್ರವೇಶ ಪಡೆದ ಭಾರತೀಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಫೆಬ್ರುವರಿ 28, 2022
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ:www.b4s.in/praja/PMF1

ಐಐಟಿ ಗಾಂಧಿನಗರ್ ಫಿಸಿಕ್ಸ್ ಡಿಸಿಪ್ಲಿನ್ ಪೋಸ್ಟ್-ಡಾಕ್ಟರಲ್ ಫೆಲೋಶಿಪ್ 2022

- ವಿವರ: ಐಐಟಿ ಗಾಂಧಿನಗರ್ ಫಿಸಿಕ್ಸ್ ಡಿಸಿಪ್ಲಿನ್ ಪೋಸ್ಟ್-ಡಾಕ್ಟರಲ್ ಫೆಲೋಶಿಪ್ (ಪಿಡಿಎಫ್) 2022, ಪಿಎಚ್‌ಡಿ ಪದವೀಧರರಿಗೆ ನೀಡುವ ಸಂಶೋಧನಾ ಅವಕಾಶವಾಗಿದೆ.
- ಅರ್ಹತೆ: 'ಸಾಫ್ಟ್-ಕಂಡೆನ್ಸ್ಡ್ ಮ್ಯಾಟರ್ ಫಿಸಿಕ್ಸ್'ನಲ್ಲಿ ತರಬೇತಿಯೊಂದಿಗೆ ಭೌತಶಾಸ್ತ್ರದಲ್ಲಿ ಅಥವಾ ವಿಜ್ಞಾನ / ಎಂಜಿನಿಯರಿಂಗ್‌ನ ಯಾವುದೇ ಸಂಬಂಧಿತ ಶಾಖೆಯಲ್ಲಿ ಪಿಎಚ್‌ಡಿ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಮುಕ್ತವಾಗಿದೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಫೆಬ್ರುವರಿ 28, 2022
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/GPP3

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Prose-5

The Concert

English

ಎಸ್ಸೆಸ್ಸೆಲ್ಸಿ

1. How can you say that Ananth was a talented boy?

Ananth was a 15 year old talented boy. He is the best table tennis player and the fastest runner in his school. He was learning to play the sitar. He was quite intelligent and skilful that he was already able to compose his own tunes. His guru was also astonished and this means that he was really talented.

2. "They had come with high hopes." What hopes did Ananth's parents have?

Ananth's parents had high hopes in the miracles of modern science. Ananth would be cured, he would walk and run again and take part in the forth coming table-tennis tournament. He would play the sitar and perhaps would be a great sitarist one day.

3. What was the daring thought came to her suddenly? Can you guess?

Yes, we can guess that she might have thought of meeting Pandit Ravi Shankar and convincing him by explaining the condition of her brother. If he agreed to come to their house and play the sitar for Ananth, it would be fine. She also thought there was no harm in trying that.

4. Why do you think the response of the artists was unusual? OR
'The artists' visiting Ananth was unusual.' Justify. OR
Why do you think that the neighbours could not believe their eyes?

The sitar maestro Pandit Ravishankar and the great wizard of tabla Ustad Allah Rakha were the great artists. They were always busy in concerts having no time to listen such requests. Smitha convinced them to visit Ananth's home. They agreed to perform for the boy who was in death bed. When they visited, neighbours could not believe their eyes.They generously performed for Ananth. It shows their simplicity, compassion and humanity over the boy who was in critical condition. It was really an unusual visit.

5. "But they did not voice their fears."

a) Who does 'they' refer to?
The word 'they' refers to Ananth's parents.

b) What did they fear?
Ananth parents feared that Ananth had not many days to live.

c) How did they behave towards him?
They laughed, talked, and surrounded Ananth to make him happy.

6. "A walk in the park might make you better."

a) Who suggested these words?
Aunt Sushila suggested when Smitha cried out in a choked voice.

b) When did she suggest it?
When Smitha became sad that she couldn't take her brother to the concert.

c) What made the speaker suggest this?
Smitha would be relieved from the sad and disappointment.

Annappa Shetty MA,M.Ed, SRP in English,Hassan



picture credit: karnataka Govt. 10th class English Text book

ಮಾದರಿ ಪ್ರಶ್ನೋತ್ತರ

ವಿದ್ಯುದಾವೇಶಗಳು ಮತ್ತು ಕ್ಷೇತ್ರಗಳು

ಭೌತಶಾಸ್ತ್ರ

ಪಿಯುಸಿ

- **1) ಯಾವ ರೀತಿಯ ಬಲಗಳನ್ನು ಸಂರಕ್ಷೀ ಬಲವೆಂದು ಕರೆಯುತ್ತಾರೆ?**

ಉತ್ತರ:- ಯಾವಾಗ ಬಂದು ಬಾಹ್ಯ ಬಲವು ಯಾವುದೇ ವಸ್ತುವನ್ನು ಒಂದು ಬಿಂದುವಿನಿಂದ ಮತ್ತೊಂದು ಬಿಂದುವಿಗೆ ಒಯ್ಯುವಲ್ಲಿ ಸ್ಪ್ರಿಂಗ್ ಬಲ, ಗುರುತ್ವ ಬಲ ಮುಂತಾದ ಬಲಗಳ ವಿರುದ್ಧ ಕೆಲಸ ಮಾಡಿದಲ್ಲಿ ಆಗ, ಆ ಬಾಹ್ಯ ಬಲವು ವಿಭವಶಕ್ತಿಯಾಗಿ ಆ ವಸ್ತುವಿನಲ್ಲಿ ಸಂಚಿತವಾಗುತ್ತದೆ. ಯಾವಾಗ ಬಾಹ್ಯ ಬಲವನ್ನು ಹಿಂಪಡೆಯಲಾಗುತ್ತದೆಯೋ, ಆಗ ವಸ್ತುವು ಚಲಿಸಲ್ಪಡುತ್ತದೆ, ಹಾಗೆ ಚಲಿಸುವಾಗ ಅದು ಚಲನಶಕ್ತಿಯನ್ನು ಪಡೆಯುತ್ತದೆ ಮತ್ತು ಅಷ್ಟೇ ಮೊತ್ತದ ವಿಭವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಹೀಗೆ ಚಲನಶಕ್ತಿ ಮತ್ತು ವಿಭವಶಕ್ತಿಯ ಒಟ್ಟು ಮೊತ್ತವು ಸಂರಕ್ಷಿಸಲ್ಪಡುತ್ತದೆ. ಈ ರೀತಿಯ ಬಲಗಳನ್ನು ಸಂರಕ್ಷೀ ಬಲವೆಂದು ಕರೆಯುತ್ತಾರೆ. ಸ್ಪ್ರಿಂಗ್ ಬಲ ಮತ್ತು ಗುರುತ್ವಾಕರ್ಷಣಾ ಬಲಗಳು ಸಂರಕ್ಷೀ ಬಲಕ್ಕೆ ಉದಾಹರಣೆಗಳಾಗಿವೆ.

- **2) ಎರಡು ಸ್ಥಿರ ಆವೇಶಗಳ ನಡುವಿನ ಕೂಲಂಬ್ ಬಲವೂ ಕೂಡ ....ಬಲವೇ ಆಗಿದೆ**

ಉತ್ತರ:- ಸಂರಕ್ಷೀ

- **3) ಸ್ಥಿರ ವಿದ್ಯುತ್ ವಿಭವದ ಬಗ್ಗೆ ಬರೆಯಿರಿ**

ಉತ್ತರ:- ಯಾವುದೇ ಪರೀಕ್ಷಕ ಆವೇಶ qನ ಮೇಲೆ ಮಾಡಿದ ಕೆಲಸದಿಂದ ವಿಭವ ಶಕ್ತಿಯನ್ನು ವ್ಯಾಖ್ಯಾನಿಸುತ್ತೇವೆ. ಈ ಕಾರ್ಯವು ಸ್ಪಷ್ಟವಾಗಿ qನ ಸಮಾನಪಾತಿಯಾಗಿರುತ್ತದೆ. ಏಕೆಂದರೆ ಆವೇಶ qನ ಮೇಲೆ ಯಾವುದೇ ಬಿಂದುವಿನಲ್ಲಿ ಬಲವು qE, ಆಗಿರುತ್ತದೆ. ಇಲ್ಲಿ E ಯ ಆವೇಶ ವಿನ್ಯಾಸದ ಕಾರಣ ಆ ಬಿಂದುವಿನಲ್ಲಿ ವಿದ್ಯುತ್ ಕ್ಷೇತ್ರವಾಗಿರುತ್ತದೆ. ಆದ್ದರಿಂದ ಮಾಡಿದ ಕೆಲಸವನ್ನು ಆವೇಶ qನಿಂದ ಭಾಗಿಸುವುದು ಸೂಕ್ತವೆನಿಸುತ್ತದೆ. ಏಕೆಂದರೆ ಪರಿಣಾಮ ರೂಪದಲ್ಲಿ ಬಂದ ಪರಿಣಾಮವು qನಿಂದ ಸ್ವತಂತ್ರವಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರತಿಯೊಂದು ಏಕಮಾನ ಆವೇಶದ ಮೇಲೆ ಮಾಡಿದ ಕೆಲಸವು ಆವೇಶ ವಿನ್ಯಾಸಕ್ಕೆ ಸಂಬಂಧಿಸಿದ ವಿದ್ಯುತ್‌ಕ್ಷೇತ್ರದ ಪ್ರಮುಖ ಲಕ್ಷಣವಾಗಿರುತ್ತದೆ .ಇದರಲ್ಲಿ ನೀಡಿರುವ ಆವೇಶ ವಿನ್ಯಾಸದ ಕಾರಣ ಉಂಟಾದ ಸ್ಥಿರವಿದ್ಯುತ್ ವಿಭವ Vಯ ಬಗ್ಗೆ ಕಲ್ಪನೆಯನ್ನು ನೀಡುತ್ತದೆ.

ಒಂದು ಏಕಮಾನ ಧನ ಆವೇಶವನ್ನು R ರಿಂದ Pಗೆ ಬಾಹ್ಯಬಲದ ಸಹಾಯದಿಂದ ಕೊಂಡೊಯ್ಯಲು ಉಂಟಾದ ಕೆಲಸ

$$= V_P - V_R \quad \left(= \frac{U_P - U_R}{q}\right)$$

ಇಲ್ಲಿ VP ಮತ್ತು VR ಕ್ರಮವಾಗಿ ಬಿಂದು P ಮತ್ತು R ನ ವಿಭವಶಕ್ತಿಯಾಗಿರುತ್ತದೆ. ಗಮನಿಸಿ, ಮೊದಲಿನಂತೆಯೇ ಇಲ್ಲೂ ಸಹ ವಿಭವದ ವಾಸ್ತವಿಕ ಮಾನಕ್ಕಿಂತ, ವಿಭವದ ಅಂತರವೇ ಭೌತಿಕವಾಗಿ ಹೆಚ್ಚು ಮಹತ್ವದಾಗಿದೆ.

ಬಾಹ್ಯ ಬಲದಿಂದ ಯಾವುದೇ ಏಕಮಾನ ಧನಾವೇಶವನ್ನು ಅನಂತದಿಂದ ಯಾವುದೇ ಬಿಂದುವಿನವರೆಗೆ ಕೊಂಡೊಯ್ಯಲು ಮಾಡಿರುವ ಕೆಲಸ = ಆ ಬಿಂದುವಿನಲ್ಲಿಯ ಸ್ಥಿರ ವಿದ್ಯುತ್ ವಿಭವ(V)

ಬೇರೆ ರೀತಿಯಲ್ಲಿ ಹೇಳುವುದಾದರೆ, ಸ್ಥಿರವಿದ್ಯುತ್ ಕ್ಷೇತ್ರ ಪ್ರದೇಶದ ಯಾವುದೇ ಬಿಂದುವಿನಲ್ಲಿ ಸ್ಥಿರ ವಿದ್ಯುತ್ ವಿಭವವು ಯಾವುದೇ ಏಕಮಾನ ಧನಾವೇಶವನ್ನು ಅನಂತದಿಂದ ನಿರ್ದಿಷ್ಟ ಬಿಂದುವಿಗೆ (ವೇಗೋತ್ಕರ್ಷವಿಲ್ಲದೆಯೇ) ತೆಗೆದುಕೊಂಡು ಹೋಗಲು ಮಾಡಿದ ಕೆಲಸವೆನಿಸುತ್ತವೆ.

- **4)(a) ಆವೇಶ 4×10^{-7} Cಯ ಕಾರಣ 9 cm ದೂರದಲ್ಲಿರುವ ಯಾವುದೇ ಬಿಂದು P ನಲ್ಲಿ ವಿಭವವನ್ನು ಲೆಕ್ಕ ಹಾಕಿ.**

(b) ಈಗ ಆವೇಶ 2×10^{-9} C ಯನ್ನು ಅನಂತದಿಂದ ಬಿಂದು P ರವರೆಗೆ ತರಲು ಮಾಡಿದ ಕೆಲಸವನ್ನು ತಿಳಿದುಕೊಳ್ಳಿ. ಉತ್ತರವು ಯಾವ ಪಥದಲ್ಲಿ ಆವೇಶವನ್ನು ತರಲಾಗಿದೆಯೋ ಅದನ್ನು ಅವಲಂಬಿಸಿರುತ್ತದೆಯೇ?

ಪರಿಹಾರ:-

(a) $$V = \frac{1}{4\pi\varepsilon_0}\frac{Q}{r} = 9\times10^{9}\ \mathrm{Nm^2\ C^{-2}} \times \frac{4\times10^{-7}\mathrm{C}}{0.09\,\mathrm{m}}$$
$$= 4 \times 10^{4}\ \mathrm{V}$$

(b) $$W = qV = 2 \times 10^{-9}\mathrm{C} \times 4 \times 10^{4}\mathrm{V} = 8 \times 10^{-5}\ \mathrm{J}$$

- **5) ಯಾವುದೇ ದ್ವಿಧ್ರುವದ ವಿದ್ಯುತ್ ಮತ್ತು ಬಿಂದು ಆವೇಶದ ವಿದ್ಯುತ್ ವಿಭವದ ತುಲನಾತ್ಮಕ ಮಹತ್ವಪೂರ್ಣ ಲಕ್ಷಣ ಸಮೀಕರಣಗಳಿಂದ ಏನು ಸ್ಪಷ್ಟವಾಗುತ್ತದೆ?**

ಉತ್ತರ:- ಯಾವುದೇ ದ್ವಿಧ್ರುವದ ವಿದ್ಯುತ್ ಮತ್ತು ಬಿಂದು ಆವೇಶದ ವಿದ್ಯುತ್ ವಿಭವದ ತುಲನಾತ್ಮಕ ಮಹತ್ವಪೂರ್ಣ ಲಕ್ಷಣ ಸಮೀಕರಣಗಳಿಂದ ಸ್ಪಷ್ಟವಾಗುವುದೇನೆಂದರೆ:-

(i) ಯಾವುದೇ ವಿದ್ಯುತ್ ದ್ವಿಧ್ರುವದ ಕಾರಣ ಉಂಟಾದ ವಿಭವವು ಕೇವಲ ದೂರ r ನ ಮೇಲೆ ಮಾತ್ರವೇ ಅವಲಂಭಿಸಿರುದಿಲ್ಲ. ಸ್ಥಿತಿ ಸದಿಶ r ಮತ್ತು ದ್ವಿಧ್ರುವ ಭ್ರಾಮಕ ಸದಿಶ r ನ ಮಧ್ಯೆ ಇರುವ ಕೋನವನ್ನು ಸಹ ಅವಲಂಬಿಸಿರುತ್ತದೆ. (ಆದರೂ ಇದು P ಯ ಅಕ್ಷೀಯ ಸಮ್ಮಿತಿಯಲ್ಲಿರುತ್ತದೆ) ಆದ್ದರಿಂದ θವನ್ನು ಸ್ಥಿರವಾಗಿಟ್ಟುಕೊಂಡು ಸ್ಥಾನ ಸದಿಶ ಡಿನ್ನು Pಯ ಸುತ್ತ ತಿರುಗಿಸಿದಾಗ ಬಿಂದು Pನಿಂದ ಉಂಟಾದ ಶಂಖು ಆಕೃತಿಯ ಮೇಲಿನ ಎಲ್ಲಾ ಬಿಂದುವಿನಲ್ಲಿ ಬಿಂದು P ನಲ್ಲಿ ಇರುವಷ್ಟೇ ವಿಭವವು ಇರುತ್ತದೆ.

(ii) ಅಧಿಕ ಅಂತರದಲ್ಲಿರುವ ವಿದ್ಯುತ್ ದ್ವಿಧ್ರುವದ ಕಾರಣ ವಿಭವ $1/r^2$ ನ ಅನುಪಾತದಲ್ಲಿ ಕಡಿಮೆಯಾಗುತ್ತದೆ $1/r$ ನ ಅನುಪಾತದಲ್ಲಿ ಇದು ಬಿಂದು ಆವೇಶದ ಕಾರಣ ಉಂಟಾದ ವಿಭವದ ಒಂದು ಲಕ್ಷಣವಾಗಿದೆ.

- **6) 3×10-8 C ಮತ್ತು -2×10^{-8} C ಈ ಎರಡು ಆವೇಶಗಳು 15cm ಅಂತರದಲ್ಲಿವೆ. ಈ ಎರಡು ಆವೇಶಗಳನ್ನು ಸೇರಿಸುವ ರೇಖೆಯ ಮೇಲಿನ ಯಾವ ಬಿಂದುವಿನಲ್ಲಿ ವಿದ್ಯುತ್ ವಿಭವವು ಸೊನ್ನೆಯಾಗಿರುತ್ತದೆ? ಅನಂತದಲ್ಲಿ ವಿಭವವು ಸೊನ್ನೆ ಎಂದು ತೆಗೆದುಕೊಳ್ಳಿ.**

ಉತ್ತರ: ಧನಾವೇಶವು ಮೂಲ ಬಿಂದು O ದಲ್ಲಿದೆ ಎಂದುಕೊಳ್ಳೋಣ. ಎರಡೂ ಆವೇಶಗಳನ್ನು ಸೇರಿಸುವ ರೇಖೆಯನ್ನು X ಅಕ್ಷ ಎಂದುಕೊಳ್ಳೋಣ ಮತ್ತು ಋಣಾವೇಶ ಮೂಲಬಿಂದುವಿನ ಬಲಭಾಗದಲ್ಲಿರುತ್ತದೆ.



X -ಅಕ್ಷದ ಮೇಲೆ ನಮಗೆ ಬೇಕಾಗಿರುವ ಬಿಂದು P ಎಂದುಕೊಳ್ಳೋಣ. ಇಲ್ಲಿ ವಿದ್ಯುತ್ ವಿಭವವು ಶೂನ್ಯವಾಗಿದೆ. Pಯ ನಿರ್ದೇಶಾಂಕವು x ಆಗಿದ್ದರೆ, ಧನಾತ್ಮಕವಾಗಿರಬೇಕೆಂಬುದು ಸ್ಪಷ್ಟವಾಗುತ್ತದೆ. ($x < 0$ ಇದ್ದಾಗ ಇದು ಸಾಧ್ಯವಿಲ್ಲ. ಏಕೆಂದರೆ ಎರಡು ಆವೇಶಗಳ ಕಾರಣ ಉಂಟಾದ 2 ವಿದ್ಯುತ್ ವಿಭವವು ಒಟ್ಟಾಗಿ ಸೊನ್ನೆಯಾಗುವುದಿಲ್ಲ) x ಮೂಲಬಿಂದು O ಮತ್ತು A ಯ ಮಧ್ಯದಲ್ಲೇಲ್ಲೋ ಇದ್ದಾಗ,

$$\frac{1}{4\pi\varepsilon_0}\left[\frac{3\times10^{-8}}{x\times10^{-2}} - \frac{2\times10^{-8}}{(15-x)\times10^{-2}}\right] = 0$$

ಇಲ್ಲಿ x ನ್ನು cm ನಲ್ಲಿ ಇಡಲಾಗಿದೆ. ಅರ್ಥಾತ್,

$$\frac{3}{x} - \frac{2}{15-x} = 0$$

ಅಥವಾ x = 9 cm.

ಬಿಂದು P ಯು OA ಯ ಮುಂದುವರೆದ ರೇಖೆಯಲ್ಲಿದ್ದರೆ

$$\frac{3}{x} - \frac{2}{x-15} = 0$$

x = 45 cm

ಈ ಪ್ರಕಾರ ಧನಾವೇಶದಿಂದ 9 cm ಮತ್ತು 45 cm ಋಣಾವೇಶದ ಕಡೆಗೆ ವಿದ್ಯುತ್ ವಿಭವವು ಶೂನ್ಯವಾಗಿದೆ. ಇಲ್ಲಿ ಬೇಕಾದ ಸೂತ್ರವನ್ನು ಅನಂತದಲ್ಲಿ ವಿದ್ಯುತ್ ವಿಭವವು ಶೂನ್ಯವೆಂದು ಪರಿಗಣಿಸಿಯೇ ತೆಗೆದುಕೊಳ್ಳಲಾಗಿದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರದ 'ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್ಸ್' ವಿಷಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



❦ ಸುಭಾಷಿತ ❦

ಒಬ್ಬರು ಮತ್ತೊಬ್ಬರನ್ನು ತಿಂದು ಬದುಕಬಾರದು, ತಿಳಿದು ಬದುಕಬೇಕು. -ದ.ರಾ.ಬೇಂದ್ರೆ

ಬಿಬಿಎಂಪಿ: ಜಮೀನು ಪುಕ್ಕಟೆ ಪಡೆಯುವ ಪರಿಪಾಟ ನಿಲ್ಲಿಸಿ

ಬೆಂಗಳೂರು ಮಹಾನಗರದಲ್ಲಿ ‘ಪರಿಷ್ಕೃತ ನಗರ ಮಹಾ ಯೋಜನೆ– 2015’ರ ಪ್ರಕಾರ ಕೆಲವು ರಸ್ತೆಗಳನ್ನು ವಿಸ್ತರಿಸಲು ಗುರುತಿಸಲಾಗಿದೆ. ನಗರ ಮಹಾ ಯೋಜನೆಯಡಿ ವಿಸ್ತರಣೆಗೆ ಗೊತ್ತುಪಡಿಸಿರುವ ರಸ್ತೆಗಳ ಅಕ್ಕಪಕ್ಕ ಜಮೀನು ಹೊಂದಿರುವವರು ಕಟ್ಟಡ ನಕ್ಷೆ ಮಂಜೂರಾತಿ ಕೋರಿ ಬಿಬಿಎಂಪಿಗೆ ಅರ್ಜಿ ಸಲ್ಲಿಸಿದಾಗ, ರಸ್ತೆ ವಿಸ್ತರಣೆಗೆ ಅಗತ್ಯವಿರುವಷ್ಟು ಜಾಗವನ್ನು ಆಯಾ ರಸ್ತೆಯ ವಿಸ್ತೀರ್ಣಕ್ಕೆ ಅನುಗುಣವಾಗಿ ಕಟ್ಟಡ ನಕ್ಷೆಯಲ್ಲಿ ಉಲ್ಲೇಖಿಸಲಾಗುತ್ತಿದೆ. ಇಂತಹ ರಸ್ತೆ ವಿಸ್ತರಣೆಗೆ ಅಗತ್ಯವಿರುವಷ್ಟು ಜಮೀನನ್ನು ಅರ್ಜಿದಾರರು ಪುಕ್ಕಟೆಯಾಗಿ ಪಾಲಿಕೆಗೆ ಹಸ್ತಾಂತರಿಸುವುದನ್ನು ಕಡ್ಡಾಯಗೊಳಿಸಿ ಬಿಬಿಎಂಪಿ ಆಯುಕ್ತರು 2016ರ ಫೆಬ್ರುವರಿ 29ರಂದು ಆದೇಶ ಹೊರಡಿಸಿದ್ದರು. ಕಟ್ಟಡ ನಕ್ಷೆ ಮಂಜೂರಾತಿ ಪಡೆಯಬೇಕಾದರೆ ಅರ್ಜಿದಾರರು ರಸ್ತೆಯ ವಿಸ್ತರಣೆಗಾಗಿ ತಮ್ಮ ಜಾಗದ ಹಕ್ಕು ಬಿಟ್ಟುಕೊಡುವ ಪತ್ರ ನೀಡಬೇಕಾಗಿದೆ. ಅವರು ಬಿಟ್ಟುಕೊಡುವ ಜಮೀನಿಗೆ ಭೂಪರಿಹಾರವಾಗಲೀ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರವಾಗಲೀ ಸಿಗುವುದಿಲ್ಲ. ಕಟ್ಟಡ ನಕ್ಷೆಗೆ ಮಂಜೂರಾತಿ ಸಿಗಬೇಕಿದ್ದರೆ, ತಮಗೆ ಇಚ್ಛೆ ಇಲ್ಲದಿದ್ದರೂ ಜಮೀನಿನ ಸ್ವಲ್ಪ ಭಾಗ ಬಿಟ್ಟುಕೊಡಲು ಒಪ್ಪಿಗೆ ನೀಡಬೇಕಾದ ಅನಿವಾರ್ಯ ಇದೆ. ಬಿಬಿಎಂಪಿಯ ಈ ಅಸಮಂಜಸ ನಡೆಗೆ ಹೈಕೋರ್ಟ್ ಪೂರ್ಣವಿರಾಮ ಹಾಕಿದೆ. ಕಟ್ಟಡ ಯೋಜನೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುವ ಭೂಮಾಲೀಕರು ತಮ್ಮ ಜಮೀನನ್ನು ರಸ್ತೆ ವಿಸ್ತರಣೆಗೆ ಪುಕ್ಕಟೆಯಾಗಿ ಬಿಟ್ಟುಕೊಡುವಂತೆ ಬಿಬಿಎಂಪಿ ಹೊರಡಿಸಿದ್ದ ಸುತ್ತೋಲೆಯು ಸಂವಿಧಾನದ 300ಎ ವಿಧಿಯನ್ನು ಉಲ್ಲಂಘಿಸುತ್ತದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಅಷ್ಟೇ ಅಲ್ಲ; ಬಿಬಿಎಂಪಿ ಹೊರಡಿಸಿರುವ ಸುತ್ತೋಲೆಯು ತಾರತಮ್ಯದಿಂದ ಕೂಡಿದೆ ಎಂದೂ ಹೈಕೋರ್ಟ್ ಹೇಳಿದೆ. 2015ರ ನಗರ ಮಹಾ ಯೋಜನೆಯಲ್ಲಿ ರಸ್ತೆಗೆ ಗೊತ್ತುಪಡಿಸಲಾದ ಪ್ರದೇಶಗಳ ವ್ಯಾಪ್ತಿಯಲ್ಲಿನ ಭೂಮಾಲೀಕರಲ್ಲಿ ಕಟ್ಟಡ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸಿದವರ ಸ್ಥಿರಾಸ್ತಿಯನ್ನು ರಸ್ತೆಗಾಗಿ ಸ್ವಾಧೀನಪಡಿಸಿಕೊಂಡರೆ, ಅವರು ಕಟ್ಟಡ ಯೋಜನೆಗೆ ಮಂಜೂರಾತಿಯನ್ನು ಮಾತ್ರ ಪಡೆಯುತ್ತಾರೆ. ಯಾರು ಕಟ್ಟಡ ಯೋಜನೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲವೋ ಅಂತಹವರು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆಯ ಕಲಂ 71ರ ಅಡಿಯಲ್ಲಿ ಪರಿಹಾರ ಪಡೆಯಲು ಅರ್ಹತೆ ಹೊಂದಿರುತ್ತಾರೆ. ಪರಿಷ್ಕೃತ ನಗರ ಯೋಜನೆಯಲ್ಲಿ ರಸ್ತೆ ಎಂದು ಗುರುತಿಸಲಾಗಿರುವ ತಮ್ಮ ಆಸ್ತಿಯನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಅವರು ಆಸ್ತಿಯ ಮಾಲೀಕತ್ವದಿಂದ ವಂಚಿತರಾಗುವುದಿಲ್ಲ ಎಂಬುದನ್ನೂ ಹೈಕೋರ್ಟ್ ಸ್ಪಷ್ಟಪಡಿಸಿದೆ. ಹೈಕೋರ್ಟ್‌ನ ಈ ಆದೇಶವು ಆಸ್ತಿ ಮಾಲೀಕರ ನ್ಯಾಯಬದ್ಧ ಹಕ್ಕನ್ನು ಎತ್ತಿಹಿಡಿದಿದೆ. ತಮ್ಮ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು ಹೊರಟು ಇಕ್ಕಟ್ಟಿಗೆ ಸಿಲುಕಿದ್ದ ಸಾವಿರಾರು ಸಂತ್ರಸ್ತರು ಹೈಕೋರ್ಟ್‌ನ ಈ ಆದೇಶದಿಂದಾಗಿ ನಿಟ್ಟುಸಿರು ಬಿಡುವಂತಾಗಿದೆ.

ಹೈಕೋರ್ಟ್‌ನ ಆದೇಶವು ಆಸ್ತಿ ಮಾಲೀಕರ ನ್ಯಾಯಬದ್ಧ ಹಕ್ಕನ್ನು ಎತ್ತಿಹಿಡಿದಿದೆ

ಸಂವಿಧಾನದ 44ನೇ ತಿದ್ದುಪಡಿಯ ಪ್ರಕಾರ, ಆಸ್ತಿ ಹೊಂದುವುದು ಮೂಲಭೂತ ಹಕ್ಕು ಅಲ್ಲ. ಆದರೆ, ಸಂವಿಧಾನದ 300ಎ ವಿಧಿಯ ಪ್ರಕಾರ ಇದು ಸಾಂವಿಧಾನಿಕ ಹಕ್ಕು. ಕಾರ್ಯಕಾರಿ ಆದೇಶವೊಂದನ್ನೇ ಇರಿಸಿಕೊಂಡು, ನಿರ್ದಿಷ್ಟ ಕಾನೂನಿನ ಅಧಿಕಾರ ಅಥವಾ ಸೂಕ್ತ ಶಾಸನ ಇಲ್ಲದೆ ವ್ಯಕ್ತಿಯ ಸ್ಥಿರಾಸ್ತಿಯ ಮಾಲೀಕತ್ವದ ಅನುಭೋಗವನ್ನು ತಪ್ಪಿಸಲಾಗದು ಎಂದು ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಈ ಮಾತನ್ನು ಹೈಕೋರ್ಟ್ ಉಲ್ಲೇಖಿಸಿದೆ. ಬಿಬಿಎಂಪಿಯೇ ಇರಲಿ ಅಥವಾ ಸರ್ಕಾರದ ಇನ್ಯಾವುದೇ ಇಲಾಖೆಯೇ ಇರಲಿ, ಯಾವುದೇ ವ್ಯಕ್ತಿಯ ಜಮೀನನ್ನು ಪುಕ್ಕಟೆಯಾಗಿ ಕಿತ್ತುಕೊಳ್ಳಲು ಅವಕಾಶ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸಾರ್ವಜನಿಕ ಉದ್ದೇಶಕ್ಕಾಗಿ ನಡೆಸುವ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಕಟ್ಟಡ ಯೋಜನೆಗೆ ಮಂಜೂರಾತಿ ನೀಡುವುದು ಎರಡು ಪ್ರತ್ಯೇಕ ವಿಚಾರಗಳು. ಇವೆರಡನ್ನೂ ಬೆಸೆಯುವ ಮೂಲಕ ಬಿಬಿಎಂಪಿ ಅನಗತ್ಯ ಗೊಂದಲ ಸೃಷ್ಟಿಸಿತ್ತು. ಬಿಬಿಎಂಪಿಯ ಈ ನಿರ್ಧಾರದಿಂದ ನಗರದ ಅಭಿವೃದ್ಧಿ ಪ್ರಕ್ರಿಯೆಗೂ ಹಿನ್ನಡೆ ಉಂಟಾಗಿದೆ ಎಂದರೆ ತಪ್ಪಾಗಲಾರದು. ನಗರ ಮಹಾ ಯೋಜನೆಯಲ್ಲಿ ಗುರುತಿಸಲಾದ ರಸ್ತೆಗೆ, ಉಚಿತವಾಗಿ ಎಲ್ಲಿ ಜಾಗ ಬಿಟ್ಟುಕೊಡಬೇಕಾಗುತ್ತದೋ ಎಂಬ ಆತಂಕದಿಂದ ಅನೇಕರು ತಮ್ಮ ಜಮೀನಿನಲ್ಲಿ ಕಟ್ಟಡ ನಿರ್ಮಿಸುವ ಯೋಜನೆಯನ್ನೇ ಮುಂದಕ್ಕೆ ಹಾಕಿದ್ದರು. ಇದರಿಂದ ಬಿಬಿಎಂಪಿಗೆ ಪರೋಕ್ಷವಾಗಿ ನಷ್ಟವೇ ಉಂಟಾಗಿದೆ. ಪಾಲಿಕೆಯ ಈ ನಡೆಯಿಂದ ಅನೇಕರು ಅನಗತ್ಯ ಕಿರಿಕಿರಿ ಎದುರಿಸಿದ್ದರು. ಹೈಕೋರ್ಟ್ ಆದೇಶಕ್ಕೆ ಬಿಬಿಎಂಪಿ ತಲೆಬಾಗಬೇಕು. ಕಟ್ಟಡ ಯೋಜನೆಗಾಗಿ ಅರ್ಜಿ ಸಲ್ಲಿಸುವ ಸ್ವತ್ತಿನ ಮಾಲೀಕರಿಂದ ಹಕ್ಕು ಬಿಟ್ಟುಕೊಡುವ ಪತ್ರ ಪಡೆಯುವ ನಿರ್ಧಾರವನ್ನು ಕೈಬಿಡಬೇಕು. 2016ರಿಂದ ಇಲ್ಲಿಯವರೆಗೆ ಬಿಬಿಎಂಪಿಯು ರಸ್ತೆ ವಿಸ್ತರಣೆ ಸಲುವಾಗಿ ಸಾವಿರಾರು ಮಂದಿಯಿಂದ ಇಂತಹ ಪತ್ರಗಳನ್ನು ಪಡೆದುಕೊಂಡಿದೆ. ಹೈಕೋರ್ಟ್ ನೀಡಿರುವ ತೀರ್ಪಿನ ಆಶಯವನ್ನು ಅರ್ಥೈಸಿಕೊಂಡು ಅಂತಹ ಸ್ವತ್ತುಗಳ ಮಾಲೀಕರ ಪಟ್ಟಿ ತಯಾರಿಸಿ, ಅವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಭೂಪರಿಹಾರವನ್ನು ನೀಡಲು ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್

ಬದಲಾವಣೆಗೆ ತೆರೆದುಕೊಳ್ಳೋಣ

ಆವಿಷ್ಕಾರಗಳು ಎಂದಿಗೂ ಕಣ್ಮರೆಯಾಗುವುದಿಲ್ಲ ಎಂಬುದನ್ನು ವಿಶ್ವ ರೇಡಿಯೊ ದಿನಾಚರಣೆಯ ಈ ಸಂದರ್ಭದಲ್ಲಿ ನಾವೆಲ್ಲರೂ ನೆನಪಿಡಬೇಕು. ಅವು ತಮ್ಮ ಸ್ವರೂಪಗಳನ್ನು ಬದಲಿಸಿಕೊಳ್ಳುತ್ತಲೇ ಇರುತ್ತವೆ ಮತ್ತು ವಿಕಾಸವಾಗುತ್ತಲೇ ಇರುತ್ತವೆ.
#WorldRadioDay

ಡಾ. ಅರುಣ್, ನಾಗರಿಕ

ಕಿಡಿನುಡಿ

ಗೋವಾದಲ್ಲಿ ಹಿಂದೂ ಮತಗಳ ಧ್ರುವೀಕರಣವನ್ನು ತಡೆಯಲು ಟಿಎಂಸಿಯು ಎಂಜಿಪಿ ಜೊತೆ ಮೈತ್ರಿ ಮಾಡಿಕೊಂಡಿದೆ ಎಂದು ಮಹುವಾ ಮೊಯಿತ್ರಾ ಬಹಿರಂಗವಾಗಿ ಹೇಳಿದ್ದಾರೆ. ಒಡೆದು ಆಳುವ ಸಲುವಾಗಿ ಟಿಎಂಸಿ ಅಷ್ಟು ದೂರದ ಬಂಗಾಳದಿಂದ ಗೋವಾಕ್ಕೆ ಬಂದಿದೆ. ಇದು, ನಿಜಕ್ಕೂ ಸಾಮ್ರಾಜ್ಯಶಾಹಿ ಧೋರಣೆ. ಹೀಗಾಗಿಯೇ ನಾನು ಅವರನ್ನು ವೈಸರಾಯ್ ಮಹುವಾ ಮೊಯಿತ್ರಾ ಎಂದು ಕರೆಯುವುದು.

ಅಭಿಷೇಕ್, ಲೇಖಕ

25 ವರ್ಷಗಳ ಹಿಂದೆ

ಶುಕ್ರವಾರ, 14-2-1997

● **ಎಚ್‌ಪಿ ಠೇವಣಿ ಹಣ ವಿಧಾನಸಭೆಯಲ್ಲಿ ಧರಣಿ**

ಬೆಂಗಳೂರು, ಫೆ. 13– ಎಲೆಕ್ಟ್ರಾನಿಕ್ಸ್ ಮೀಟರ್ ಅಳವಡಿಸುವುದಕ್ಕಾಗಿ ಸರ್ವ ವಿದ್ಯುತ್ ಗೃಹಗಳ ಗ್ರಾಹಕರಿಂದ ತಲಾ ₹ 1,300ರಂತೆ ಠೇವಣಿ ವಸೂಲು ಮಾಡುವ ಹಾಗೂ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಸಕ್ರಮಕ್ಕೆ ಹತ್ತು ಸಾವಿರ ದಂಡ ವಿಧಿಸುವ ಜನವಿರೋಧಿ ಆದೇಶವನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಬಹುತೇಕ ಎಲ್ಲ ವಿರೋಧಿ ಶಾಸಕರು ವಿಧಾನಸಭೆಯಲ್ಲಿ ಇಂದು ಧರಣಿ ನಡೆಸಿದರು.

ಕಳೆದ ಅಧಿವೇಶನದಲ್ಲಿ, ವಿದ್ಯುತ್ ಮಂಡಳಿ ಕಾರ್ಯವೈಖರಿ ಕುರಿತು ಜಂಟಿ ಸದನ ಸಮಿತಿ ಸಲ್ಲಿಸಿದ್ದ ವರದಿಯಲ್ಲಿ ಇದ್ದ 13 ಶಿಫಾರಸುಗಳ ಪೈಕಿ, ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಶಿಫಾರಸನ್ನು ಮಾತ್ರವೇ ಕಾರ್ಯಗತಗೊಳಿಸುವುದಕ್ಕೆ ಹೊರಟಿರುವ ಕೆಇಬಿ ನಿಲುವಿನ ಹಿಂದೆ ರೈತರಿಗೆ ಕಿರುಕುಳ ನೀಡುವ ದುರುದ್ದೇಶವಿದೆ ಎಂದು ಧರಣಿ ಆರಂಭಿಸಿದ ಕಾಂಗ್ರೆಸ್, ಬಿಜೆಪಿ ಹಾಗೂ ವಾಟಾಳ್ ಪಕ್ಷದ ಶಾಸಕರು ಆರೋಪಿಸಿದರು.

ಕೆಇಬಿ ಮುಳುಗುವ ಸ್ಥಿತಿಯಲ್ಲಿದ್ದು ಬೇರೆ ಯಾವುದೇ ಮಾರ್ಗದಿಂದಲೂ ಅದನ್ನು ರಕ್ಷಿಸುವುದು ಸಾಧ್ಯವಿಲ್ಲ. ಇಂಥ ಸ್ಥಿತಿಯಲ್ಲಿ ಈ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿ ಶಾಶ್ವತ ಅಪಾಯ ತಂದುಕೊಳ್ಳುವುದಕ್ಕಿಂತ ನೈಜ ಸ್ಥಿತಿಯನ್ನು ರೈತರಿಗೆ ವಿವರಿಸುವುದು ಸೂಕ್ತ ಎಂದು ದಿನವಿಡೀ ನಡೆದ ಚರ್ಚೆಗೆ ಉತ್ತರಿಸಿದ, ವಿದ್ಯುತ್ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಸ್ಪಷ್ಟಪಡಿಸಿದರು.

● **ಕೃಷ್ಣಾ: ‘ಇನ್ನೂ 6 ಸಾವಿರ ಕೋಟಿ ರೂ. ಅಗತ್ಯ’**

ಬೆಂಗಳೂರು, ಫೆ. 13– ಕೃಷ್ಣಾ ಜಲಾನಯನ ಪ್ರದೇಶದ ಯೋಜನೆಗಳನ್ನು ಪೂರ್ಣಗೊಳಿಸಲು ಇನ್ನೂ ಆರು ಸಾವಿರ ಕೋಟಿ ಹಣದ ಅಗತ್ಯವಿದೆ ಎಂದು ಬೃಹತ್ ಹಾಗೂ ಮಧ್ಯಮ ನೀರಾವರಿ ಖಾತೆ ಸಚಿವ ಕೆ.ಎನ್. ನಾಗೇಗೌಡ ಅವರು ವಿಧಾನಪರಿಷತ್ತಿನಲ್ಲಿ ಇಂದು ತಿಳಿಸಿದರು.

ಕೃಷ್ಣಾ ಕೊಳ್ಳದ ಯೋಜನೆಗಳ ಒಟ್ಟು ವೆಚ್ಚ ಹತ್ತು ಸಾವಿರ ಕೋಟಿ ರೂಪಾಯಿ. ಇದರಲ್ಲಿ ನಾಲ್ಕು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ ಎಂದು ಸಚಿವರು ಕಾಂಗ್ರೆಸ್‌ನ ಡಿ.ಎಂ.ಸಾಲಿ, ಬಿಜೆಪಿಯ ಶಂಕರಮೂರ್ತಿ ಹಾಗೂ ರಾಮಚಂದ್ರಗೌಡ ಅವರ ಪ್ರಶ್ನೆಗೆ ಉತ್ತರಿಸಿದರು.

● **ಅಡುಗೆ ಅನಿಲ ಪಡೆಯಲು ನಿಯಮ ಇನ್ನಷ್ಟು ಸಡಿಲ**

ನವದೆಹಲಿ, ಫೆ. 13 (ಪಿಟಿಐ, ಯುಎನ್‌ಐ)– ಈಗಾಗಲೇ ನೋಂದಣಿ ಮಾಡಿಸಿಕೊಂಡು ಕನಿಷ್ಠ ಒಂದು ವರ್ಷವಾಗಿರುವ ಗ್ರಾಹಕರಿಗೆ 4,000 ರೂಪಾಯಿ ಠೇವಣಿ ನೀಡಿದರೆ ತಕ್ಷಣ ಅಡುಗೆ ಅನಿಲ ಸಂಪರ್ಕ ನೀಡುವ ಯೋಜನೆಯನ್ನು ಫೆಬ್ರುವರಿ 20ರಿಂದ ಜಾರಿಗೆ ಬರುವಂತೆ ಸರ್ಕಾರ ಜಾರಿಗೊಳಿಸಿದೆ.

ಈ 4000 ರೂಪಾಯಿಯನ್ನು ಹಿಂತಿರುಗಿಸಲಾಗದ ಠೇವಣಿ ಎಂದು ಪರಿಗಣಿಸಲಾಗುವುದು; ಇದರ ಜತೆಗೆ ಅಡುಗೆ ಅನಿಲ ಸಂಪರ್ಕಕ್ಕೆ ನೀಡುವ 2000 ರೂಪಾಯಿ ಶುಲ್ಕವನ್ನೂ ಗ್ರಾಹಕರು ನೀಡಬೇಕು.

‘ತತ್ಕಾಲ್’ ಯೋಜನೆಯಡಿ ಈ ಸೌಲಭ್ಯ ಈವರೆಗೆ ಅಂಗವಿಕಲರು, ವಕೀಲರು, ಚಾರ್ಟರ್ಡ್ ಅಕೌಂಟೆಂಟ್‌ಗಳು, ಅನಿವಾಸಿ ಭಾರತೀಯರು, ವೈದ್ಯರು ಹಾಗೂ ಎಂಜಿನಿಯರುಗಳಿಗೆ ಮಾತ್ರ ಇತ್ತು. ಈಗ ಇದನ್ನು ಎಲ್ಲರಿಗೂ ವಿಸ್ತರಿಸಲಾಗುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ ಖಾತೆಯ ರಾಜ್ಯ ಸಚಿವ ಟಿ.ಆರ್. ಬಾಲು ಪ್ರಕಟಿಸಿದರು.

ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ನಾವು ತೆಗೆದುಕೊಳ್ಳುವ ನಿಲುವುಗಳಲ್ಲಿ ಈಗ ಯಾವುದೇ ಅನಿಶ್ಚಯ ಇಲ್ಲ

ಜಾಗತಿಕ ರಾಜಕಾರಣ: ಭಾರತದ ಗಟ್ಟಿಧ್ವನಿ

ಸೂರ್ಯ-ನಮಸ್ಕಾರ

ಎ.ಸೂರ್ಯಪ್ರಕಾಶ್

ಭಾರತವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವಾಗಲೇ ಹೊಸ ಭಾರತಕ್ಕೆ ಜಗತ್ತು ಮುಖಾಮುಖಿಯಾಗುತ್ತಿದೆ. ಆಷಾಢಭೂತಿತನ ಹಾಗೂ ದ್ವಂದ್ವ ಮಾತುಗಳನ್ನು ಈ ಭಾರತ ಸಹಿಸುತ್ತಿಲ್ಲ. ದಶಕಗಳಿಂದ ಹಾಗೆಯೇ ಉಳಿದಿರುವ ಪ್ರಶ್ನೆಗಳಿಗೆ ಉತ್ತರವನ್ನು ಬಯಸುವ ಆತ್ಮನಿರ್ಭರ ಭಾರತ ಇದು. ಧರ್ಮ ಮತ್ತು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಅನೇಕ ರಾಷ್ಟ್ರಗಳಲ್ಲಿನ ಧೋರಣೆಗಳನ್ನು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ ಅವರು ಪ್ರಶ್ನಿಸಿದಾಗ ಅಂತರರಾಷ್ಟ್ರೀಯ ಸಮುದಾಯಕ್ಕೂ ಇದರ ರುಚಿ ಕಂಡಂತಾಯಿತು.

ಅಂತರರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ಸಮಾವೇಶದಲ್ಲಿ ಇತ್ತೀಚೆಗೆ ಮಾತನಾಡುತ್ತಾ, ಇತರ ರಾಷ್ಟ್ರಗಳಿಗೆ ಮೂರು ಪ್ರಶ್ನೆಗಳನ್ನು ಅವರು ಕೇಳಿದರು. ಮೊದಲನೆಯ ಪ್ರಶ್ನೆ, ‘ಇಸ್ಲಾಮೋಫೋಬಿಯಾ’, ‘ಕ್ರಿಶ್ಚಿಯಾನೋಫೋಬಿಯಾ’ ಹಾಗೂ ಯಹೂದ್ಯ ವಿರೋಧಿ ಭಾವನೆಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಇತರ ಧರ್ಮಗಳ ಮೇಲಿನ ಆಕ್ರಮಣಗಳು ಹಾಗೂ ಹಿಂದೂಫೋಬಿಯಾ ಹರಡುವವರು ಸೃಷ್ಟಿಸುತ್ತಿರುವ ಬೆದರಿಕೆಗಳ ಬಗ್ಗೆ ವಿಶ್ವಸಂಸ್ಥೆ ಹೇಗೆ ತಾನೇ ಗಮನ ಹರಿಸಿಲ್ಲ? ಎರಡನೆಯ ಪ್ರಶ್ನೆ, ಪ್ರಜಾಪ್ರಭುತ್ವಕ್ಕೆ ಸೈದ್ಧಾಂತಿಕ ವೈವಿಧ್ಯವೇ ಕೇಂದ್ರವಾಗಿರುವಾಗ ‘ಎಡಪಂಥ’ ಸರಿಯಾದುದಾದರೆ ‘ಬಲಪಂಥ’ ಏಕೆ ಸರಿಯಲ್ಲ, ಅದೂ... ಇವು ಪ್ರಜಾಪ್ರಭುತ್ವದಲ್ಲಿ ಮತದಾರರು ಮಾಡುವ ಆಯ್ಕೆಗಳಾಗಿದ್ದಾಗ? ಕಡೆಯದಾಗಿ, ‘ಭಯೋತ್ಪಾದನೆ’ ವಿವರಣೆಯನ್ನು ಅಂತರರಾಷ್ಟ್ರೀಯ ಸಮುದಾಯವೇಕೆ ತೆಳುಗೊಳಿಸುತ್ತಿದೆ? ಅಲ್ಲದೆ, ಭಯೋತ್ಪಾದನೆ ವಿರುದ್ಧದ ಜಾಗತಿಕ ಸಮರವನ್ನು ದುರ್ಬಲಗೊಳಿಸುವ ಬಾಹ್ಯ ವಿಚಾರಗಳನ್ನೇಕೆ ಎಳೆದು ತರುತ್ತಿದೆ?

ವಾಸ್ತವವಾಗಿ, ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತವು ಇಂತಹ ನೇರ ಮಾತುಗಳನ್ನಾಡಿರುವುದೇ ಅಪರೂಪ. ಮೋದಿಪೂರ್ವ ದಿನಗಳಲ್ಲಿ, ಹಿಂದೂಗಳು ಅಥವಾ ಹಿಂದೂ ಧರ್ಮ ಕುರಿತ ವಿಚಾರಗಳನ್ನು ಭಾರತದ ರಾಜತಾಂತ್ರಿಕರೊಬ್ಬರು ಮಾತನಾಡುವುದೇ ಧರ್ಮನಿಂದೆಯ ವಿಚಾರವೆಂದು ಪರಿಗಣಿಸಲಾಗುತ್ತಿತ್ತು. ಅಥವಾ ಸೈದ್ಧಾಂತಿಕ ಹೊದರುಗಳೊಳಗೆ ಪ್ರವೇಶಿಸಿ, ‘ಬಲಪಂಥೀಯ’ ನೆಲೆಯನ್ನು ರಾಕ್ಷಸೀಕರಿಸುವವರ ಆಷಾಢಭೂತಿತನವನ್ನು ಎತ್ತಿತೋರಿಸುವುದೂ ಸಾಧ್ಯವಿರಲಿಲ್ಲ.

ಸಂತಸದ ಸಂಗತಿ ಎಂದರೆ, ಇದು ಬದಲಾಗಿದೆ. ಕಳೆದ 75 ವರ್ಷಗಳಿಂದ ಭಾರತೀಯರು ಕೇಳಲು ಕಾತರರಾಗಿದ್ದ ಭಾಷೆಯನ್ನು ಈಗ ಭಾರತದ ರಾಜತಾಂತ್ರಿಕರು ಮಾತನಾಡುತ್ತಿದ್ದಾರೆ. ಭಾರತ ಏನನ್ನು ಪ್ರತಿನಿಧಿಸುತ್ತದೆ ಹಾಗೂ ಭಾರತೀಯರು ಹೇಗೆ ಭಾವಿಸುತ್ತಾರೆ ಎಂಬುದರ ದೃಢವಾದ ಹಾಗೂ ಪ್ರಾಮಾಣಿಕ ನಿರೂಪಣೆ ಇದು. ತಮ್ಮದೇ ರಾಜಕೀಯ, ಧಾರ್ಮಿಕ ಮತ್ತಿತರ ಪ್ರೇರಣೆಗಳ ಪ್ರಚೋದನೆಗಳಲ್ಲಿ ಸಿಲುಕಿರುವ ವಿಶ್ವಸಂಸ್ಥೆಯ ಹಲವು ಸದಸ್ಯ ರಾಷ್ಟ್ರಗಳನ್ನು ಟೀಕಿಸುತ್ತಾ, ‘ಇಸ್ಲಾಮೋಫೋಬಿಯಾ’, ‘ಕ್ರಿಶ್ಚಿಯಾನೋಫೋಬಿಯಾ’ ಹಾಗೂ ಯಹೂದ್ಯ ವಿರೋಧಿ ಭಾವನೆಗಳನ್ನು ವಿಶ್ವಸಂಸ್ಥೆ ದೊಡ್ಡದಾಗಿ ಬಿಂಬಿಸಿದೆ. ಆದರೆ, ಹಿಂದೂ, ಬೌದ್ಧ ಹಾಗೂ ಸಿಖ್ ಧರ್ಮವಿರೋಧಿ ಭಾವನೆಗಳ ಬಗ್ಗೆ ಏನು ಹೇಳುತ್ತೀರಿ? ಹೊಸ ‘ಫೋಬಿಯಾ’ಗಳು, ದ್ವೇಷಗಳು ಅಥವಾ ವಿಶ್ವದ ಇತರ ಪ್ರಮುಖ ಧರ್ಮಗಳ ವಿರುದ್ಧದ ಪೂರ್ವಗ್ರಹಗಳನ್ನೂ ಪೂರ್ಣವಾಗಿ ಗುರುತಿಸಬೇಕು ಎಂದು ತಿರುಮೂರ್ತಿ ಹೇಳಿದರು. ಧರ್ಮದ ವಿಚಾರಗಳಲ್ಲಿ ಸಮತೋಲನದ ಅಗತ್ಯವನ್ನು ಒತ್ತಿ ಹೇಳುತ್ತಾ, ‘ಹಿಂದೂ, ಬೌದ್ಧ ಹಾಗೂ ಸಿಖ್ ವಿರೋಧಿ ಭಾವನೆಗಳು ಉದಯಿಸುತ್ತಿರುವುದು ಗಂಭೀರ ಕಾಳಜಿಯ ವಿಚಾರವಾಗಿದ್ದು, ಈ ಬೆದರಿಕೆಯ ನಿರ್ವಹಣೆಗೆ ವಿಶ್ವಸಂಸ್ಥೆ ಹಾಗೂ ಇತರ ಎಲ್ಲಾ ಸದಸ್ಯ ರಾಷ್ಟ್ರಗಳ ಗಮನ ಅಗತ್ಯ ಎಂದು ಪ್ರತಿಪಾದಿಸಿದರು. ಹಾಗಾದಾಗ ಮಾತ್ರ, ಅಂತಹ ವಿಚಾರಗಳ ಬಗ್ಗೆ ನಮ್ಮ ಚರ್ಚೆಗಳಲ್ಲಿ ‘ಹೆಚ್ಚಿನ ಸಮತೋಲನ’ ತರುವುದು ಸಾಧ್ಯ ಎಂದರು ಅವರು. ಇದನ್ನು ಚರ್ಚಾವಸ್ತುವಾಗಿಸಲು ಭಾರತಕ್ಕೆ ನರೇಂದ್ರ ಮೋದಿಯವರು ಪ್ರಧಾನಿಯಾಗುವುದು ಅಗತ್ಯವಾಯಿತು.

ರಾಯಭಾರಿ ಎತ್ತಿರುವ ಎರಡನೆಯ ವಿಚಾರವು ಸಿದ್ಧಾಂತಕ್ಕೆ ಸಂಬಂಧಿಸಿದೆ. ಬಲಪಂಥದ ಮೇಲೆ ತೀವ್ರವಾದ ದಾಳಿಗಳನ್ನು ಗಮನಿಸಿದಲ್ಲಿ, ‘ಪ್ರಜಾಪ್ರಭುತ್ವಗಳಲ್ಲಿ, ಬಲಪಂಥ ಹಾಗೂ ಎಡಪಂಥ, ರಾಜಕಾರಣದ ಎರಡು ಭಾಗಗಳಾಗಿವೆ. ಜನರ ಮತಗಳಿಂದ ಆಯ್ಕೆಗೊಂಡು ಅಧಿಕಾರಕ್ಕೇರುವವರು ಬಹುಜನರ ಆಯ್ಕೆಯನ್ನು ಪ್ರತಿನಿಧಿಸುತ್ತಾರೆ’ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ ಎಂದು ಅವರು ಹೇಳಿದರು. ಪ್ರಜಾಪ್ರಭುತ್ವವು ಹಲವು ಸಿದ್ಧಾಂತ ಹಾಗೂ ನಂಬಿಕೆಗಳ ವಿಶಾಲ ವ್ಯಾಪ್ತಿಯನ್ನು ಒಳಗೊಂಡಿದೆ ಎಂಬುದು ಅದರ ವ್ಯಾಖ್ಯಾನದಲ್ಲಿಯೇ ಇದೆ ಎಂಬ ಅಂಶವನ್ನು ಅವರು ಗಟ್ಟಿಸಿ ಹೇಳಿದ್ದು ಮುಖ್ಯ. ಪ್ರಜಾಪ್ರಭುತ್ವದ ಮೊದಲ ಪಾಠವನ್ನು ವಿಶ್ವಸಂಸ್ಥೆಯಲ್ಲಿ ಹೇಳಬೇಕಾಯಿತು ಎಂಬುದು ನಿಜಕ್ಕೂ ದೊಡ್ಡ ವ್ಯಂಗ್ಯದ ಸಂಗತಿ; ಆದರೆ, ವಿಶ್ವದಲ್ಲೇ ಹೆಚ್ಚು ಚೈತನ್ಯಶೀಲ ಪ್ರಜಾಪ್ರಭುತ್ವದ ಪ್ರತಿನಿಧಿಯಲ್ಲದೆ ಮತ್ಯಾರು ತಾನೇ ಇದನ್ನು ಮನಕ್ಕೆ ನಾಟುವಂತೆ ಹೇಳಬಲ್ಲವರು? ಸ್ಟಾಲಿನ್ (ಜನಹತ್ಯೆ ಯೋಜಿಸಿ ಲಕ್ಷಾಂತರ ರಾಜಕೀಯ ವಿರೋಧಿಗಳನ್ನು ನಿರ್ನಾಮ ಮಾಡಿದ ವ್ಯಕ್ತಿ) ಹೆಸರು ಹೇಳಿಕೊಂಡು ಓಡಾಡುವವರು ಪ್ರಜಾಪ್ರಭುತ್ವದ ರಕ್ಷಕರಂತೆ ಠೀವಿಯಿಂದ ಓಡಾಡುವುದು ಆಶ್ಚರ್ಯವೇನಲ್ಲ! ಹಾಗೆಯೇ ಪಶ್ಚಿಮ ರಾಷ್ಟ್ರಗಳ ಕೆಲವು ಪ್ರಖ್ಯಾತ ಶೈಕ್ಷಣಿಕ ಸಂಸ್ಥೆಗಳು, ಈ ಕಪಟಿಗಳನ್ನು ‘ಪ್ರಜಾಪ್ರಭುತ್ವವಾದಿಗಳು’ (ಡೆಮಾಕ್ರಾಟ್ಸ್) ಹಾಗೂ ‘ಉದಾರವಾದಿಗಳು’ (ಲಿಬರಲ್ಸ್) ಎಂದು ಭಾವಿಸಿ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳ ಪರಿಧಿಯಲ್ಲಿ ತಮ್ಮ ವಿಚಾರಗಳನ್ನು ಪ್ರಚುರಪಡಿಸಲು ಅವಕಾಶ ನೀಡುವುದೂ ಅಷ್ಟೇ ವಿಚಿತ್ರ.

ಭಯೋತ್ಪಾದನೆಯ ವ್ಯಾಖ್ಯಾನವನ್ನು ದುರ್ಬಲಗೊಳಿಸುವುದರ ವಿರುದ್ಧ ವಿಶ್ವಸಂಸ್ಥೆಗೆ ತಿರುಮೂರ್ತಿ ಎಚ್ಚರಿಕೆ ನೀಡಿದ್ದಾರೆ. ಇದಕ್ಕೆ ಸಂಬಂಧಿಸಿದ ವಿಚಾರವನ್ನು ಎತ್ತಿ ಹೇಳುವುದು ಪ್ರಧಾನಿಯವರಿಗೂ ಇತ್ತೀಚೆಗೆ ಮುಖ್ಯವೆನಿಸಿತ್ತು. ಭಾರತದ ವರ್ಚಸ್ಸಿಗೆ ಧಕ್ಕೆ ತರುತ್ತಿರುವ ಯತ್ನಗಳ ಕುರಿತಂತೆ ಅವರು ಜಾಗತಿಕ ಆಧ್ಯಾತ್ಮಿಕ ಸಂಸ್ಥೆಯೊಂದರ ಸಮಾರಂಭವೊಂದರಲ್ಲಿ ಮಾತನಾಡಿದರು. ರಾಷ್ಟ್ರವು ಸ್ವಾತಂತ್ರ್ಯದ 75ನೇ ವರ್ಷವನ್ನು ಆಚರಿಸುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಈ ಯತ್ನಗಳನ್ನು ಬರೀ ರಾಜಕೀಯ ಎಂದು ಬದಿಗೊತ್ತಲಾಗದು ಎಂದೂ ಹೇಳಿದರು.

ಭಾರತದ ಉದಾರವಾದಿ ಪ್ರಜಾಸತ್ತಾತ್ಮಕ ಪರಿಸರವನ್ನು ಹಾಳುಗೆಡವಲು ಯತ್ನಿಸುವ ರೀತಿಯಲ್ಲಿ ಪಾಶ್ಚಿಮಾತ್ಯ ಸಂಸ್ಥೆಗಳ ಕಾರ್ಯಸೂಚಿಪ್ರೇರಿತ ವರದಿಗಳು ಹಾಗೂ ವಿಶ್ಲೇಷಣೆಗಳು ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆ ಆಗಿರುವುದರ ಮಧ್ಯೆಯೇ ಪ್ರಧಾನಿಯವರ ಹೇಳಿಕೆಗಳು ಹೊರಬಂದಿವೆ. ದುಃಖದ ಸಂಗತಿ ಎಂದರೆ, ಈ ಪೂರ್ವಗ್ರಹಪೀಡಿತ ವರದಿಗಳು, ರಾಷ್ಟ್ರದೊಳಗೆ ಪೂರ್ಣ ಬಯಲಾಗಿ ನಿಂತಿರುವ ಭಾರತೀಯ ಎಡ ಹಾಗೂ ನೆಹರೂವಾದಿ ಬುದ್ಧಿಜೀವಿಗಳಿಂದ ಉದ್ದೀಪನಗೊಂಡಿವೆ. ಇಂತಹ ನಿರುದ್ಯೋಗಿ, ಉದ್ಯೋಗಗಳಿಗೆ ಸೇರಿಸಿಕೊಳ್ಳಲಾಗದ, ಪೈಶಾಚಿಕ ಮನಸ್ಸುಗಳು ಭಾರತದ ಹೊರಗೆ ತಮ್ಮ ಸರಕುಗಳನ್ನು ಮಾರಲು ಹಾಗೂ ಭಾರತದ ಶಕ್ತಿಗುಂದಿಸಲು ಹೊಸ ಹುಲ್ಲುಗಾವಲುಗಳಿಗೆ ಹುಡುಕಾಟ ನಡೆಸುತ್ತಿವೆ. ಏಕ ದೈವಾರಾಧನೆಯ (ಅಬ್ರಹಾಮಿಕ್) ಧರ್ಮಗಳಿಗೆ ಬೆಸೆದುಕೊಂಡ ಸಂಸ್ಥೆಗಳ ಜಾಲವೇ ಈ ಕಾರ್ಯಸೂಚಿಯನ್ನು ಮುನ್ನಡೆಸುತ್ತಿದೆ. ಧರ್ಮ, ಸಿದ್ಧಾಂತ ಹಾಗೂ ಭಯೋತ್ಪಾದನೆಗೆ ಸಂಬಂಧಿಸಿದ ವಿಚಾರಗಳಲ್ಲಿ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿನ ದ್ವಂದ್ವ ಮಾತುಗಳನ್ನು ಎದುರಿಸಲು ಭಾರತವನ್ನು ಸಶಕ್ತವಾಗಿಸುವಲ್ಲಿ ಪ್ರಧಾನಿ ಮೋದಿಯವರ ದೃಢ ಸಂಕಲ್ಪವನ್ನು ಗಮನಿಸಬಹುದು.

ಒಂದು ವರ್ಷದ ಹಿಂದೆ ವಿಶ್ವಸಂಸ್ಥೆಯಲ್ಲಿ ಹಿಂದೂ, ಬೌದ್ಧ ಹಾಗೂ ಸಿಖ್ಖರ ವಿರುದ್ಧದ ದ್ವೇಷ ಹಾಗೂ ಹಿಂಸೆಯ ವಿಚಾರವನ್ನು ಭಾರತೀಯ ರಾಜತಾಂತ್ರಿಕರೊಬ್ಬರು ಮೊದಲ ಬಾರಿಗೆ ಎತ್ತಿದರು. ಆನಂತರ, ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಕೆಲವು ತಿಂಗಳುಗಳ ಹಿಂದೆ, ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಎಸ್. ಮುರಳೀಧರನ್ ಅವರು ಈ ವಿಚಾರ ಪ್ರಸ್ತಾಪಿಸಿದರು. ಈಗ ತಿರುಮೂರ್ತಿ ಅವರ ಭಾಷಣವು ನಿಜಕ್ಕೂ ಅಂತಿಮ ನಿರ್ಣಾಯಕ ಮಾತಿನಂತಿದೆ. ಭಾರತವು ಈಗ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಖಂಡಿತ ಮೋದಿ ಯುಗಕ್ಕೆ ಕಾಲಿರಿಸಿದಂತಾಗಿದೆ. ನೆಹರೂ ಯುಗದ ‘ಹೀಗಾದರೆ- ಹಾಗಾದರೆ’ ಎಂಬ ದ್ವಂದ್ವಗಳು ಮುಗಿದಿದ್ದು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ತೆಗೆದುಕೊಳ್ಳುವ ನಿಲುವುಗಳಲ್ಲಿ ಯಾವುದೇ ಅನಿಶ್ಚಯ ಇಲ್ಲ. ‘ನಯಾ ಭಾರತ್’ಗೆ ಅಂತರರಾಷ್ಟ್ರೀಯ ಸಮುದಾಯ ಹೊಂದಿಕೊಳ್ಳಬೇಕು. ಬೇರೆ ಆಯ್ಕೆಯೇ ಇಲ್ಲ.

ಚುರುಮುರಿ

ಬಂತಿದೋ ಅಮೃತಕಾಲ

• ಸುಮಂಗಲಾ

‘ನಮ್ಮ ದೇಶದಾಗೆ 5.3 ಕೋಟಿ ಜನ ನಿರುದ್ಯೋಗಿಗಳು ಅದಾರಂತ. ದಿನದಿಂದ ದಿನಕ್ಕೆ ಚೀನಾದಿಂದ ತರಿಸೂ ಸರಕು ಹೆಚ್ಚಾಗೈತಿ. ಆತ್ಮನಿರ್ಭರ್ ಹೋಗಿ ಚೀನಾನಿರ್ಭರ್ ಆಗೀವಿ. ಅದ್ಕೇ ಇಷ್ಟು ನಿರುದ್ಯೋಗ’ ಸುದ್ದಿ ಓದುತ್ತ ಉದ್ಗರಿಸಿದೆ.

‘ಎಲ್ಲದಾರ 5.3 ಕೋಟಿ ನಿರುದ್ಯೋಗಿಗಳು? ಎಲ್ಲಾ ಸುಳ್ಳು ಅಂಕಿಅಂಶಗಳು. ನಮ್ಮಲ್ಲಿ ಎಷ್ಟಕೊಂದು ನವೋದ್ಯಮಗಳು ತಲೆಯೆತ್ತಿ ನಿಂತಾವು, ರಗಡ್ ಮಂದಿಗಿ ಉದ್ಯೋಗ ಕೊಟ್ಟಾರ. 5.3 ಕೋಟಿ ನಿರುದ್ಯೋಗಿಗಳಿಲ್ಲ, ಇಡೀ ದೇಶದಾಗೆ ಒಬ್ಬರೇ ಒಬ್ಬರು ನಿರುದ್ಯೋಗಿ ಅದಾರಂತ ನಮ್ಮ ಸಂಸದ ತೇಜಸ್ವಿಯಣ್ಣ ಹೇಳ್ಯಾನ’ ಬೆಕ್ಕಣ್ಣ ವಾದಿಸಿತು.

‘ಯಾರಲೇ ಆ ಏಕೈಕ ನಿರುದ್ಯೋಗಿ? ಮತ್ತ ನಿಮ್ಮ ನವೋದ್ಯಮಗಳು ಯಾವ್ರೂ ಅವ್ರಿಗಿ ನೌಕರಿ ಕೊಟ್ಟಿಲ್ಲೇನು?’ ನಾನು ಬೆರಗಿನಿಂದ ಕೇಳಿದೆ.

‘ಕಾಂಗ್ರೆಸ್ ಪಕ್ಷದ ರಾಜಕುಮಾರನೇ ಆ ಏಕೈಕ ನಿರುದ್ಯೋಗಿ ಅಂತ ತೇಜಸ್ವಿಯಣ್ಣ ಹೇಳ್ಯಾನ’.

‘ಅಲ್ಲಲೇ... ಒಂಬತ್ತು ಸಾವಿರಕ್ಕೂ ಹೆಚ್ಚು ಮಂದಿ ನಿರುದ್ಯೋಗಿಗಳು ಹೊಟ್ಟೆಪಾಡು ಕಷ್ಟ ಆಗೈತಂತ ಆತ್ಮಹತ್ಯೆ ಮಾಡ್ಕಂಡಾರ ಅಂತ ಕೇಂದ್ರ ಗೃಹ ಸಚಿವಾಲಯನೇ ಹೇಳೈತಿ’ ನಾನು ಮತ್ತೊಂದು ಸುದ್ದಿ ತೋರಿಸಿದೆ.

‘ಅದೇ ಆ ಒಂಬತ್ತು ಸಾವಿರ ಚಿಲ್ಲರೆ ಮಂದಿ ನಿರುದ್ಯೋಗಿಗಳು ಇದ್ದವರು ಆತ್ಮಹತ್ಯೆ ಮಾಡಿಕೆಂಡ ಮ್ಯಾಗೆ ಉಳಿದ ಏಕೈಕ ನಿರುದ್ಯೋಗಿ ಅಂದ್ರ ರಾಹುಲ್ ಅಂಕಲ್ ಅಂತ ತೇಜಸ್ವಿಯಣ್ಣ ಹೇಳಿದ್ದು’ ಎಂದು ಸಂಸದರ ಮಾತಿಗೆ ಹೊಸ ವ್ಯಾಖ್ಯಾನ ನೀಡಿತು.

‘ಅಷ್ಟೇ ಅಲ್ಲ... ಈಗ ಕಾಲೇಜೊಳಗೆ ಕಲಿಯಾಕೆ ಹತ್ಯಾರಲ್ಲ, ಆ ಗಂಡುಹುಡುಗ್ರಲ್ಲಿ ಮುಂದ ಯಾರಿಗಾದರೂ ನೌಕರಿ ಸಿಗಲಿಲ್ಲ ಅಂದ್ರ, ಉತ್ತರಪ್ರದೇಶದಾಗೆ ಶಾಲು ಫ್ಯಾಕ್ಟರಿ ಶುರು ಮಾಡೀವಿ, ಅಲ್ಲಿ ನೌಕರಿ ಕೊಡಸ್ತೀವಿ ಅಂತ ನಮ್ಮ ಈಶ್ವರಪ್ಪ ಅಂಕಲ್ ಅಂದಾರ. ಇನ್ಮ್ಯಾಗೆ ರಾಹುಕಾಲನೂ ಇಲ್ಲ, ರಾಹುಲನ ಕಾಲವಂತೂ ಎಂದಿಗೂ ಬರಂಗಿಲ್ಲ. ಇನ್ನೇನಿದ್ರೂ ಅಮೃತಕಾಲ... ಕರ್ನಾಟಕವೇ ಅದರ ಪ್ರಯೋಗಶಾಲೆ’ ಬೆಕ್ಕಣ್ಣ ಹೆಮ್ಮೆಯಿಂದ ಬಡಬಡಿಸುತ್ತಿದ್ದರೆ ನಾನು ಪೆಂಗಳಂತೆ ನಿಂತೆ!

ಸಂಗತ

ಪ್ರೀತಿಯ ಪ್ರಖರತೆ ಅದರ ಗೈರಿನಲ್ಲೇ!

ಪ್ರೀತಿ ಎಂದರೆ ಕಲ್ಪನೆಯಲ್ಲ, ಅದು ದಿಟದ ಶೋಧ

• ಯೋಗಾನಂದ

ಬಸ್ ನಿಲ್ದಾಣವೊಂದರ ಬಳಿ ನಿಂತಿದ್ದೆ. ಸ್ಟವ್, ಫಿಲ್ಟರ್, ಪಾತ್ರೆ, ಪಡಗ, ನೀರಿನ ಕ್ಯಾನ್ ವಗೈರೆ ಪೇರಿಸಿದ್ದ ತಳ್ಳುಗಾಡಿಯೊಂದು ಬಂದು ಬದಿಗೆ ನಿಂತಿತು. ಹತ್ತೇ ನಿಮಿಷದಲ್ಲಿ ಆತ, ಆಕೆ ಗಾಡಿಯಿಂದ ಪರಿಕರಗಳನ್ನು ಇಳಿಸಿದ್ದರು. ಸ್ಟವ್ ಶ್ರುತಿಗೊಂಡು ಬರ್ರನೆ ಉರಿಯತೊಡಗಿತು. ಅದು ಕಾಫಿ, ತಿಂಡಿಯ ಸಂಚಾರಿ ಹೋಟೆಲ್. ಅವರು ಅದನ್ನು ನಿರ್ವಹಿಸುವ ನಡು ವಯಸ್ಸಿನ ದಂಪತಿಯೆಂದು ತಿಳಿಯುವುದು ಕಷ್ಟವಾಗಲಿಲ್ಲ. ವಿವಾಹದ ನಂತರವೂ ಮುಂದುವರಿಯುವ ಪ್ರೀತಿ, ಸಾಮರಸ್ಯ ಇದೇ ಅಲ್ಲವೇ ಅನ್ನಿಸಿ ಕಣ್ತುಂಬಿ ಬಂತು.

ಸಿದ್ಧ ಮಾದರಿಯ ನಿರೂಪಣೆ ನಮಗೆ ಗೊತ್ತಿದ್ದೆ. ಅವನು ಮತ್ತು ಅವಳು ಪರಿಚಿತರಾದರು. ಪರಿಚಯ ಸ್ನೇಹಕ್ಕೆ ತಿರುಗಿ, ಸ್ನೇಹ ಪ್ರೀತಿಯಾಯಿತು. ಸುತ್ತಾಟ, ಹೊರ ತಾಣ, ಹೊರ ರುಚಿ, ಕನಸುಗಳದ್ದೇ ಕಾರುಬಾರು. ನೋಡಿದ ಸಿನಿಮಾಗಳು, ಓದಿದ ಕವನದ ಸಾಲುಗಳು ಮೆಲುಕಿಗೆ ಸರದಿಯಲ್ಲಿರುತ್ತವೆ. ಪ್ರೇಮವಿವಾಹ ಸರಿಯೆ. ಆದರೆ ಬದುಕಿನ ಮಹತ್ತರ ನಿರ್ಧಾರ ಕೈಗೊಳ್ಳುವಾಗ ಕೆಲ ಸೂಕ್ಷ್ಮಗಳನ್ನು ಅವರಿಬ್ಬರೂ ಅವಲೋಕಿಸಿಕೊಂಡರೆ ಮತ್ತೂ ಘನ. ತಂತಮ್ಮ ಪೋಷಕರು ಈ ವಿವಾಹಕ್ಕೆ ಮನಃಪೂರ್ತಿಯಾಗಿ ಸಮ್ಮತಿಸುವರೇ? ಹೌದಾದರೆ ಮುಂದೆಯೂ ಆ ಸಮ್ಮತಿ ಸೌಹಾರ್ದದ ರೂಪ ತಳೆಯಬೇಕು. ಸಮ್ಮತಿಸರೆಂದಾದರೆ ಕಾಲಾಂತರದಲ್ಲಾದರೂ ಪೋಷಕ-ಪೋಷಕರ ನಡುವೆ ಗೆಳೆತನ ಮೆರೆಯಬೇಕು. ಏಕೆಂದರೆ ಜನಿಸುವ ಕೂಸು ಅಜ್ಜ, ಅಜ್ಜಿಯರ ಅಕ್ಕರೆಯಿಂದ ವಂಚಿತವಾಗಬಾರದಲ್ಲ!

ಅಪೇಕ್ಷೆ, ಪ್ರತಿಫಲ ನಿರೀಕ್ಷೆ, ಷರತ್ತುಗಳಿಂದ ಪ್ರೀತಿ ಸೊರಗುತ್ತದೆ, ವ್ಯಾವಹಾರಿಕವಾಗುತ್ತದೆ. ಒಲವಿನ ಹಬ್ಬದ ಹಿಗ್ಗನ್ನು ಶಾಪಿಂಗ್‌ನಲ್ಲಿ ಅರಸಲಾಗದು. ಪ್ರೀತಿ, ವಿಶ್ವಾಸದ ಪ್ರಕಟಣೆಗೆ ಕವಿ ನುಡಿಗಳು, ಬಣ್ಣ ಬಣ್ಣದ ಸಂದೇಶಗಳು, ಅದ್ದೂರಿ ಉಡುಗೊರೆಗಳೇನೂ ಅನಿವಾರ್ಯವಲ್ಲ. ಕಾರಣವಿಲ್ಲದ ಸಣ್ಣ ಮಂದಹಾಸ, ಮುಗುಳ್ನಗೆ ಸಂಬಂಧವನ್ನು ಗಟ್ಟಿಗೊಳಿಸಲು ಸಾಕು. ಸೋಜಿಗವೆಂದರೆ, ತನಗೆ ಬೇರ್ಪಡಲು ಹಕ್ಕಿದೆ ಎನ್ನುವ ಸತಿಪತಿಯರ ಗ್ರಹಿಕೆಯೇ ಪ್ರಜ್ಞಾಪೂರ್ವಕವಾಗಿ ಅವರ ಸಂಬಂಧವನ್ನು ಅನನ್ಯಗೊಳಿಸುತ್ತದೆ!

‘ವ್ಯಾಲೆಂಟೈನ್ಸ್ ಡೇ’ (ಫೆ. 14) ಕವಿಗಳ ರಜೆ ದಿನ ಎಂದು ಬಣ್ಣಿಸಲಾಗುತ್ತದೆ. ಮನುಷ್ಯ ಪ್ರೀತಿ ಮತ್ತು ಸಂವೇದನೆಗೆ ಅನಾದಿ ಕಾಲದಿಂದಲೂ ಹೃದಯವನ್ನು ಮೂಲವಾಗಿಸಲಾಗಿದೆ. ಆದರೆ ಹೃದಯ ಎಷ್ಟು ಹಿಡಿಸೀತೆನ್ನುವುದು ಕವಿಯ ಅಳತೆಗೂ ದೊರಕದು. ಕಣ್ಣು ಕಾಣಲಾಗದ್ದನ್ನು ಹೃದಯ ಕಾಣಬಲ್ಲದು. ಕಾಳಿದಾಸನ ‘ಮೇಘದೂತ’ ಕಾವ್ಯದಲ್ಲಿ ಬಂಧಿತ ಯಕ್ಷನ ಪಾಲಿಗೆ ತನ್ನ ಪ್ರೇಯಸಿಗೆ ಸಂದೇಶ ಕಳಿಸಲು ಮೋಡವೇ ವಾಹಕವಾಗುತ್ತದೆ.

ಈ ದಿನ ಪ್ರೇಮಿಗಳಿಗೆ ಮಾತ್ರ ಸೀಮಿತವಲ್ಲ. ಯಾರೇ ಮತ್ತೊಬ್ಬರಿಗೆ ಪ್ರೀತಿ, ವಿಶ್ವಾಸವನ್ನು ಅಭಿವ್ಯಕ್ತಿಸುವ ದಿನ. ನಿತ್ಯವೂ ಆಫೀಸಿಗೆ ಹೊರಡುವಾಗ ಆತನ ಕಿಸೆಗೆ ಆಕೆಯಿಂದ ಕರವಸ್ತ್ರ ಸಲ್ಲುತ್ತಿತ್ತು. ಅಂದು ಹಾಗಾಗದೆ ಅವನು ಪೆಚ್ಚಾದ. ಏನೋ ಕಳೆದುಕೊಂಡಂತೆ ಭಾವ. ಪ್ರೀತಿಯ ಸಾದರ ಅದರ ಗೈರಿನಲ್ಲೇ ಹೆಚ್ಚು ಗಾಢ ಎನ್ನಲಿಕ್ಕೆ ಈ ವೃತ್ತಾಂತ ಸಾಕಲ್ಲವೇ? ಹಾಗಾಗಿ ತಾನೆ ‘ಐ ಮಿಸ್ ಯು’ ಸಂದೇಶಕ್ಕೆ ಅಷ್ಟೊಂದು ಮಹತ್ವ?

ಅಮೆರಿಕದ ಇದಾಹೊ ಪ್ರಾಂತ್ಯದ ಕವಯಿತ್ರಿ ಜೋನಾ ಫಾಚಸ್ ಅವರ ಹನಿಗವನ: ‘ಸಂತಸ, ಪೂರ್ಣತೆ, ಸಿರಿತನ ನನ್ನ ಬದುಕೆಲ್ಲ/ ಏಕೆ ಈ ಖುಷಿ, ಆನಂದ, ಪರವಶತೆ?/ ಕೇವಲ ನೀನು ಪ್ರೀತಿಸುವೆ ಎಂಬ ಕಾರಣಕ್ಕೆ//’. ಎಲ್ಲ ಬಗೆಯ ಪ್ರೀತಿಯೂ ಸುಂದರ, ಹಬ್ಬವಾಗಿ ಸಂಭ್ರಮಿಸಲರ್ಹ. ಗೆಳತಿ ಅಥವಾ ಗೆಳೆಯ ಇಲ್ಲದಿದ್ದರೇನೀಗ? ಹೆತ್ತವರು, ಗುರುವರ್ಯರು, ಬಂಧುಗಳು, ಇಷ್ಟರು, ಹಿತೈಷಿಗಳು, ಆಪ್ತರು, ನೆರೆಹೊರೆಯವರು... ಅವರಿಗೆಲ್ಲ ಅಂದು ವಂದಿಸಲೇನಡ್ಡಿ? ಅತ್ತೆ ಮಾವಂದಿರಿಗೆ ಸೊಸೆ ಮಗಳಾಗುವಲ್ಲಿ, ಅಳಿಯ ಮಗನಾಗುವಲ್ಲಿ ಒದಗುವ ಆಪ್ತತೆ ಕಡಿಮೆಯೇ? ಎಲ್ಲವೂ ಪ್ರೀತಿಗಾಗಿ ತನ್ನ ಜೀವ ಸಮರ್ಪಿಸಿದ ಸಂತ ವ್ಯಾಲೆಂಟೈನ್ ಅವರಿಗೆ ಸಲ್ಲಿಸುವ ಗೌರವವೂ ಆಗುವುದು. ಆದರೆ, ಅನುಕಂಪ, ದಯೆಯನ್ನು ಒಂದು ದಿನಕ್ಕೇ ಮಿತಗೊಳಿಸದೆ ಪ್ರತಿದಿನ ಅವನ್ನು ಸಡಗರಿಸಬೇಕು.

ವ್ಯಾಲೆಂಟೈನ್ ದಿನವನ್ನು ಸಡಗರಿಸುವ ಮನಸ್ಸುಗಳು ವರ್ಷದ ಉಳಿದೆಲ್ಲ ಹಬ್ಬಗಳನ್ನೂ ಸಂಭ್ರಮಿಸುವಷ್ಟು ಉಲ್ಲಸಿತಗೊಳ್ಳುತ್ತವೆ ಎಂಬ ಮಾತು ಅಷ್ಟೇ ಸತ್ಯ. ಬದುಕಿನಲ್ಲಿ ಒಂದೇ ಒಂದು ಸಂತೋಷದ ಸಂಗತಿಯೆಂದರೆ, ಪ್ರೀತಿಸುವುದು ಮತ್ತು ಪ್ರೀತಿಗೆ ಪಾತ್ರವಾಗುವುದು. ಪ್ರೀತಿಯ ಯಾನದಲ್ಲಿ ಪರಸ್ಪರ ಆಲಿಕೆ ಒಂದು ಅದ್ಭುತ ಶಕ್ತಿ. ಪ್ರತೀ ದಿನವನ್ನೂ ಆಲಿಸಬೇಕು. ಆಲಿಸದೇ ಮುರಿಯುವ ಸಂಬಂಧಗಳು ಅಸಂಖ್ಯ. ಪ್ರೀತಿಯಿರದಿದ್ದಲ್ಲಿ ಬದುಕಿರದು. ನಿಜಪ್ರೀತಿಗೆ ಡಂಗುರ, ಪ್ರಖರ ದೀಪ, ಲಾಂಛನವಿರದು. ಪ್ರೀತಿಯ ಸದ್ದು ಕೇಳುತ್ತಿದ್ದರೆ, ನೋಟ ಕಣ್ಣು ಕೋರೈಸುತ್ತಿದ್ದರೆ ಕಿವಿ, ಕಣ್ಣು ವೈದ್ಯರ ಬಳಿ ಹೋಗಿ ಪರೀಕ್ಷಿಸಿಕೊಂಡು ಬಿಡುವುದೇ ಸೂಕ್ತ!

ಪ್ರೀತಿಯ ಗೆಲುವೆಂದರೆ ಮೆಚ್ಚುಗೆ, ಭರವಸೆ, ನಂಬಿಕೆ, ನಿರಂತರತೆಯ ಗೆಲುವು. ಅದು ಸೋತರೂ ಬಹುಮುಖ ಪ್ರಯೋಜನವಿದೆ. ವ್ಯಕ್ತಿಗೆ ಇನ್ನಷ್ಟು ಗಟ್ಟಿತನ ಬರುವುದು. ಕೋಪ, ಭಯ, ಖಿನ್ನತೆ ಜಯಿಸಬಲ್ಲೆನೆಂಬ ಆತ್ಮವಿಶ್ವಾಸ ಮೂಡುತ್ತದೆ. ಪ್ರೀತಿ ಎಂದರೆ ಕಲ್ಪನೆಯಲ್ಲ, ಅದು ದಿಟದ ಶೋಧ. ಜಗತ್ತನ್ನು ನಾವು ಹೊಸ ಬೆಳಕಿನಿಂದ ನೋಡಲು ಸಾಧ್ಯವಾಗಿಸುವ, ಹೊಸ ಆರಂಭಗಳಿಗೆ ಪ್ರಭಾವಿಸುವ ಅನುಭಾವ.

ವಾಚಕರ ವಾಣಿ

ಪ್ರೇಮಿಗಳಿಗೆ ಮಾತ್ರವಲ್ಲ!

ಸಂತ ವ್ಯಾಲೆಂಟೈನ್ ಅವರ ಜ್ಞಾಪಕಾರ್ಥವಾಗಿ ಬಂಧುಮಿತ್ರರು, ಸ್ನೇಹಿತರು ಎನ್ನದೆ ಎಲ್ಲರೊಂದಿಗಿನ ಪ್ರೀತಿಯ ವಿನಿಮಯದ ಸಂಕೇತವಾಗಿ ಆಚರಿಸುವ ‘ವ್ಯಾಲೆಂಟೈನ್ಸ್ ಡೇ’ ಇತ್ತೀಚೆಗೆ ಪ್ರೇಮಿಗಳಿಗೆ ಮಾತ್ರ ಎಂಬಂತೆ ಮಾರ್ಪಾಡಾಗಿರುವುದು ಸರಿಯಲ್ಲ. ಕೇವಲ ಮೃದು ಆಟದ ಗೊಂಬೆಗಳು, ಹೃದಯದ ಲಾಂಛನಗಳು, ಪ್ರತಿಷ್ಠಿತ ರೆಸ್ಟೋರೆಂಟ್‌ಗೆ ಪ್ರೇಯಸಿಯನ್ನು ಕರೆದೊಯ್ದು, ಉಚ್ಚಾರಣೆ ತಿಳಿಯದ ಖಾದ್ಯ ಕೊಡಿಸುವುದನ್ನೇ ಪ್ರೀತಿ ಎನ್ನುವುದಾದರೆ, ನಮ್ಮ ಹಳ್ಳಿಯ ಸಿದ್ಧಣ್ಣ, ಬೋರಕ್ಕ ಯಾರೂ ಪ್ರೀತಿಗೆ ಅರ್ಹರಲ್ಲ ಎಂದಾಗುತ್ತದೆ. ಆದರೆ ಅಂಕಿ ಅಂಶಗಳನ್ನು ಗಮನಿಸಿದರೆ, ಹೆಚ್ಚುದಿನ ಅನ್ಯೋನ್ಯವಾಗಿ ಸಂಸಾರ ಮಾಡುವವರೇ ಇಂತಹವರು.

ರವಿಕಿರಣ್ ಶೇಖರ್, ಬೆಂಗಳೂರು

ಹೆಬ್ಬೆಟ್ಟುಗಳಲ್ಲ, ಹೆಮ್ಮೆಯ ಕನ್ನಡಿಗರು

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಲ್ಲಿ ಸುಮಾರು 30,000 ಹೆಬ್ಬೆಟ್ಟುಗಳಿರುವುದಾಗಿ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಹೇಳಿರುವುದು ಸಮಂಜಸವಲ್ಲ. ಅವರು ನಮ್ಮ ಹೆಮ್ಮೆಯ ಕನ್ನಡಿಗರು. ನಮ್ಮ ದೇಶದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಿಂದ ಹಿಡಿದು ಪ್ರಧಾನಿಯನ್ನು ಆಯ್ಕೆ ಮಾಡುವವರವರೆಗೂ ಮತದಾರರಲ್ಲಿ ಈ ಅನಕ್ಷರಸ್ಥರು ಸಹ ಸೇರಿರುತ್ತಾರೆ. ಕನ್ನಡ ನಾಡಿನ ಮೊದಲ ಲಾಕ್ಷಣಿಕ ಗ್ರಂಥವಾದ ಕವಿರಾಜ ಮಾರ್ಗದಲ್ಲಿ ‘ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್...’ (ಕನ್ನಡಿಗರು ಓದದೇ ಬರೆಯದೇ ಇದ್ದರೂ ಅವರು ಕಾವ್ಯವನ್ನು ಕಟ್ಟುತ್ತಿದ್ದರು) ಎಂದು ಹೇಳಲಾಗಿದೆ. ಎಲ್ಲಾ ಸಾಹಿತ್ಯಗಳ ಬೇರು ಎಂದು ಹೇಳುವ ಜನಪದ ಸಾಹಿತ್ಯವನ್ನು ರಚನೆ ಮಾಡಿರುವವರು ಅನಕ್ಷರಸ್ಥರೇ. ಅವರು ಎಂತೆಂತಹ ಸಾಹಿತ್ಯವನ್ನು ರಚಿಸಿದ್ದಾರೆಂದು ಒಮ್ಮೆ ನಾವು ಮನನ ಮಾಡಿಕೊಳ್ಳಬಹುದು.

ನಾಡಿಗೆ ಅನ್ನ ನೀಡುವ ರೈತರಲ್ಲಿ ಕೆಲವರು ಅನಕ್ಷರಸ್ಥರು. ಹಾಗೆಯೇ ಕುಂಬಾರಿಕೆ ಮಾಡುವವರು, ಬುಟ್ಟಿ ಹೆಣೆಯುವವರು, ನೇಕಾರರು, ಗೊಂದಲಿಗರು, ಹರಿಕಥೆ ಹೇಳುವ ಜನಪದರು ಹೀಗೆ ಗ್ರಾಮೀಣ ಪ್ರದೇಶದ ಗುಡಿ ಕೈಗಾರಿಕೆಯಲ್ಲಿ ತೊಡಗಿಕೊಂಡವರು ಅನಕ್ಷರಸ್ಥರಾಗಿದ್ದಾರೆ. ಅವರು ತಮ್ಮ ಕೌಶಲದಲ್ಲಿ ಅಪ್ರತಿಮ ತಂತ್ರಜ್ಞಾನ ಹೊಂದಿದ್ದಾರೆ ಎಂಬುದನ್ನು ನಾವು ಮರೆಯುವಂತಿಲ್ಲ. ಹಾಗಾಗಿ, ಪರಿಷತ್ತಿನಲ್ಲಿರುವ ಅನಕ್ಷರಸ್ಥರನ್ನು ಹೆಬ್ಬೆಟ್ಟುಗಳೆಂದು ಹೀಯಾಳಿಸುವುದು ಸರಿಯಲ್ಲ.

ವೀರಹನುಮಾನ, ರಾಯಚೂರು

ಆದರ್ಶ ಉದ್ಯಮಿ ಬಜಾಜ್

ಇತ್ತೀಚೆಗೆ ನಿಧನರಾದ ಉದ್ಯಮಿ ರಾಹುಲ್ ಬಜಾಜ್ ಅವರು ದ್ವಿಚಕ್ರ, ತ್ರಿಚಕ್ರ ಉತ್ಪಾದಕ ಬಜಾಜ್ ಸಂಸ್ಥೆಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸುವುದರಲ್ಲಿ ಸಫಲರಾಗಿದ್ದರು. ಯಾವ ಪಕ್ಷವೇ ಸರ್ಕಾರಗಳನ್ನು ನಡೆಸುತ್ತಿರಲಿ, ಸರ್ಕಾರದ ಧೋರಣೆಗಳು ಸರಿಯಿಲ್ಲವೆಂದಾದರೆ ನೇರವಾಗಿಯೇ ಟೀಕಿಸುತ್ತಿದ್ದರು. ಉದ್ಯಮ ರಂಗದಲ್ಲಿ ಇದ್ದುಕೊಂಡು ‘ಜೀ ಹುಜೂರ್’ ಎನ್ನದೇ ವ್ಯವಸ್ಥೆಯ ವಿರುದ್ಧ ಮಾತನಾಡುವುದು ಬಹುಶಃ ರಾಹುಲ್ ಬಜಾಜ್ ಅವರಂತಹ ಧೈರ್ಯಶಾಲಿಗಳಿಗೆ ಮಾತ್ರ ಸಾಧ್ಯ.

ಸಂಸ್ಥೆಯನ್ನು ತೀವ್ರ ಪೈಪೋಟಿಯ ನಡುವೆಯೂ ಮುನ್ನಡೆಸುವುದನ್ನು ಅಂತಹವರಿಂದ ನೋಡಿ ಕಲಿಯಬೇಕು. ಬಜಾಜ್ ಚೇತಕ್ ಹೊಸ ವಾಹನವನ್ನು ಕೊಳ್ಳಲು ಜನ ವರ್ಷಾನುಗಟ್ಟಲೆ ಕಾಯಬೇಕಾದಂತಹ ಸಂದರ್ಭ ಇದ್ದಾಗಲೂ ಆ ವಾಹನದ ಬೆಲೆ ಏರಿಸುವ ಆಮಿಷಕ್ಕೆ ಒಳಗಾಗದೆ, ಮಧ್ಯಮ ವರ್ಗಕ್ಕೆ ಕೈಗೆಟಕುವ ಬೆಲೆಗೆ ದೊರಕುವಂತೆ ನೋಡಿಕೊಂಡು ಆದರ್ಶ ಉದ್ಯಮಿಯಾಗಿದ್ದರು.

ಭರತ್ ಬಿ.ಎನ್., ಬೆಂಗಳೂರು

ಮಠಗಳ ಹೆಚ್ಚಳ: ತರ್ಕಹೀನ ವಾದ

‘ಸ್ವಾಮೀಜಿಗಳು ಹೆಚ್ಚಾದಂತೆ ಸಂಸ್ಕಾರ ಹೆಚ್ಚಾಗುತ್ತ ಹೋಗುತ್ತದೆ’ ಎನ್ನುವ ವಚನಾನಂದ ಸ್ವಾಮೀಜಿ ಅವರ ಮಾತಿನಲ್ಲಿ ಹುರುಳಿಲ್ಲ ಎನಿಸುತ್ತದೆ. ಏಕೆಂದರೆ ಈಗಿರುವ ಸಾವಿರಾರು ಮಠಾಧೀಶರು ಇಲ್ಲಿಯತನಕ ಏನು ಮಾಡಿದರು, ಮಾಡುತ್ತಿದ್ದಾರೆ? ದೇಶದಲ್ಲಿ ಪಂಚಮಸಾಲಿ ಸಮುದಾಯದ ಒಂದೂವರೆ ಕೋಟಿ ಜನರಿದ್ದಾರೆಂದೂ ಅದಕ್ಕಾಗಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಪಂಚಮಸಾಲಿ ಮಠಗಳಿರಬೇಕೆಂಬ ಅವರ ವಾದವೇ ತರ್ಕಹೀನ. ಏಕೆಂದರೆ ಉಳಿದ ಲಿಂಗಾಯತ ಮಠಗಳ ಕೆಲಸ ಏನು? ಉಳಿದ ಲಿಂಗಾಯತ ಉಪಜಾತಿಗಳಿಗೆ ಯಾರು ದಿಕ್ಕು? ಉದಾಹರಣೆಗೆ, ಯಾವುದೇ ಮಠ, ಪೀಠಗಳನ್ನು ಹೊಂದಿರದ ಬಣಜಿಗ ಲಿಂಗಾಯತರು ಎಲ್ಲಿಗೆ ಹೋಗಬೇಕು? ನಾವು ಕಾಣುತ್ತಿರುವಂತೆ ಬಣಜಿಗರು, ಪಂಚಮಸಾಲಿಗಳು ಕೊಡು ಕೊಳ್ಳುವಿಕೆಯ ಮೂಲಕ ಹಾಲು ಜೇನಿನಂತೆ ಬೆರೆತುಹೋಗುತ್ತಿದ್ದು, ಈ ಸ್ವಾಗತಾರ್ಹ ಬೆಳವಣಿಗೆಗೆ ಯಾವ ಮಠಾಧೀಶರೂ ಕಾರಣರಲ್ಲ. ತಂದೆ ಬಣಜಿಗ, ತಾಯಿ ಪಂಚಮಸಾಲಿ ಆಗಿರುವವರ ಮಕ್ಕಳು ಯಾವ ಪೀಠ ಸೇರಬೇಕು ಎಂಬುದಕ್ಕೆ ನಮಗೆ ಸ್ವಾಮೀಜಿಯಿಂದ ಸ್ಪಷ್ಟನೆ ಬೇಕಾಗಿದೆ!

ಇಷ್ಟಕ್ಕೂ ಸ್ವಾರ್ಥ, ದ್ವೇಷಕ್ಕೆ ಕಾರಣವಾಗುವ ಉಪಜಾತಿ ಬೇಲಿ ಮಠಗಳ ಅವಶ್ಯಕತೆ ಸಮಾಜಕ್ಕೆ ಇಲ್ಲ. ಸಂಕುಚಿತ ಮನೋಭಾವ ಬೆಳೆಸುವುದೇ ಸಂಸ್ಕಾರವೇ? ‘900 ವರ್ಷಗಳಿಂದ ಇರುವ ಮಠಗಳೇ ಇನ್ನೂ ಜನರನ್ನು ಪೂರ್ತಿಯಾಗಿ ತಲುಪಲು ಆಗಿಲ್ಲ. ಇನ್ನು ನಾವು 15-20 ವರ್ಷಗಳಿಂದ ಈಚೆಗೆ ಆರಂಭಗೊಂಡಿರುವ ಮಠಗಳು ತಲುಪಿದ್ದೇವೆ ಎನ್ನಲು ಸಾಧ್ಯವೇ’ ಎಂದು ಕೇಳುವ ಮೂಲಕ ಬಸವಾದಿ ಶರಣರ ಕಾರ್ಯವನ್ನು ಸ್ವಾಮೀಜಿ ಅಣಕಿಸಿದ್ದಾರೆ. ಉಳಿದ ಮಠಾಧೀಶರನ್ನು ಅವಮಾನಿಸುವ ಮಾತಿದು. ಅಲ್ಲದೆ ಅವರೇ ಉದಾಹರಿಸಿದ ಸಿದ್ಧೇಶ್ವರ ಶ್ರೀಗಳು, ಚಿತ್ರದುರ್ಗದ ಜಯದೇವ ಜಗದ್ಗುರುಗಳು, ಸುತ್ತೂರು ಶಿವರಾತ್ರೀಶ್ವರರು ಯಾವುದಾದರೂ ಉಪಜಾತಿಗೆ ಸೀಮಿತರಾಗಿದ್ದಾರೆಯೇ? ‘ಹಾರುವರಾದಿಯಾಗಿ ಅಂತ್ಯಜರೆಲ್ಲ ಒಂದೇ’ ಎಂದು ಅಂತರ್ಜಾತಿ ವಿವಾಹ ಮಾಡಿಸಿದ ಬಸವಣ್ಣನವರ ಆದರ್ಶವನ್ನು ಮೊದಲು ಸ್ವಾಮೀಜಿ ಪಾಲಿಸಬೇಕಾಗಿದೆ. ನಮ್ಮ ಜಾತಿಯವರೇ ಮುಖ್ಯಮಂತ್ರಿಯಾಗಲಿ, ಮಂತ್ರಿಯಾಗಲಿ ಎಂದು ಫರ್ಮಾನು ಹೊರಡಿಸುವುದು ಸ್ವಾರ್ಥದ ಪರಮಾವಧಿಯಲ್ಲವೇ? ಅವರನ್ನೂ ಒಳಗೊಂಡಂತೆ ಎಲ್ಲ ಮಠಾಧೀಶರೂ ಬಸವಣ್ಣನವರ ಕನಸಾದ ಜಾತಿ ವಿನಾಶಕ್ಕೆ ಕೈಹಾಕಿ ಅಸ್ಪೃಶ್ಯತೆಯನ್ನು ತೊಲಗಿಸಿ, ಸಮಸಮಾಜದ ನಿರ್ಮಾಣಕ್ಕೆ ಕಾರಣರಾಗಲಿ. ಇದಕ್ಕಾಗಿ ‘ಪಾದಯಾತ್ರೆ’ ಮಾಡಲಿ ಎನ್ನುವುದು ನನ್ನಂಥ ‘ಲಿಂಗಾಯತ’ನ ಅಭಿಪ್ರಾಯ.

ಶಿವಕುಮಾರ ಬಂಡೋಳಿ, ಹುಣಸಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

TATA IPL ಹಣದ ಹಂಗಾಮಾ

2022ನೇ ಸಾಲಿನ ಐಪಿಎಲ್ ಆಟಗಾರರ ಹರಾಜು ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಇಂಡಿಯನ್ ಪ್ರೀಮಿಯರ್ ಲೀಗ್ ಅಂದರೆ ಐಪಿಎಲ್, ಬಿಸಿಸಿಐನ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿದೆ. ಈಗ ವಿಶ್ವ ಕ್ರಿಕೆಟ್‌ನ ಒಟ್ಟು ವಾರ್ಷಿಕ ವಹಿವಾಟಿನಲ್ಲಿ ಐಪಿಎಲ್ ಸರಣಿಯೊಂದರ ಪಾಲು ಶೇ 40ರಷ್ಟನ್ನು ಮೀರುತ್ತದೆ. ಅಂದರೆ ಐಪಿಎಲ್‌ನಲ್ಲಿ ಹರಿಯುವ ಹಣದ ಹೊಳೆಯನ್ನು ಅಂದಾಜಿಸಬಹುದು. 2008ರಲ್ಲಿ ಬಿಸಿಸಿಐ ಮೊದಲ ಬಾರಿ ಐಪಿಎಲ್ ಆರಂಭಿಸಿದಾಗ, ಐಪಿಎಲ್‌ನಿಂದ ಅದಕ್ಕೆ ದೊರೆತ ಆದಾಯ ಸುಮಾರು ₹900 ಕೋಟಿಯಷ್ಟು. 2022ರಲ್ಲಿ ಐಪಿಎಲ್ ಮೂಲಕ ಬಿಸಿಸಿಐ ₹6,000 ಕೋಟಿಗೂ ಹೆಚ್ಚು ಆದಾಯವನ್ನು ಗಳಿಸುವ ನಿರೀಕ್ಷೆ ಇದೆ. ಈಗ ಬಿಸಿಸಿಐನ ವಾರ್ಷಿಕ ವರದಿಯಲ್ಲಿ ಐಪಿಎಲ್ ಆದಾಯದ ಪಾಲು ಶೇ 60ಕ್ಕಿಂತಲೂ ಹೆಚ್ಚು.

ಐಪಿಎಲ್ ಆರಂಭಕ್ಕೂ ಮುನ್ನವೇ ಬಿಸಿಸಿಐ ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಸಂಸ್ಥೆ ಎನಿಸಿತ್ತು. ಬಿಸಿಸಿಐನ ಮೌಲ್ಯ, ಆದಾಯ, ವೆಚ್ಚ ಎಲ್ಲವೂ ಅಂತರರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಗಿಂತಲೂ (ಐಸಿಸಿ) ಹೆಚ್ಚು ಇತ್ತು. ಐಪಿಎಲ್ ಆರಂಭದ ನಂತರ ಬಿಸಿಸಿಐನ ಆದಾಯ ಮತ್ತು ಸಂಪತ್ತು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇಲ್ಲಿ ಬಿಸಿಸಿಐ ಆದಾಯದ ಪರಿಗಣನೆಗೆ ಒಟ್ಟು ಲೆಕ್ಕಾಚಾರವನ್ನಷ್ಟೇ ನೀಡಲಾಗಿದೆ. ಫ್ರಾಂಚೈಸಿಗಳ ಬ್ರಾಂಡ್ ಮೌಲ್ಯ, ಜಾಹೀರಾತು ಆದಾಯ, ಟಿಕೆಟ್ ಮಾರಾಟದ ಆದಾಯವನ್ನೂ ಪರಿಗಣಿಸಿದರೆ ಒಟ್ಟು ಮೊತ್ತವು ಹತ್ತಾರು ಸಾವಿರ ಕೋಟಿಯನ್ನು ಮೀರುತ್ತದೆ.

ಐಪಿಎಲ್‌ನಿಂದ ಬಿಸಿಸಿಐಗೆ ದೊರೆಯುತ್ತಿರುವ ಒಟ್ಟು ಆದಾಯದಲ್ಲಿ ಪ್ರಸಾರ ಹಕ್ಕುಗಳ ಮಾರಾಟದಿಂದ ದೊರೆಯುವ ಆದಾಯದ್ದೇ ಸಿಂಹಪಾಲು. ಐಪಿಎಲ್ ಆರಂಭವಾದಾಗ ಪ್ರಸಾರದ ಹಕ್ಕಿನ ಮಾರಾಟದಿಂದ ಬಿಸಿಸಿಐಗೆ ₹422 ಕೋಟಿಯಷ್ಟು ಆದಾಯ ದೊರೆತಿತ್ತು. 2018ರಲ್ಲಿ ಒಟ್ಟು ಐದು ವರ್ಷದ ಅವಧಿಗೆ ಪ್ರಸಾರದ ಹಕ್ಕನ್ನು ಮಾರಾಟ ಮಾಡಲಾಗಿತ್ತು. 2018-2023ರ ಅವಧಿಯಲ್ಲಿ ನಡೆಯುವ ಎಲ್ಲಾ ಐಪಿಎಲ್ ಸರಣಿ ಮತ್ತು ಪಂದ್ಯಗಳ ಪ್ರಸಾರದ ಹಕ್ಕಿನ ಮಾರಾಟದಿಂದ ಬಿಸಿಸಿಐ ₹16,347 ಕೋಟಿ ಆದಾಯ ಗಳಿಸಿದೆ. ಪ್ರತಿ ಪಂದ್ಯ ನಡೆದಾಗಲೂ ಬಿಸಿಸಿಐಗೆ ₹54.5 ಕೋಟಿಯಷ್ಟು ಆದಾಯ ಜಮೆ ಆಗುತ್ತದೆ.

2024-29ರ ಅವಧಿಗೆ ಮತ್ತೆ ಪ್ರಸಾರದ ಹಕ್ಕು ಮಾರಾಟದಿಂದ ಬಿಸಿಸಿಐ ₹35,000 ಕೋಟಿ ಆದಾಯ ನಿರೀಕ್ಷಿಸುತ್ತಿದೆ. ಪ್ರಸಾರದ ಹಕ್ಕಿನ ಮಾರಾಟದ ಮೌಲ್ಯವನ್ನು ಹೆಚ್ಚಿಸುವ ಸಲುವಾಗಿ ಪಂದ್ಯಗಳ ಸಂಖ್ಯೆಯನ್ನೂ ಹೆಚ್ಚಿಸಲು ಬಿಸಿಸಿಐ ನಿರ್ಧರಿಸಿದೆ. ಇದೊಂದು ರೀತಿಯಲ್ಲಿ ಪಂದ್ಯದಿಂದ ದೊರೆಯುವ ಆದಾಯವಲ್ಲ. ಬದಲಿಗೆ ಆದಾಯಕ್ಕಾಗಿ ಪಂದ್ಯ ನಡೆಸುವ ಮಾದರಿ. 2024ರಿಂದ ಪ್ರತಿ ವರ್ಷ 14 ಪಂದ್ಯಗಳನ್ನು ಹೆಚ್ಚುವರಿಯಾಗಿ ಸೇರಿಸಿಕೊಳ್ಳುತ್ತಾ ಹೋಗಲು ಬಿಸಿಸಿಐ ಯೋಜನೆ ಸಿದ್ಧಪಡಿಸಿದೆ.

ಐಪಿಎಲ್ ಬ್ರಾಂಡ್ ಮೌಲ್ಯ

ಲಲಿತ್ ಮೋದಿ ಅವರು ಆರಂಭಿಸಿದ ಈ ಕ್ರಿಕೆಟ್ ಟೂರ್ನಿಯ ಬ್ರಾಂಡ್ ಮೌಲ್ಯ ವರ್ಷದಿಂದ ವರ್ಷಕ್ಕೆ ಯಾರೂ ಊಹಿಸದ ಮಟ್ಟಕ್ಕೆ ಬೆಳೆದಿದೆ. ಕ್ರಿಕೆಟ್ ಜನಪ್ರಿಯತೆಯ ಜೊತೆ ಬಾಲಿವುಡ್‌ನ ಥಳಕು ಸೇರಿದ್ದರಿಂದ ಪ್ರಾಯೋಜಕರು ಐಪಿಎಲ್ ಮೇಲೆ ಕೋಟಿಗಟ್ಟಲೆ ದುಡ್ಡು ಸುರಿದರು. ಈಗ ಐಪಿಎಲ್‌ನ ಒಟ್ಟಾರೆ ಬ್ರಾಂಡ್ ಮೌಲ್ಯವು ₹45,800 ಕೋಟಿ. ಕೋವಿಡ್ ಕಾರಣದಿಂದ, 2019ರಲ್ಲಿದ್ದ ಮೌಲ್ಯದಲ್ಲಿ ಕೊಂಚ ಕುಸಿತವಾಗಿದೆ.

ಈ ಬಾರಿಯ ಐಪಿಎಲ್‌ಗೆ ಎರಡು ಹೊಸ ತಂಡಗಳು ಸೇರ್ಪಡೆಯಾಗಿದ್ದು, ಎರಡೂ ತಂಡಗಳಿಂದ ಬಿಸಿಸಿಐ ಸುಮಾರು ₹12,700 ಕೋಟಿ ಗಳಿಸಿದೆ. ಇದು ಐಪಿಎಲ್‌ನ ಜನಪ್ರಿಯತೆಯ ಪ್ರಮಾಣವನ್ನು ಬಿಂಬಿಸುತ್ತದೆ. ಪ್ರತಿ ತಂಡವೂ ಹೊಂದಿರುವ ಜನಪ್ರಿಯತೆ, ತಂಡದಲ್ಲಿರುವ ಆಟಗಾರರ ವರ್ಚಸ್ಸು, ತಂಡದ ಸ್ವತ್ತು, ತಂಡದ ಪ್ರಾಯೋಜಕತ್ವ ಮೊದಲಾದ ಅಂಶಗಳು ಆ ತಂಡಗಳ ಬ್ರಾಂಡ್ ಮೌಲ್ಯವನ್ನು ನಿರ್ಧರಿಸುತ್ತವೆ. ಈ ಪ್ರಕಾರ, ಈ 13 ವರ್ಷಗಳಲ್ಲಿ 5 ಬಾರಿ ಐಪಿಎಲ್ ಕಿರೀಟ ಧರಿಸಿರುವ ಮುಂಬೈ ಇಂಡಿಯನ್ಸ್‌ನ ಬ್ರಾಂಡ್ ಮೌಲ್ಯ ಸಹಜವಾಗಿಯೇ ಅಗ್ರ ಸ್ಥಾನದಲ್ಲಿದೆ.

ಐಪಿಎಲ್ ಒಟ್ಟಾರೆ ಬ್ರಾಂಡ್ ಮೌಲ್ಯ



ಫ್ರಾಂಚೈಸಿಗಳಿಗೆ ಹಣ

ಕ್ರಿಕೆಟ್ ಪಂದ್ಯಗಳನ್ನು ವಾಹಿನಿಗಳಲ್ಲಿ ನೇರ ಪ್ರಸಾರ ಮಾಡುವ ಹಕ್ಕುಗಳಿಂದ ಬಿಸಿಸಿಐ ಕೋಟ್ಯಂತರ ರೂಪಾಯಿ ಗಳಿಸುತ್ತದೆ. ಈ ಹಣವನ್ನು ಐಪಿಎಲ್ ಫ್ರಾಂಚೈಸಿಗಳಿಗೆ ಹಂಚಿಕೆ ಮಾಡುತ್ತದೆ. ಮೂಲಗಳ ಪ್ರಕಾರ, ಪ್ರಸಾರ ಹಕ್ಕುಗಳಿಂದ ಬಂದ ಶೇ 50ರಷ್ಟು ಹಣವನ್ನು ತಂಡಗಳಿಗೆ ನೀಡಲಾಗುತ್ತದೆ.

ಬ್ರಾಂಡ್ ಪ್ರಾಯೋಜಕತ್ವವು ತಂಡಗಳ ಮತ್ತೊಂದು ಆದಾಯದ ಮೂಲವಾಗಿದೆ. ಎಲ್ಲ ತಂಡಕ್ಕೂ ಪ್ರಾಯೋಜಕರು ಇದ್ದಾರೆ. ತಮ್ಮ ಕಂಪನಿಯ ಹೆಸರು ಹಾಗೂ ಲಾಂಛನಗಳನ್ನು ತಂಡದ ಆಟಗಾರರ ಜರ್ಸಿ ಮೇಲೆ ಹಾಕುವ ಮೂಲಕ ಪ್ರಚಾರ ಪಡೆಯುತ್ತಾರೆ. ಇದಕ್ಕೆ ಹಣವನ್ನು ಪಾವತಿಸಲಾಗುತ್ತದೆ.

ಐಪಿಎಲ್ ಟೈಟಲ್ ಪ್ರಾಯೋಜಕತ್ವವೂ ತಂಡಗಳಿಗೆ ಹಣವನ್ನು ತರುತ್ತದೆ. ‘ಡಿಎಲ್‌ಎಫ್ ಐಪಿಎಲ್’, ‘ವಿವೊ ಐಪಿಎಲ್’ – ಹೀಗೆ ಐಪಿಎಲ್‌ನ ಹೆಸರಿನ ಹಿಂದಿರುವ ಡಿಎಲ್‌ಎಫ್ ಹಾಗೂ ವಿವೊ ಹೆಸರುಗಳು ಟೈಟಲ್ ಪ್ರಾಯೋಜಕತ್ವ ವಹಿಸಿಕೊಂಡ ಕಂಪನಿಗಳನ್ನು ಸೂಚಿಸುತ್ತವೆ. ಇದರಿಂದ ಬರುವ ಹಣದ ಪಾಲನ್ನು ಫ್ರಾಂಚೈಸಿಗಳಿಗೆ ಬಿಸಿಸಿಐ ಹಂಚಿಕೆ ಮಾಡುತ್ತದೆ.

ಕ್ರಿಕೆಟ್ ಪಂದ್ಯಗಳ ಟಿಕೆಟ್ ಮಾರಾಟವೂ ಆದಾಯದ ಪ್ರಮುಖ ಮೂಲ. ಟಿಕೆಟ್ ಮಾರಾಟದಿಂದ ಬಂದ ಶೇ 10ರಷ್ಟು ಹಣ ಎರಡೂ ತಂಡಗಳ ನಡುವೆ ಹಂಚಿಕೆಯಾಗುತ್ತದೆ. ಟಿ-ಶರ್ಟ್, ಟೋಪಿ, ಕಿಟ್, ಕೈಗಡಿಯಾರಗಳನ್ನು ಮಾರಾಟ ಮಾಡಿಯೂ ತಂಡಗಳು ಹಣ ಸಂಗ್ರಹಿಸುತ್ತವೆ.

ಫೈನಲ್ ಪಂದ್ಯದಲ್ಲಿ ಗೆದ್ದ ಮತ್ತು ಎರಡನೇ ಸ್ಥಾನ ಪಡೆದ ತಂಡ, ತಂಡದ ಆಟಗಾರರಿಗೆ ಪ್ರಶಸ್ತಿಯ ಮೊತ್ತವು ಹಂಚಿಕೆಯಾಗುತ್ತದೆ. 2019ರಲ್ಲಿ ಮುಂಬೈ ತಂಡಕ್ಕೆ ₹20 ಕೋಟಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ₹12.5 ಕೋಟಿ ಪ್ರಶಸ್ತಿ ಮೊತ್ತ ಬಂದಿತ್ತು. ಆದರೆ ಫೈನಲ್ ಪ್ರವೇಶಿಸುವ ತಂಡದ ಬ್ರಾಂಡ್ ಮೌಲ್ಯ ಹೆಚ್ಚಾಗುವುದರಿಂದ ಬರುವ ಆದಾಯಕ್ಕೆ ಹೋಲಿಸಿದರೆ, ಪ್ರಶಸ್ತಿಯ ಮೊತ್ತ ಅಷ್ಟು ಮಹತ್ವದ್ದಲ್ಲ ಎನ್ನುತ್ತಾರೆ ವಿಶ್ಲೇಷಕರು.

ಹರಾಜಿನಲ್ಲಿ ನೂರಾರು ಕೋಟಿ

ಪ್ರತಿ ಐಪಿಎಲ್ ಸರಣಿಯ ಆರಂಭಕ್ಕೂ ಮುನ್ನ ಎಲ್ಲಾ ತಂಡಗಳು ತಮಗೆ ಅಗತ್ಯವಿರುವ ಆಟಗಾರರನ್ನು ಖರೀದಿಸುತ್ತವೆ. ಆಟಗಾರರ ಖರೀದಿ ಪ್ರಕ್ರಿಯೆಯು ಹರಾಜಿನ ಮೂಲಕ ನಡೆಯುತ್ತದೆ. ಬಿಸಿಸಿಐ ಈ ಹರಾಜನ್ನು ಆಯೋಜಿಸುತ್ತವೆ. ಹರಾಜಿನಲ್ಲಿ ದೇಶಿ ಕ್ರಿಕೆಟ್ ಆಟಗಾರರು, ಭಾರತದ ಅಂತರರಾಷ್ಟ್ರೀಯ ಕ್ರಿಕೆಟ್ ಕಲಿಗಳು ಮತ್ತು ವಿಶ್ವದ ಬೇರೆ ದೇಶಗಳ ಕ್ರಿಕೆಟ್ ಆಟಗಾರರೂ ಇರುತ್ತಾರೆ.

ಐಪಿಎಲ್ ಆಟಗಾರರ ಹರಾಜು ಎನ್ನುವುದೇ ಒಂದು ದೊಡ್ಡ ಜಾತ್ರೆಯ ಹಾಗೆ. ಆಟಗಾರನೊಬ್ಬನನ್ನು ತಂಡವೊಂದು ಖರೀದಿಸಿದ ವಿದ್ಯಮಾನ ಹಲವು ದಿನಗಳವರೆಗೆ ಬಿಸಿಸುದ್ದಿಯಾಗಿರುತ್ತದೆ. ಅತಿಹೆಚ್ಚು ಮೊತ್ತಕ್ಕೆ ಹರಾಜಾದ ಆಟಗಾರರು ಇಡೀ ಸರಣಿಯಲ್ಲಿ ಆಕರ್ಷಣೆಯ ಕೇಂದ್ರವಾಗಿರುತ್ತಾರೆ.

ನಿರ್ದಿಷ್ಟ ಕಾಲಾವಧಿಯವರೆಗೆ ತಂಡಗಳು ಆಟಗಾರರನ್ನು ಖರೀದಿಸಿರುತ್ತವೆ. ಈ ಅವಧಿಯ ಮಧ್ಯೆ ನಡೆಯುವ ಹರಾಜಿನಲ್ಲಿ ತಂಡಗಳು ಕಡಿಮೆ ಹಣವನ್ನು ವೆಚ್ಚ ಮಾಡುತ್ತವೆ. ಆಟಗಾರರೊಂದಿಗೆ ಒಪ್ಪಂದ ಮುಗಿದ ನಂತರ ನಡೆಯುವ ಹರಾಜಿನಲ್ಲಿ ಮತ್ತೆ ಭಾರಿ ಮೊತ್ತವನ್ನು ವಿನಿಯೋಗಿಸುತ್ತವೆ. ಆದರೆ ಐಪಿಎಲ್ ಆರಂಭವಾದಾಗಿನಿಂದ ಈವರೆಗೆ ಈ ಎರಡೂ ವೆಚ್ಚಗಳಲ್ಲಿ ಭಾರಿ ಪ್ರಮಾಣದ ಏರಿಕೆಯಾಗಿದೆ.

ಐಪಿಎಲ್‌ನಿಂದ ಹೆಚ್ಚು ಹಣ ಗಳಿಸಿದ ಆಟಗಾರರು (2008–2021) (₹ ಕೋಟಿಗಳಲ್ಲಿ)



ಆಟಗಾರ	₹ ಕೋಟಿ
ಎಂ.ಎಸ್.ಧೋನಿ	152.8
ರೋಹಿತ್ ಶರ್ಮಾ	146.6
ವಿರಾಟ್ ಕೊಹ್ಲಿ	143.2
ಸುರೇಶ್ ರೈನಾ	110.7
ಎಬಿಡಿ ವಿಲಿಯರ್ಸ್	110

ಐಪಿಎಲ್ ತಂಡಗಳ ಬ್ರಾಂಡ್ ಮೌಲ್ಯ (₹ ಕೋಟಿಗಳಲ್ಲಿ)

ಮುಂಬೈ ಇಂಡಿಯನ್ಸ್	761
ಚೆನ್ನೈ ಸೂಪರ್ ಕಿಂಗ್ಸ್	611
ಕೋಲ್ಕತ್ತ ನೈಟ್ ರೈಡರ್ಸ್	543
ರಾಯಲ್ ಚಾಲೆಂಜರ್ಸ್ ಬೆಂಗಳೂರು	536
ಸನ್‌ರೈಸರ್ಸ್ ಹೈದರಾಬಾದ್	442
ಡೆಲ್ಲಿ ಕ್ಯಾಪಿಟಲ್ಸ್	370
ಕಿಂಗ್ಸ್ ಇಲೆವೆನ್ ಪಂಜಾಬ್	318
ರಾಯಸ್ಥಾನ್ ರಾಯಲ್ಸ್	249

ಹರಾಜಿಗೆ ತಂಡಗಳು ಮಾಡಿದ ವೆಚ್ಚ



ಪ್ರಾಯೋಜಕತ್ವ

ಪ್ರತಿ ಐಪಿಎಲ್ ಸರಣಿಯ ಟೈಟಲ್ ಪ್ರಾಯೋಜಕತ್ವದಿಂದಲೂ ಬಿಸಿಸಿಐಗೆ ನೂರಾರು ಕೋಟಿ ರೂಪಾಯಿ ಆದಾಯ ಬರುತ್ತದೆ. ಈ ಬಾರಿ ಟಾಟಾ ಕಂಪನಿಯು ಐಪಿಎಲ್ ಟೈಟಲ್‌ನ ಪ್ರಾಯೋಜಕತ್ವವನ್ನು ವಹಿಸಿಕೊಂಡಿದೆ. ಐಪಿಎಲ್‌ನ ಪ್ರಾಯೋಜಕತ್ವಗಳಲ್ಲಿ, ಟೈಟಲ್ ಪ್ರಾಯೋಜಕತ್ವವೇ ಅತ್ಯಂತ ದೊಡ್ಡ ಮೊತ್ತದ್ದು. ಆದರೆ ಇದರ ಜತೆಯಲ್ಲಿ ಒಟಿಟಿ ಸ್ಟ್ರೀಮಿಂಗ್ ಪ್ರಾಯೋಜಕತ್ವ, ಅಧಿಕೃತ ಪ್ರಾಯೋಜಕತ್ವ, ಅಂಪೈರ್ ಪ್ರಾಯೋಜಕತ್ವ ಎಲ್ಲವೂ ಸೇರಿ ಪ್ರತೀ ಸರಣಿಯಲ್ಲಿ ಪ್ರಾಯೋಜಕತ್ವದ ಆದಾಯವೇ ಸಾವಿರ ಕೋಟಿ ರೂಪಾಯಿಯನ್ನು ದಾಟುತ್ತದೆ.

ಆಧಾರ: ಐಪಿಎಲ್20.ಕಾಂ, ಬಿಸಿಸಿಐ ವಾರ್ಷಿಕ ವರದಿಗಳು, ಪಿಟಿಐ, ಡಫ್ ಅಂಡ್ ಫೆಲ್ಪ್ಸ್

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 44

ದಾನದಿಂದಾಗುವ ಫಲಗಳು

ಯಾಚಕನು ಕೇಳಿದಮೇಲೆ ದಾನಮಾಡಿದರೆ ಅರ್ಧಫಲ ಸಿಗುತ್ತೆ. ಸೇವಕನಿಗೆ ದಾನಮಾಡಿದರೆ ಕಾಲುಭಾಗದ ಫಲ ಲಭಿಸುತ್ತೆ ಅಂತ ಸೂತಮುನಿ ದಾನದ ಫಲಗಳ ವಿವರವನ್ನು ತಿಳಿಸುತ್ತಾನೆ. ಜಿತೇಂದ್ರಿಯನೂ, ಸದುಪದೇಶವನ್ನು ಮಾಡುವ ಶ್ರೇಷ್ಠ ವ್ಯಕ್ತಿಯನ್ನು ಯೋಗ್ಯವಾದ ಕಾಲದಲ್ಲಿ ಕರೆದು ಅವನು ಅಪೇಕ್ಷಿಸುವ ವಸ್ತುವನ್ನು ದಾನಮಾಡಿದರೆ ಸಂಪೂರ್ಣವಾದ ಫಲವು ಲಭಿಸುವುದು. ದೀನವಾದ ವೃತ್ತಿಯಿಂದ ದರಿದ್ರನಾದವನಿಗೆ ಧನವನ್ನು ಕೊಟ್ಟು, ಹತ್ತು ವರ್ಷ ಪರ್ಯಂತ ಜೀವನವನ್ನು ಕಲ್ಪಿಸಿದರೆ ಭೂಲೋಕದಲ್ಲಿ ಸುಖವಾದ ಭೋಗವು ಲಭಿಸುವುದು ಎನ್ನುತ್ತಾನೆ ಸೂತಮುನಿ.

ವೇದಾಧ್ಯಯಿಗೆ ಹತ್ತು ವರ್ಷ ಜೀವನವನ್ನು ಕಲ್ಪಿಸಿದರೆ ಭೋಗ ಲಭಿಸುತ್ತದೆ. ಗಾಯತ್ರೀಜಪವನ್ನು ಮಾಡುವವನಿಗೆ ದಾನಮಾಡಿದರೆ, ಸತ್ಯಲೋಕದಲ್ಲಿ ಭೋಗ ಸಿಗುತ್ತದೆ. ವಿಷ್ಣುಭಕ್ತನಾದವನಿಗೆ ದಾನಮಾಡಿದರೆ ವೈಕುಂಠಲೋಕವೂ, ಶಿವಭಕ್ತನಾದವನಿಗೆ ದಾನಮಾಡಿದರೆ ಕೈಲಾಸವೂ ದೊರೆಯುತ್ತೆ. ಎಲ್ಲಾ ಲೋಕಗಳಲ್ಲೂ ಭೋಗವನ್ನ ಅನುಭವಿಸಬೇಕಾದರೆ ಎಲ್ಲಾ ದೇವರ ಆರಾಧಕರಿಗೆ ದಾನಮಾಡಬೇಕು. ಭಾನುವಾರದಂದು ಹತ್ತು ಅಂಗಗಳೊಡನೆ ಅನ್ನವನ್ನು ದಾನಮಾಡಿದರೆ, ಮುಂದಿನ ಜನ್ಮದಲ್ಲಿ ಹತ್ತು ವರ್ಷಗಳವರೆಗೆ ಆರೋಗ್ಯ ಲಭಿಸುವುದು. ಈ ಅಂಗಗಳು – ಅತಿಥಿಗಳಿಗೆ ಗೌರವ ಬಹುಮಾನ ಕೊಡುವುದು. ಅಭ್ಯಂಜನ ಮಾಡಿಸುವುದು. ಪಾದಸೇವೆ ಮಾಡುವುದು. ವಾಸವನ್ನು ಕಲ್ಪಿಸುವುದು. ಗಂಧಾದಿಗಳಿಂದ ಅರ್ಚಿಸುವುದು. ತುಪ್ಪ-ಭಕ್ಷ್ಯಗಳೊಡನೆ ಷಡ್ರಸಮಯವಾದ ವ್ಯಂಜನವನ್ನು ಬಡಿಸಿ ಊಟ ಮಾಡಿಸುವುದು. ದಕ್ಷಿಣೆ, ತಾಂಬೂಲ, ನಮಸ್ಕಾರ, ಬೀಳ್ಕೊಟ್ಟು ಕಳುಹಿಸಿಕೊಡುವುದು.

ಸೋಮವಾರ ಮುಂತಾದ ವಾರಗಳಲ್ಲಿ ಅನ್ನದಾನ ಮಾಡಿದರೆ ಪ್ರತಿ ಜನ್ಮದಲ್ಲಿ ಇಚ್ಛಾಫಲವನ್ನು ಪಡೆವರು. ಏಳು ವಾರಗಳಲ್ಲಿಯೂ ಹತ್ತು ಜನ ಅತಿಥಿಗಳಿಗೆ ಹತ್ತು ಅಂಗಗಳೊಡನೆ ಅನ್ನದಾನವನ್ನು ಮಾಡಿದರೆ, ನೂರು ವರ್ಷಗಳವರೆಗೆ ಆರೋಗ್ಯಫಲ ಪಡೆಯುವರು. ಭಾನುವಾರದಂದು ನೂರು ಜನರಿಗೆ ಅನ್ನದಾನವನ್ನು ಮಾಡಿದರೆ ಶಿವಲೋಕದಲ್ಲಿ ಸಾವಿರ ವರ್ಷಗಳವರೆಗೆ ವಾಸವಾಗಿರುವ ಫಲ ದೊರೆಯುವುದು; ಗಾಯತ್ರೀಜಪದಿಂದ ಪರಿಶುದ್ಧರಾದ ಸಾವಿರ ಜನರಿಗೆ ಅನ್ನದಾನ ಮಾಡಿದರೆ ಸತ್ಯಲೋಕದಲ್ಲಿ ಆರೋಗ್ಯ ಮೊದಲಾದ ಫಲಗಳನ್ನು ಪಡೆಯಬಹುದು.

ವಿದ್ಯೆಯನ್ನಪೇಕ್ಷಿಸುವವರು ಬ್ರಹ್ಮಬುದ್ಧಿಯಿಂದ ಬಾಲಕರಿಗೆ ಅನ್ನವನ್ನೂ, ಪುತ್ರ ಮತ್ತು ಕಾಮವನ್ನಪೇಕ್ಷಿಸುವವರು ಯುವಕರಿಗೆ ವಿಷ್ಣುಬುದ್ಧಿಯಿಂದ ಅನ್ನವನ್ನೂ ದಾನಮಾಡಬೇಕು. ಜ್ಞಾನವನ್ನಪೇಕ್ಷಿಸುವವರು ರುದ್ರಬುದ್ಧಿಯಿಂದ ವೃದ್ಧರಿಗೆ ಅನ್ನದಾನ ಮಾಡಬೇಕು. ಸದ್ಬುದ್ಧಿಯನ್ನು ಅಪೇಕ್ಷಿಸುವವರು ಸರಸ್ವತೀಬುದ್ಧಿಯಿಂದ ಕನ್ಯೆಯರಿಗೆ ಅನ್ನದಾನ ಮಾಡಬೇಕು. ಭೋಗವನ್ನಪೇಕ್ಷಿಸುವವರು ಲಕ್ಷ್ಮೀ ಬುದ್ಧಿಯಿಂದ ತರುಣಿಯರಿಗೆ ಅನ್ನದಾನ ಮಾಡಬೇಕು. ಆತ್ಮಸ್ವರೂಪವನ್ನ ಅಪೇಕ್ಷಿಸುವವರು ಪಾರ್ವತೀಬುದ್ಧಿಯಿಂದ ವೃದ್ಧ ಸುಮಂಗಲಿಯರಿಗೆ ಅನ್ನದಾನ ಮಾಡಬೇಕು.

ಶಿಲಾವೃತ್ತಿ, ಉಪಾದಾನ ಅಂದರೆ, ನಿತ್ಯಯಾತ್ರೆ, ಗುರುದಕ್ಷಿಣೆ ಇವುಗಳಿಂದ ಸಂಪಾದಿಸಿದ ಧನವು ಪರಿಶುದ್ಧವಾದುದು. ಅದು ಸಂಪೂರ್ಣ ಫಲವನ್ನುಂಟುಮಾಡುವುದು. ದಾನವನ್ನು ತೆಗೆದುಕೊಂಡು ಸಂಪಾದಿಸಿದ ದ್ರವ್ಯವು ಮಧ್ಯಮವಾದುದು. ವ್ಯವಸಾಯದ ವ್ಯಾಪಾರದಿಂದ ಸಂಪಾದಿಸಿದ ಧನವು ಅಧಮವಾದುದು. ಕ್ಷತ್ರಿಯರು ಪರಾಕ್ರಮದಿಂದ, ವ್ಯಾಪಾರಿಯೂ ವ್ಯಾಪಾರದಿಂದ, ಶ್ರಮಿಕ ಕೂಲಿಯಿಂದ ಸಂಪಾದಿಸಿದ ಧನವೂ ಉತ್ತಮವಾದುದು.

ಹನ್ನೆರಡು ವಸ್ತುಗಳನ್ನು ಎಲ್ಲಾ ಹನ್ನೆರಡು ಮಾಸಗಳಲ್ಲಿ ದಾನ ಮಾಡಿದರೆ ಇಷ್ಟಾರ್ಥ ಸಿದ್ಧಿಯಾಗುವುದು. ಈ ಹನ್ನೆರಡು ದಾನಗಳನ್ನೂ ಒಟ್ಟಿಗೆ ಮಾಡಬಹುದು. ಆ ಹನ್ನೆರಡು ದಾನದ ವಸ್ತುಗಳೆಂದರೆ ಹಸು, ಭೂಮಿ, ಎಳ್ಳು, ಸುವರ್ಣ, ತುಪ್ಪ, ವಸ್ತ್ರ, ಧಾನ್ಯ, ಬೆಲ್ಲ, ಬೆಳ್ಳಿ, ಉಪ್ಪು, ಕುಂಬಳಕಾಯಿ, ಗೋದಾನ. ದಾನಮಾಡಿದ ಹಸುಗಳ ಹಾಲು, ಮೊಸರು, ತುಪ್ಪದಿಂದ ಕಾಯಿಕ, ವಾಚಿಕ, ಮಾನಸಿಕ ಪಾಪಗಳು ನಾಶವಾಗುವುವು. ಹಾಲು, ಮೊಸರು, ತುಪ್ಪಗಳು ದಾತೃವಿನ ಮನೆಯಲ್ಲಿ ಅಭಿವೃದ್ಧಿಗೊಳ್ಳುವುದು. ಭೂದಾನದಿಂದ ಇಹಪರಜನ್ಮಗಳಲ್ಲಿ ಪ್ರತಿಷ್ಠೆಯು ಲಭಿಸುವುದು. ತಿಲದಾನದಿಂದ ಬಲವು ಬರುವುದು. ಅಪಮೃತ್ಯುವು ನಾಶವಾಗುವುದು. ಸುವರ್ಣದಾನದಿಂದ ಜಾಠರಾಗ್ನಿಗೆ ವೃದ್ಧಿಯೂ, ವೀರ್ಯಸಾಮರ್ಥ್ಯವೂ ಹೆಚ್ಚುವುದು. ಆಜ್ಯದಾನದಿಂದ ಪುಷ್ಟಿಯೂ, ವಸ್ತ್ರದಾನದಿಂದ ಆಯುಷ್ಯವೂ ಹೆಚ್ಚುವುದು. ಧಾನ್ಯದಾನದಿಂದ ಅನ್ನ ಸಮೃದ್ಧಿಯಾಗುವುದು. ಬೆಲ್ಲವನ್ನು ದಾನಮಾಡಿದರೆ ಮಧುರವಾದ ಆಹಾರವು ಲಭಿಸುವುದು. ಬೆಳ್ಳಿಯ ದಾನದಿಂದ ತೇಜಸ್ಸು ಅಭಿವೃದ್ಧಿಯಾಗುವುದು. ಲವಣದಾನದಿಂದ ಷಡ್ರಸಗಳು ವೃದ್ಧಿಗೊಳ್ಳುವುವು ಅಂತ ಸೂತಮುನಿಯು ಹೇಳುವುದರೊಂದಿಗೆ ಹದಿನೈದನೇ ಅಧ್ಯಾಯ ಮುಕ್ತಾಯಗೊಳ್ಳುತ್ತೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ಯುವಕರು ಕೇಸರಿ ಶಾಲು ತೊಟ್ಟು, ಜೈ ಶ್ರೀರಾಂ ಎಂದು ಘೋಷಣೆ ಕೂಗುತ್ತಿದ್ದಾಗ, ‘ಅಲ್ಲಾಹು ಅಕ್ಬರ್’ ಎಂದು ಘೋಷಣೆ ಕೂಗಿದ್ದ ಬುರ್ಖಾಧಾರಿ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್ ಅವರದ್ದೆಂದು ಹೇಳಲಾಗುತ್ತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ‘ಮುಸ್ಕಾನ್ ಅವರು ಕಾಂಗ್ರೆಸ್‌ನ ರಾಹುಲ್ ಗಾಂಧಿ ಜತೆಗೆ ಇದ್ದಾರೆ. ಹಿಜಾಬ್ ವಿವಾದ ಮತ್ತು ಮುಸ್ಕಾನ್ ಅಲ್ಲಾಹು ಅಕ್ಬರ್ ಘೋಷಣೆ ಕೂಗಿದ್ದರ ಹಿಂದೆ ಕಾಂಗ್ರೆಸ್‌ನ ಸಂಚು ಇದೆ’ ಎಂದು ಹಲವರು ಪೋಸ್ಟ್ ಮಾಡಿದ್ದಾರೆ. ರಾಹುಲ್ ಜತೆಗೆ ಯುವತಿಯೊಬ್ಬರು ನಿಂತಿರುವ ಚಿತ್ರವನ್ನು ಹಂಚಿಕೊಳ್ಳಲಾಗಿದೆ.

‘ವೈರಲ್ ಆಗಿರುವ ಚಿತ್ರದೊಂದಿಗೆ ನೀಡಿರುವ ವಿವರ ಸಂಪೂರ್ಣ ತಪ್ಪು. ರಾಹುಲ್ ಗಾಂಧಿ ಅವರ ಜತೆ ನಿಂತಿರುವ ಯುವತಿ, ಜಾರ್ಖಂಡ್ ಕಾಂಗ್ರೆಸ್‌ನ ಬರ್ಕಾಗಾಂವ್ ಶಾಸಕಿ ಅಂಬಾ ಪ್ರಸಾದ್. ಆ ಚಿತ್ರವನ್ನು ಸ್ವತಃ ಅಂಬಾ ಪ್ರಸಾದ್ ಅವರು ಈಚೆಗಷ್ಟೇ ಹಂಚಿಕೊಂಡಿದ್ದರು. ಆ ಚಿತ್ರದಲ್ಲಿ ಅಂಬಾ ಪ್ರಸಾದ್ ಅವರ ಹಣೆಬೊಟ್ಟನ್ನು ಅಳಿಸಿ, ಚಿತ್ರವನ್ನು ತಿರುಚಲಾಗಿದೆ. ತಿರುಚಲಾದ ಚಿತ್ರವನ್ನು ಸುಳ್ಳು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗಿದೆ. ಬೀಬಿ ಮುಸ್ಕಾನ್ ಖಾನ್ ಅವರಿಗೂ, ಈ ಚಿತ್ರಕ್ಕೂ ಯಾವುದೇ ಸಂಬಂಧ ಇಲ್ಲ’ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ವಿಶ್ವವೃಕ್ಷದೊಳು ಒಂದು ಸ್ಥಾನ

ಎಲೆಗಳನು ಕಡ್ಡಿ, ಕಡ್ಡಿಯ ರೆಂಬೆಕೊಂಬೆಗಳು |
ತಳೆದು ಪೆರ್ಚಿಸುತಿಹವು ಮರದ ಬಾಳ್ಸಿರಿಯ ||
ಸ್ಥಲವೊಂದು ನಿನಗಿಹುದು ವಿಶ್ವವೃಕ್ಷದೊಳಂತು |
ಹಳಿಯದಿರು ನಿನ್ನಿರವ – ಮಂಕುತಿಮ್ಮ || 562 ||

ಪದ-ಅರ್ಥ: ಪೆರ್ಚಿಸುತಿಹವು = ಹೆಚ್ಚಿಸುತ್ತಿರುವವು, ಬಾಳ್ಸಿರಿಯ = ಬಾಳ ಸಿರಿಯ, ವಿಶ್ವವೃಕ್ಷದೊಳಂತು = ವಿಶ್ವವೃಕ್ಷದೊಳು + ಅಂತು, ನಿನ್ನಿರವ = ನಿನ್ನ + ಇರವ(ಬದುಕನ್ನು)

ವಾಚ್ಯಾರ್ಥ: ಎಲೆಗಳನ್ನು ಕಡ್ಡಿಗಳು, ಕಡ್ಡಿಯನ್ನು ರೆಂಬೆಕೊಂಬೆಗಳು ಹೀಗೆ ತುಂಬಿಕೊಂಡು ಮರದ ಸಿರಿಯನ್ನು ಹೆಚ್ಚಿಸುತ್ತವೆ. ಈ ವಿಶ್ವವೃಕ್ಷದೊಳು ನಿನಗೊಂದು ಸ್ಥಳವಿದೆ. ಆದ್ದರಿಂದ ನಿನ್ನ ಬದುಕನ್ನು ಹಳಿಯಬೇಡ.

ವಿವರಣೆ: ಆ ಹುಡುಗ ಹುಟ್ಟಿ ಬೆಳೆದದ್ದು ಮುಂಬೈನಲ್ಲಿರುವ, ಏಷ್ಯಾದ ಅತಿದೊಡ್ಡ ಕೊಳಗೇರಿಯಾದ ಧಾರಾವಿಯಲ್ಲಿ. ಅದೊಂದು ಅತಿಕ್ರೂರವಾದ, ಮನುಷ್ಯತ್ವವನ್ನು ಅತ್ಯಂತ ಕೆಳಮಟ್ಟಕ್ಕೆ ಒಯ್ಯುವ ಕೊಳಕಿನ ಕೂಪ. ಮಾನವೀಯತೆಗಿಂತ ಶಕ್ತಿಗೆ ಬೆಲೆ ಅಲ್ಲಿ. ಹುಡುಗನ ತಂದೆ ನಿತ್ಯದಂತೆ ಕುಡಿದು ಬಂದರು. ಮನೆ ಎಂದರೆ ಐದು ಅಡಿ ಉದ್ದ, ಐದು ಅಡಿ ಅಗಲದ ಗುಡಿಸಲು. ಅದರಲ್ಲಿ ಐದು ಜನ ಬದುಕಬೇಕು. ಮನೆಗೆ ಬಂದವರೇ ತಾಯಿಯನ್ನು ಹೊಲಸು ಭಾಷೆಯಲ್ಲಿ ಬೈಯುತ್ತ ಹೊಡೆಯತೊಡಗಿದರು. ತಾಯಿಯ ಸಂಕಟ, ಅಸಹಾಯಕತೆಯನ್ನು ಕಂಡ ಹುಡುಗ ಮನೆಬಿಟ್ಟು ಹೊರಗೋಡಿದ. ತನ್ನ ಬದುಕಿಗೆ ಯಾವ ಅರ್ಥವೂ ಇಲ್ಲವೆನಿಸಿತು. ಸಾಕುಜನ್ಮ ಎಂದು ಪಕ್ಕದಲ್ಲೇ ಇದ್ದ ರೇಲ್ವೆ ಹಳಿಗಳ ಮೇಲೆ ನಡೆದ. ಎದುರಿಗೆ ರೈಲು ಬರುವುದು ಕಂಡಿತು. ಆಯ್ತು ಮುಗಿದು ಹೋಗಲಿ ಈ ವ್ಯರ್ಥ ಜೀವನ ಎಂದು ನಾಲ್ಕು ಹೆಜ್ಜೆ ನಡೆದ. ಕಣ್ಣ ಮುಂದೆ ತಾಯಿಯ, ತಂಗಿಯ ಮುಖ ಮೂಡಿತು. ನಾನು ಸತ್ತರೆ ಅವರಿಗೇನು ಗತಿ ಎಂದು ಬದಿಗೆ ಹಾರಿ ಬದುಕಿದ. ಮನೆಯ ಹತ್ತಿರ ಬಂದಾಗ ಯಾವುದೋ ಗುಡಿಸಲಿನಿಂದ ಲತಾ ಮಂಗೇಶ್ಕರ ಅವರ ಮಧುರವಾದ ಹಾಡು ಬರುತ್ತಿತ್ತು. ಹೌದು. ಕೊಳಗೇರಿಯಲ್ಲಿ ಕೊಳಕೂ ಇದೆ, ಸಂಗೀತವೂ ಇದೆ. ನಾನೇಕೆ ಬರಿ ಕೊಳಕನ್ನೇ ನೋಡಲಿ ಎಂದು ತನಗಿದ್ದ ನಟನೆಯ ಕಲೆಯಲ್ಲೇ ಬಂಡವಾಳ ಮಾಡಿಕೊಂಡು ದುಡಿದ. ನಾಲ್ಕು ವರ್ಷಗಳಲ್ಲಿ ಜಾನಿ ಲೇವರ್ ಎಂಬ ಹಾಸ್ಯನಟನಾಗಿ ನಿಂತಿದ್ದ. ಈಗ ಆತ ಜನಪ್ರಿಯ ಶ್ರೀಮಂತ ನಟ. ಯಶಸ್ಸು ಕಾಲಡಿ ಕುಳಿತಿದೆ.

ಎಷ್ಟೋ ಬಾರಿ ತುಂಬ ಜನ ಹೇಳಿಕೊಳ್ಳುತ್ತಾರೆ, ನಮ್ಮ ಬದುಕಿಗೆ ಏನು ಅರ್ಥ? ಇಂಥ ಮಹಾನ್ ವಿಶ್ವದಲ್ಲಿ ನಾನೊಂದು ಧೂಳಿಕಣವೂ ಅಲ್ಲ. ಈ ತರಹದ ಕೀಳರಿಮೆ ಸರಿಯಲ್ಲ ಎನ್ನುತ್ತದೆ ಕಗ್ಗ. ಯಾಕೆಂದರೆ ವಿಶ್ವವೃಕ್ಷವೇನೋ ಅತ್ಯದ್ಭುತವಾದದ್ದು, ಸರ್ವವ್ಯಾಪಿಯಾಗಿರುವುದು. ಆದರೆ ಅದರಲ್ಲಿ ನನ್ನ ಸ್ಥಾನ ತುಂಬ ಅಲ್ಪವಾದದ್ದು ಎಂದು ಚಿಂತೆ ಮಾಡುವುದು ಬೇಡ.

ಈ ಮಹಾನ್ ವೃಕ್ಷದಲ್ಲಿ ಕೋಟ್ಯಾಂತರ ಎಲೆಗಳಿವೆ, ಎಲೆಗಳಿಗೆ ಕಡ್ಡಿಗಳು, ಕಡ್ಡಿಗಳಿಗೆ ರೆಂಬೆಕೊಂಬೆಗಳು, ಹೀಗೆ ಒಂದಕ್ಕೊಂದು ಜೋಡಿಕೊಂಡು ಮರವನ್ನು ಶ್ರೀಮಂತವನ್ನಾಗಿಸಿವೆ. ಅಂಥ ಬೃಹತ್ ವೃಕ್ಷದಲ್ಲಿ ನನಗೂ ಒಂದು ಸ್ಥಾನವಿದೆಯೆಂದು ಸಂತೋಷಪಡುವುದು ಮುಖ್ಯವಲ್ಲವೆ? ನಾನು ಈ ಮರಕ್ಕೆ ಹೊರಗಿನವನಲ್ಲ. ನಾನೂ ಅದರ ಒಂದು ಮುಖ್ಯ ಭಾಗ ಎನ್ನುವುದೇ ಹೆಮ್ಮೆಯ ವಿಷಯ. ನನ್ನಿಂದೇನಾಗುತ್ತದೆ ಎಂದುಕೊಂಡ ಜಾನಿ ಲೇವರ್ ಇಂದು ಮಹತ್ವದವರಾಗಿಲ್ಲವೆ? ಒಬ್ಬ ತತ್ವಜ್ಞಾನಿ ಹೇಳುತ್ತಾನೆ, ‘ನಾನೊಂದು ಕೇವಲ ಹುಲ್ಲುಕಡ್ಡಿ ಇರಬಹುದು. ಆದರೆ ನಾನಿರದಿದ್ದರೆ ಈ ಪ್ರಪಂಚ ಒಂದು ಹುಲ್ಲುಕಡ್ಡಿಯಷ್ಟು ಬಡವಾಗುತ್ತಿತ್ತು’. ಈ ವಿಶ್ವಜೀವಾಶ್ವತ್ಥದಲ್ಲಿ ಯಾವುದೂ ಚಿಕ್ಕದು ಮತ್ತು ವ್ಯರ್ಥವಲ್ಲ. ಪ್ರತಿಯೊಂದಕ್ಕೂ ಅದರದೇ ಅದ ಸ್ಥಳವಿದೆ, ಪ್ರಾಮುಖ್ಯತೆ ಇದೆ. ಅದು ನಮ್ಮಲ್ಲಿ ಅಭಿಮಾನವನ್ನು, ಗೌರವವನ್ನುಂಟುಮಾಡಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಫೆಬ್ರುವರಿ 14, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಕುಂಭ ಮಾಸದ 02 ನೇ ದಿನ ತಿಥಿ: (ಮಾಘ ಶುಕ್ಲ) ತ್ರಯೋದಶಿ ಗಂ. 20-29 ನಕ್ಷತ್ರ: ಪುನರ್ವಸು ಗಂ. 11-53 ಯೋಗ: ಆಯುಷ್ಮಾನ್ ಗಂ. 21-28, ಕರಣ: ಕೌಲವ ಗಂ. 07-39. ರಾಹುಕಾಲ: ಬೆಳಿಗ್ಗೆ 07:30 – 09:00 ಸೂರ್ಯೋದಯ : 06-57 ಸೂರ್ಯಾಸ್ತ : 06-32 ಮುಸ್ಲಿಂ ದಿನಾಂಕ : 12 ರಜಬ್ ದಿನ ವಿಶೇಷ : ಮರುಭೂಮಿ ಉತ್ಸವ-3 ದಿನಗಳು (ಜೈಸಲ್ಮೇರ್)
ಅದೃಷ್ಟ ಸಂಖ್ಯೆ: 9, 15

ಮೇಷ: ಸ್ನೇಹಿತರಿಂದ ಒಳ್ಳೆಯ ಫಲಿತಾಂಶ ಎದುರು ನೋಡಬಹುದು. ಸರ್ಕಾರಿ ವ್ಯವಹಾರಗಳಿಂದ ನೀವು ನಿರೀಕ್ಷೆಗೂ ಮೀರಿದ ಲಾಭ ಅನುಭವಿಸುತ್ತೀರಿ. ನಿಮ್ಮ ಸುತ್ತಲ ವಾತಾವರಣವು ಸಂತಸದಾಯಕವಾಗಿರುತ್ತದೆ.

ವೃಷಭ: ಪತ್ನಿಯ ಆರೋಗ್ಯ ಸುಧಾರಿಸುವುದು. ಉದ್ಯೋಗಾಕಾಂಕ್ಷಿಗಳಿಗೆ ನಿರಾಸೆ. ಆದರೆ ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿ. ಇಂದಿನ ಕೆಲಸ ಇಂದಿನ ದಿನವೇ ಮುಗಿಸುವುದನ್ನು ಕಾರ್ಯರೂಪಕ್ಕೆ ತಂದುಕೊಳ್ಳಿ.

ಮಿಥುನ: ನಿರಾಸಕ್ತಿಯಿಂದ ಯಾಂತ್ರಿಕವಾಗಿ ಕೆಲಸ ನಿರ್ವಹಿಸುವಂತಾಗಲಿದೆ. ಪ್ರಮುಖವಾದ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಲು ಈ ದಿನ ಸೂಕ್ತವಲ್ಲ. ದುರ್ಗಾಪರಮೇಶ್ವರಿಯನ್ನು ಆರಾಧಿಸಿ ಸತ್ಫಲ ದೊರಕುತ್ತದೆ.

ಕರ್ಕಾಟಕ: ಕೆಲಸದಲ್ಲಿ ಹೆಚ್ಚಿನ ಹೊಣೆಗಾರಿಕೆ ನಿಮ್ಮದಾಗಲಿದೆ. ಸ್ವ ಸಾಮರ್ಥ್ಯವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದಲ್ಲಿ, ಹುದ್ದೆಯನ್ನು ಭದ್ರಗೊಳಿಸಿಕೊಳ್ಳಬಹುದು ಅಥವಾ ಮೇಲಧಿಕಾರಿಗಳ ಗಮನಸೆಳೆಯಬಹುದು.

ಸಿಂಹ: ಕಚೇರಿಯಲ್ಲಿ ಸಹದ್ಯೋಗಿಗಳ ಸಲಹೆ, ಸಹಕಾರ ಪಡೆಯುವುದು ಅಗತ್ಯವಾಗುವುದು. ಈ ದಿನ ಸುಗಂಧ ದ್ರವ್ಯಗಳ ಉಪಯೋಗದಿಂದ ಅಲರ್ಜಿ ಸಂಭವಿಸಬಹುದು, ನಿಗಾದಿಂದ ಉಪಯೋಗಿಸಿ.

ಕನ್ಯಾ: ರಾಜಕೀಯ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ನಡೆಸುವಿರಿ. ಟ್ರಾವೆಲ್ ಏಜೆನ್ಸಿಯವರಿಗೆ ಈ ದಿನವು ಉತ್ತಮವಾಗಿ ಇರಲಿದೆ. ಪಾಲುದಾರಿಕೆ ವ್ಯವಹಾರಗಳು ಲಾಭ ತರಲಿದೆ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ತುಲಾ: ಶುಭಕಾರ್ಯ ನಡೆಸಿ ಕೊಡುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಚರ್ಮ ಸಂಬಂಧಿತ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಲಾಭ. ಮನೆ ಹುಡುಕುವ ಕೆಲಸದಲ್ಲಿ ಸಹೋದ್ಯೋಗಿ ನೆರವಿಗೆ ಬರುವರು.

ವೃಶ್ಚಿಕ: ಯೋಗ್ಯ ವಯಸ್ಕರಿಗೆ ಉತ್ತಮವಾದ ಅವಕಾಶಗಳಿಂದ ವೈವಾಹಿಕ ಭಾಗ್ಯ ಒದಗಿ ಬರಲಿದೆ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ ಕಂಡುಬರಲಿದೆ. ಪ್ರಯಾಣದಲ್ಲಿ ಆಪತ್ತು ಎದುರಾಗಬಹುದು, ಜಾಗ್ರತರಾಗಿರಿ.

ಧನು: ಹಲವು ವರ್ಷಗಳ ಹಿಂದೆಯೇ ಸಂಕಲ್ಪಿಸಿದ ಕೆಲಸ ಒಂದು ದೈವಾನುಗ್ರಹದಿಂದ ಆರಂಭವಾಯಿತೆಂದು ಸಂತಸ. ವೃತ್ತಿರಂಗದಲ್ಲಿ ಅನಿವಾರ್ಯವಾಗಿ ಮೋಸ ಮಾಡಬೇಕಾದ ಸಂದರ್ಭಗಳು ಎದುರಾಗುವುದು.

ಮಕರ: ತೆಂಗಿನಕಾಯಿ ವ್ಯಾಪಾರಿಗಳಿಗೆ ಹೆಚ್ಚು ಲಾಭ. ಧಾರ್ಮಿಕ ಗ್ರಂಥಗಳ, ಪುರಾಣಗಳ ಅಧ್ಯಯನ ಮಾಡುವ ಮನಸ್ಸಾಗುವುದು. ಶೀತ ಬಾಧೆಯನ್ನು ಹೋಗಲಾಡಿಸಿಕೊಳ್ಳುವ ವಿಚಾರವಾಗಿ ಆಯುರ್ವೇದದ ಮೊರೆ ಹೋಗಿ.

ಕುಂಭ: ನಿಮ್ಮ ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ದಿನವಿಡೀ ಚರ್ಚಿಸಿದರೂ ತೀರ್ಮಾನಕ್ಕೆ ಬರುವುದು ಕಷ್ಟಕರ ವಿಚಾರ. ದಿನಸಿ ವರ್ತಕರಿಗೆ ಇಂದು ಲಾಭದಾಯಕ ದಿನ..

ಮೀನ: ಕಾಲಮಿತಿಯೊಳಗೆ ಕೆಲಸವನ್ನು ಪೂರ್ಣಗೊಳಿಸಿ. ವೃತ್ತಿಯಲ್ಲಿ ಅಭಿವೃದ್ಧಿಯು ಸಮಾಧಾನವನ್ನು ನೀಡಲಿದೆ. ಮಹಿಳೆಯರಿಗೆ ಭಾವುಕರಾಗುವ ಸನ್ನಿವೇಶಗಳು ಎದುರಾಗಬಹುದು. ವಾಹನ ಚಾಲನೆಯಲ್ಲಿ ನಿಗವಿರಲಿ.

ಪದಬಂಧ 4869

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಣದ ನೆರವು (5)
3.ಮಾಸದ ಕೊನೆಗೆ ಒಂದುಗೂಡಿಸಿರುವುದು (3)
5.ಯಾವುದೇ ಅಪರಾಧವನ್ನು ಮಾಡದಿರುವವನು (5)
7.ವಿಷ್ಣುವಿನ ದಶಾವತಾರದಲ್ಲಿ ಮೂರನೆಯದು (3)
8.ನವ ಬಾಳಿದು (5)
10.ಬೆಂದಕ್ಕಿ ಕಾಳು (3)
11.ಈತ ಕಾಡನ್ನು ರಕ್ಷಿಸುವವನು (5)
14.ಕೌರವರ ಸೋದರ ಮಾವ (3)
15.ಯುದ್ಧದ ಕೇಸರಿಯಿದು (5

ಮೇಲಿಂದ ಕೆಳಕ್ಕೆ
1.ರಕ್ತ ಹರಿಯುವ ನಾಳ (3)
2.ಸರಸದ ಮಾತುಕತೆ (3)
4.ಏಳು ದಿನಗಳ ಕಾಲ ನಡೆಯುವ ಉತ್ಸವ (3)
6.ಸಾಕ್ಷರನ ಹತ್ತಿರ ಅಸುರ ಇದ್ದಾನಲ್ಲಾ! (3)
7.ವನದಲ್ಲಿ ಬೋಳಿಸುವಿಕೆ! (3)
8.ನಾಭಿ ಇಲ್ಲಿ ಕಾಣುತ್ತಿದೆ (3)
9.ವನದಲ್ಲಿ ತೂರಿಸಿದ ಮುಖ (3)
10.ಭೂಗೋಳದ ಮೇಲೆ ಕಲ್ಪಿಸಿದ ರೇಖೆ (3)
12.ಈತ ತಿಳಿವಳಿಕೆಯಿಲ್ಲದವನು (3)
13.ಬೈದಾಟಕ್ಕೊಂದು ಪರ್ಯಾಯ ಪದ(3)



4868ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ನಾಣ್ಣುಡಿ 4.ಹರಾಮ 5.ಸಮೀಕ್ಷಕ 6.ಕಡುದಾಹ 8.ಣಹ 10.ರವಿ 13.ವಾತಾಯನ 14.ಜಮಾಬಂದಿ 15.ಯಾಚಕ 16.ಮೈದಾನ

ಮೇಲಿಂದ ಕೆಳಕ್ಕೆ:
1.ಅಹಮಹಮಿಕೆ 2.ನಾಮಕರಣ 3.ಅಕ್ಷಮ್ಯ 5.ಸಹಕಾರ 7.ಐತಿಹಾಸಿಕತೆ 9.ಹಟವಾದಿ 11.ವಿಮಾನಯಾನ 12.ಗುಮಾನಿ

ಸುಡೊಕು 5255

3					8	2	7	
	5		4	9				3
		8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5254 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಮೊದಲ ಜಗದ್ಗುರು ಬಬಲೇಶ್ವರ ಬೃಹನ್ಮಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ಪೀಠಾರೋಹಣ

ಪಂಚಮಸಾಲಿ ಸಮಾಜದ ಮೂರನೇ ಪೀಠ ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಸಮಾಜ ಒಡೆಯುವ, ಬೆಸೆಯುವ ಆರೋಪ–ಪ್ರತ್ಯಾರೋಪಗಳ ನಡುವೆಯೇ ಜಮಖಂಡಿ ತಾಲ್ಲೂಕಿನ ಆಲಗೂರಿನ ಕೃಷ್ಣಾ ನದಿ ತೀರದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯದ ಮೂರನೇ ಪೀಠ ಭಾನುವಾರ ಅಸ್ತಿತ್ವಕ್ಕೆ ಬಂದಿತು.

ಪೀಠದ ಮೊದಲ ಜಗದ್ಗುರು ಆಗಿ ಬಬಲೇಶ್ವರದ ಬೃಹನ್ಮಠದ ಷ.ಬ್ರ. ಮಹಾದೇವ ಶಿವಾಚಾರ್ಯ ಸ್ವಾಮೀಜಿ ಪೀಠಾರೋಹಣ ಮಾಡಿದರು. ಈ ವೇಳೆ ಶ್ರೀಗಳಿಗೆ ಹರಿಹರದ ವೀರಶೈವ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಸ್ವಾಮೀಜಿ ರುದ್ರಾಕ್ಷಿ ಕಿರೀಟ ತೊಡಿಸಿದರು. ಇದಕ್ಕೆ ಸಮುದಾಯದ ಸಾವಿರಾರು ಭಕ್ತರು, ನಾಡಿನ ಹರಗುರು ಚರಮೂರ್ತಿಗಳು, ಗಣ್ಯರು ಸಾಕ್ಷಿಯಾದರು.

ಶ್ರೀಗಳಿಂದ ಪಟ್ಟಾಧಿಕಾರ ಸ್ವೀಕಾರ ಹಿನ್ನೆಲೆಯಲ್ಲಿ ನಸುಕಿನ ಬ್ರಾಹ್ಮಿ ಮುಹೂರ್ತದಲ್ಲಿ ಪಂಚಮಸಾಲಿ ಮಠಾಧೀಶರ ಒಕ್ಕೂಟದ ನೇತೃತ್ವದಲ್ಲಿ ಧಾರ್ಮಿಕ ವಿಧಿ-ವಿಧಾನಗಳು ಜರುಗಿದವು. ಮಹಾದೇವ ಶಿವಾಚಾರ್ಯ ಸ್ವಾಮೀಜಿಗೆ ರುದ್ರಾಭಿಷೇಕ ನಡೆಯಿತು. ಅರಿಸಿನ, ಗಂಧ ಲೇಪಿಸಿ ಹಾಲು, ಜೇನು, ತುಪ್ಪ, ಸಕ್ಕರೆ, ಪಂಚಾಮೃತ ಅಭಿಷೇಕ ಮಾಡಲಾಯಿತು. ಈ ವೇಳೆ ಒಕ್ಕೂಟದ ಸ್ವಾಮೀಜಿಗಳು ಪರಸ್ಪರ ಅರಿಸಿನ ಬಳಿದುಕೊಂಡರು. ನಂತರ ಮಂತ್ರ ಪಠಿಸಲಾಯಿತು. ಪೀಠಾರೋಹಣಕ್ಕೆ ಮುನ್ನ ಸಮೀಪದ ಚಿಕ್ಕಪಡಸಲಗಿ ಬ್ಯಾರೇಜ್‌ಗೆ ತೆರಳಿ ಡಾ.ಮಹಾದೇವ ಶಿವಾಚಾರ್ಯರು ಕೃಷ್ಣಾನದಿಗೆ ಆರತಿ ಮಾಡಿದರು.

ಹರಿಹರವೇ ಮೂಲ ಪೀಠ: 'ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಹರಿಹರ ಮಠವೇ ಮೂಲಪೀಠ. ಆಲಗೂರಿನ ಪೀಠ ಅದರ ಸಮಾನವಾಗಿ ಕೆಲಸ ಮಾಡಲಿದೆ' ಎಂದು ಸಂಘಟಕರು ಘೋಷಣೆ ಮಾಡಿದರು.

ಪೀಠಾರೋಹಣ ಸಮಾರಂಭಕ್ಕೆ ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಗೈರು ಹಾಜರಾಗಿದ್ದರು. ಸಮಾರಂಭಕ್ಕೆ ಬಂದಿದ್ದ ಕೂಡಲಸಂಗಮ ಪೀಠದ ಟ್ರಸ್ಟ್ ಕಮಿಟಿ ಅಧ್ಯಕ್ಷ ಪ್ರಭಣ್ಣ ಹುಣಶಿಕಟ್ಟಿ ಅವರನ್ನು ಸನ್ಮಾನಿಸಲಾಯಿತು.

'ಮೂರನೇ ಪೀಠ ಸ್ಥಾಪನೆ ಪಂಚಮಸಾಲಿ ಸಮಾಜವನ್ನು ಒಡೆಯುವುದಕ್ಕಲ್ಲ. ಬದಲಿಗೆ ಒಂದು ಮಾಡುವುದು ಆಗಿದೆ. ಸಮಾಜ ಒಡೆಯಲಾಗುತ್ತಿದೆ ಎಂದು ಹೇಳುವವರ ಮಾತು ಯಾರೂ ನಂಬಬೇಡಿ' ಎಂದು ಪ್ರಭಣ್ಣ ಮನವಿ ಮಾಡಿದರು.

ನಿರಾಣಿ ಸಿ.ಎಂ ಆಗಲಿದ್ದಾರೆ: 'ಬಸವರಾಜ ಬೊಮ್ಮಾಯಿ ಅವರ ಅಧಿಕಾರಾವಧಿ ಇನ್ನು 12 ತಿಂಗಳು ಇದೆ. ಮುಂದಿನ ಅವಧಿಗೆ ಮುರುಗೇಶ ನಿರಾಣಿ ಮುಖ್ಯಮಂತ್ರಿ ಆಗಲಿದ್ದಾರೆ. ನಿರಾಣಿ ಕೇಂದ್ರದಲ್ಲೂ ಅತ್ಯಂತ ಪ್ರಭಾವಿ ವ್ಯಕ್ತಿ' ಎಂದು ಕಲಬುರ್ಗಿಯ ಸುಲಫಲ ಮಠದ ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಸಮಾರಂಭದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ, ಹುನಗುಂದ ಶಾಸಕ ದೊಡ್ಡನಗೌಡ ಪಾಟೀಲ, ರಾಮದುರ್ಗದ ಶಾಸಕ ಮಹಾದೇವಪ್ಪ ಯಾದವಾಡ, ವಿಧಾನಪರಿಷತ್ ಸದಸ್ಯ ಹಣಮಂತ ನಿರಾಣಿ, ಕೆಆರ್‌ಐಡಿಎಲ್ ಅಧ್ಯಕ್ಷ ರುದ್ರೇಶ್, ಸ್ವಾಗತ ಸಮಿತಿ ಅಧ್ಯಕ್ಷ ಸಂಗಮೇಶ ನಿರಾಣಿ ಪಾಲ್ಗೊಂಡಿದ್ದರು.

ಜಮಖಂಡಿ ತಾಲ್ಲೂಕಿನ ಆಲಗೂರಿನಲ್ಲಿ ಭಾನುವಾರ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಮೂರನೇ ಪೀಠದ ಜಗದ್ಗುರು ಆಗಿ ಭಾನುವಾರ ಪೀಠಾರೋಹಣ ಮಾಡಿದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಹರಿಹರ ಪೀಠದ ವಚನಾನಂದ ಸ್ವಾಮೀಜಿ ರುದ್ರಾಕ್ಷಿ ಕಿರೀಟ ತೊಡಿಸಿ ಹೂ ಹಾಕಿದರು. ಈ ವೇಳೆ ಮಠದ ವಕ್ತಾರ ಸುರೇಶ ಬಿರಾದಾರ, ಕೂಡಲಸಂಗಮ ಪೀಠದ ಟ್ರಸ್ಟ್ ಸಮಿತಿ ಅಧ್ಯಕ್ಷ ಪ್ರಭಣ್ಣ ಹುಣಶಿಕಟ್ಟಿ, ಮನಗೂಳಿ ಮಠದ ಸಂಗನ ಬಸವಸ್ವಾಮೀಜಿ, ಸಚಿವ ಮುರುಗೇಶ ನಿರಾಣಿ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಜಯಪುರದ ಯೋಗೇಶ್ವರಿ ಮಾತಾಜಿ, ಸಮಾಜದ ಮುಖಂಡ ಬಸವರಾಜ ದಿಂಡೂರ, ಕುಂಚನೂರ ಮಠದ ಸಿದ್ಧಲಿಂಗ ದೇವರು, ಬಿ.ಸಿ.ಉಮಾಪತಿ ಚಿತ್ರದಲ್ಲಿದ್ದಾರೆ

ಮೂರನೇ ಪೀಠ ಯಾರ ವಿರೋಧಿಯೂ ಅಲ್ಲ, ಯಾರ ಪರವೂ ಅಲ್ಲ. ಅನ್ಯಾಯಕ್ಕೊಳಗಾದ ಜನರಿಗೆ ನ್ಯಾಯ ಒದಗಿಸಲು ಈ ಪೀಠ ಸ್ಥಾಪಿಸಲಾಗಿದೆ
ಮುರುಗೇಶ ನಿರಾಣಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ

ಕೂಡಲಸಂಗಮದ ಶ್ರೀಗಳು ಯಾರದ್ದೋ ಒತ್ತಡದಿಂದ ವಿರೋಧ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅವರೂ ನಮ್ಮೊಂದಿಗೆ ಸೇರಿ ಸಮಾಜದ ಸಂಘಟನೆ ಮಾಡಲಿದ್ದಾರೆ.
ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಪಂಚಮಸಾಲಿ ಸಮಾಜದ ಮೂರನೇ ಪೀಠದ ನೂತನ ಪೀಠಾಧಿಪತಿ

ಅಲ್ಲಿ ಉಂಬುವವನು ಸಂಗಯ್ಯ, ಇಲ್ಲಿ ಉಂಬುವವನು ಸಂಗಯ್ಯ ಎಂಬುವಂತೆ ನಮ್ಮ ಪೀಠದ ಭಕ್ತರು ವೀರಶೈವ ಹಾಗೂ ಲಿಂಗಾಯತ ಎರಡೂ ಸಂಪ್ರದಾಯಕ್ಕೆ ನಡೆದುಕೊಳ್ಳಲಿದ್ದಾರೆ
ವಚನಾನಂದ ಸ್ವಾಮೀಜಿ, ಜಗದ್ಗುರು, ಹರಿಹರ ಪೀಠ

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

ಗಣ್ಯರು, ಶ್ರೀಗಳು ಗೈರು..

ಸಮಾರಂಭಕ್ಕೆ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ ಗುರೂಜಿ ಬರಲಿದ್ದಾರೆ ಎಂದು ಸಂಘಟಕರು ಹೇಳಿದ್ದರು. ಅವರು ಬರಲಿಲ್ಲ. ಪಂಚಮಸಾಲಿ ಸಮಾಜದವರೇ ಆದ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ.ಪಾಟೀಲ, ತೇರದಾಳ ಶಾಸಕ ಸಿದ್ದು ಸವದಿ ಗೈರು ಹಾಜರಾಗಿದ್ದರು.

ಪೀಠಾರೋಹಣ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

ನಾವು ಪಂಚಮಸಾಲಿಗಳ ವಿರೋಧಿಗಳಲ್ಲ: ವಿಜಯೇಂದ್ರ

'ಯಡಿಯೂರಪ್ಪ ಕುಟುಂಬ ಪಂಚಮಸಾಲಿ ಸಮಾಜದ ವಿರೋಧಿ ಅಲ್ಲ. ನಮ್ಮ ತಂದೆ, ಯಡಿಯೂರಪ್ಪ ಅವರು ಸಿ.ಎಂ. ಆಗಿದ್ದಾಗಲೇ ಈ ಸಮಾಜಕ್ಕೆ ಪ್ರವರ್ಗ 3ಬಿ ಅಡಿ ಮೀಸಲಾತಿ ಕಲ್ಪಿಸಿದ್ದರು' ಎಂದು ಪುತ್ರ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಕೆಲವು ತಿಂಗಳ ಹಿಂದೆ ನನ್ನ ತಂದೆ ಹಾಗೂ ನನ್ನನ್ನು ಪಂಚಮಸಾಲಿ ಸಮಾಜದ ವಿರೋಧಿಗಳು ಎಂಬಂತೆ ಬಿಂಬಿಸುವ ಕೆಲಸ ಕೆಲವರು ವ್ಯವಸ್ಥಿತವಾಗಿ ಮಾಡಿದ್ದರು. ಪಂಚಮಸಾಲಿಗಳು ಸೇರಿದಂತೆ ಎಲ್ಲ ಸಮಾಜದವರನ್ನು ಒಗ್ಗೂಡಿಸುವ ಕೆಲಸವನ್ನು ಯಡಿಯೂರಪ್ಪ ಮಾಡಿದ್ದಾರೆ ಎಂದರು.

'ನಾಲಿಗೆ ರುಚಿ ಬಿಟ್ಟರೆ ಆರೋಗ್ಯಕ್ಕೆ ಲಾಭ, ವಾದ-ವಿವಾದಗಳನ್ನು ಬಿಟ್ಟರೆ ನಮ್ಮ ಸಂಬಂಧಕ್ಕೆ ಲಾಭ, ವ್ಯರ್ಥ ಚಿಂತನೆಗಳನ್ನು ಬಿಟ್ಟರೆ ಜೀವನಕ್ಕೆ ಲಾಭ' ಎಂದು ಮಾರ್ಮಿಕವಾಗಿ ವಿರೋಧಿಗಳಿಗೆ ಸಂದೇಶ ನೀಡಿದರು.

₹1 ಕೋಟಿ ದೇಣಿಗೆ ಘೋಷಣೆ

ಪಂಚಮಸಾಲಿ ಸಮಾಜದ ಮೂರನೇ ಪೀಠದ ಅಭಿವೃದ್ಧಿಗೆ ತಮ್ಮ ಕುಟುಂಬದಿಂದ ₹1 ಕೋಟಿ ದೇಣಿಗೆಯನ್ನು ಸಚಿವ ಮುರುಗೇಶ ನಿರಾಣಿ ಘೋಷಿಸಿದರು. ಅದರಲ್ಲಿ ₹50 ಲಕ್ಷ ಇಂದಿನ ಕಾರ್ಯಕ್ರಮಕ್ಕೆ ಖರ್ಚು ಮಾಡಲಾಗಿದೆ. ಉಳಿದ ₹50 ಲಕ್ಷ ಮಠದ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಲಾಗುವುದು. 10 ಎಕರೆ ಜಮೀನು ಕೊಡುವುದಾಗಿ ಹೇಳಿದರು. ಮದುವೆ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಮುರುಗೇಶ ನಿರಾಣಿ–ಕಮಲಾ ದಂಪತಿ ವೇದಿಕೆಯಲ್ಲಿ ಕೂರಿಸಿ ಬೆಳ್ಳಿ ಗದೆ ನೀಡಿ ಮಠಾಧೀಶರ ಒಕ್ಕೂಟದಿಂದ ಸನ್ಮಾನಿಸಲಾಯಿತು.

ಸುದ್ದಿ 2 ನಿಮಿಷ

ಹಿಜಾಬ್: ಹಿಂದಿನ ಪದ್ಧತಿ ಮುಂದುವರಿಯಲಿ-ಖಾದರ್

ಮೈಸೂರು: 'ಹಿಜಾಬ್ ವಿಚಾರದಲ್ಲಿ ನ್ಯಾಯಾಲಯ ಅಂತಿಮ ತೀರ್ಪು ನೀಡುವವರೆಗೆ ಹಿಂದಿನ ಪದ್ಧತಿಯೇ ಮುಂದುವರಿಯಲಿ' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್ ಭಾನುವಾರ ಹೇಳಿದರು.

'ವಿವಾದ ಸೃಷ್ಟಿಯಾಗಲು ಬಿಜೆಪಿಯೇ ಕಾರಣ. ಶಾಲಾ ಕಾಲೇಜುಗಳಿಗೆ ಒಂದು ವಾರ ರಜೆ ಘೋಷಿಸಿದ್ದೇ ಸರ್ಕಾರದ ವೈಫಲ್ಯ ಎತ್ತಿ ತೋರಿಸುತ್ತದೆ. ನ್ಯಾಯಾಲಯವೇ ಎಲ್ಲ ವಿಚಾರಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಧಾರ್ಮಿಕ ಮುಖಂಡರು, ಸರ್ವಪಕ್ಷದ ಸಭೆ ನಡೆಸಿ ಪರಿಹಾರ ಕಂಡುಕೊಳ್ಳಬೇಕು. ಸರ್ಕಾರ ನೇತೃತ್ವ ವಹಿಸಬೇಕು' ಸುದ್ದಿಗಾರರೊಂದಿಗೆ ಒತ್ತಾಯಿಸಿದರು.

ಶಾಸಕ ರಘುಪತಿ ಭಟ್ ಅವರಿಗೆ ಬೆದರಿಕೆ ಕರೆ ಬಗ್ಗೆ ಪ್ರತಿಕ್ರಿಯಿಸಿ, 'ಯಾರಿಗೂ ಬೆದರಿಕೆ ಹಾಕಬಾರದು. ಜನಪ್ರತಿನಿಧಿಗಳು ಕೂಡ ಸಮಸ್ಯೆಗಳನ್ನು ಪರಿಹರಿಸಬೇಕು. ಕೆಲವರು ಸಮಸ್ಯೆ ಸೃಷ್ಟಿಸಲೆಂದೇ ಇದ್ದಾರೆ' ಎಂದರು.

'ಸಮಾನತೆಗಾಗಿ ಸಮವಸ್ತ್ರ ನೀತಿ' ಎಂಬ ಸಚಿವ ಬಿ.ಸಿ.ನಾಗೇಶ್ ಹೇಳಿಕೆಗೆ, 'ಮಕ್ಕಳ ಶುಲ್ಕದಲ್ಲಿ ಏಕೆ ಸಮಾನತೆ ತರುತ್ತಿಲ್ಲ? ಶಾಲೆಗೆ ಒಂದೊಂದು ವಾಹನದಲ್ಲಿ ಬರುತ್ತಾರೆ. ಪುಸ್ತಕಗಳನ್ನು ಬ್ಯಾಗ್, ಪ್ಲಾಸ್ಟಿಕ್ ಕವರ್ ಸುತ್ತಿಕೊಂಡು ಬರುತ್ತಾರೆ. ಅಲ್ಲಿ ಸಮಾನತೆ ಇಲ್ಲ. ಹಿಜಾಬ್ ಧಾರಣೆ ಕಾನೂನು ಹಾಗೂ ಸಂವಿಧಾನ ವಿರೋಧಿಯಾಗಿದ್ದರೆ ಕ್ರಮ ಕೈಗೊಳ್ಳಲಿ' ಎಂದು ಸವಾಲು ಎಸೆದರು.

'ತಂದೆ ಮುಖ್ಯವೇ, ತಾಯಿ ಮುಖ್ಯವೇ': 'ಮೂರ್ಖರ ಪ್ರಶ್ನೆಗಳಿಗೆ ಉತ್ತರ ಸಿಗುತ್ತಾ? ತಂದೆ ಮುಖ್ಯವೇ, ತಾಯಿ ಮುಖ್ಯವೇ ಎಂಬುದಾಗಿ ಸಂಸದ ಪ್ರತಾಪಸಿಂಹ ಅವರಲ್ಲಿ ಕೇಳಿದರೆ ಉತ್ತರ ಸಿಗುತ್ತಾ' ಎಂದು ಯು.ಟಿ. ಖಾದರ್ ಪ್ರಶ್ನಿಸಿದರು.

ಹಿಜಾಬ್ ವಿವಾದದ ಸೃಷ್ಟಿಕರ್ತರ ವಿವರ ಶೀಘ್ರ ಬಯಲು: ಸಚಿವ

ಅರಸೀಕೆರೆ (ಹಾಸನ): 'ಹಿಜಾಬ್ ವಿವಾದದ ಸೃಷ್ಟಿಯ ಹಿಂದೆ ಯಾರಿದ್ದಾರೆ ಎಂಬ ಸತ್ಯ ಸದ್ಯದಲ್ಲೇ ಬಯಲಾಗಲಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸೋಮವಾರ ನಡೆಯಲಿರುವ ಮುಖ್ಯಮಂತ್ರಿ ನೇತೃತ್ವದ ಸಭೆ ಬಳಿಕ ಪದವಿ ಕಾಲೇಜು ಆರಂಭದ ಬಗ್ಗೆ ನಿರ್ಧರಿಸಲಾಗುವುದು' ಎಂದರು.

'ಹಿಜಾಬ್ ವಿವಾದ ಸೃಷ್ಟಿಯ ಕುರಿತು ಯಾರು, ಯಾವ ಟ್ವೀಟ್, ಮರು ಟ್ವೀಟ್ ಮಾಡಿದ್ದಾರೆ ಎಂಬ ಸತ್ಯ ಬಯಲಾಗಲಿದೆ. ಅನಗತ್ಯವಾಗಿ ಒಂದು ರಾಜಕೀಯ ಪಕ್ಷ ಈ ಸಮಸ್ಯೆ ಹುಟ್ಟು ಹಾಕಿದೆ' ಎಂದು ಹೇಳಿದರು.

'ಹೈಕೋರ್ಟ್‌ನ ಸೂಚನೆಯಂತೆ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಸಮವಸ್ತ್ರ ಧರಿಸಿ ಶಾಲಾ, ಕಾಲೇಜುಗಳಿಗೆ ಬರಬೇಕು. ಇದನ್ನು ಎಲ್ಲಾ ವಿದ್ಯಾರ್ಥಿಗಳು ಪಾಲಿಸುತ್ತಾರೆ ಎಂಬ ನಂಬಿಕೆ ಇದೆ' ಎಂದರು.

ಪ್ರೌಢಶಾಲೆ ಇಂದಿನಿಂದ ಪುನರಾರಂಭ

ಒಂದನೇ ಪುಟದಿಂದ

ಈ ಬಗ್ಗೆ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಹಿಜಾಬ್ ವಿವಾದದ ಹಿಂದೆ ಇರುವ ಸಂಸ್ಥೆಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿಗಳು ಹರಿದಾಡುತ್ತಿವೆ. ಪೊಲೀಸ್ ಅಧಿಕಾರಿಗಳು ಮಾಹಿತಿ ಕಲೆ ಹಾಕುತ್ತಿದ್ದಾರೆ. ಶಾಲಾ–ಕಾಲೇಜುಗಳನ್ನು ಮೊದಲಿದ್ದ ಸ್ಥಿತಿಗೆ ತರಬೇಕು. ಸೌಹಾರ್ದಯುತ ವಾತಾವರಣ ನಿರ್ಮಿಸಿ, ವಿದ್ಯಾರ್ಜನೆಗೆ ಮಹತ್ವ ನೀಡಬೇಕಿರುವುದು ಸದ್ಯದ ಆದ್ಯತೆ' ಎಂದರು.

'ಕೆಲವೇ ದಿನಗಳಲ್ಲಿ ಪಿಯುಸಿ ಪರೀಕ್ಷೆಗಳು ಆರಂಭವಾಗಲಿದೆ. ವಾರ್ಷಿಕ ಪರೀಕ್ಷೆಗೆ ಆದ್ಯತೆ ನೀಡಲಾಗುವುದು. ವಿವಾದದಲ್ಲಿ ಯಾವ ಸಂಘಟನೆಗಳು ತೊಡಗಿಕೊಂಡಿವೆ, ಯಾರ ಕೈವಾಡ ಇದೆ ಎನ್ನುವುದನ್ನು ತನಿಖಾ ಸಂಸ್ಥೆಗಳು ನೋಡಿಕೊಳ್ಳಲಿವೆ' ಎಂದರು.

ಯಾದಗಿರಿಯಲ್ಲಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ , 'ಹಿಜಾಬ್, ಕೇಸರಿ ಶಾಲು ವಿವಾದದ ಕಾರಣ ಗೃಹ ಮತ್ತು ಇತರ ಇಲಾಖೆಗಳಿಂದ ಸಲಹೆ ಪಡೆದು, ಪರಿಸ್ಥಿತಿ ಆಧರಿಸಿ ಕಾಲೇಜು ಆರಂಭಿಸಲಾಗುವುದು' ಎಂದು ಹೇಳಿದರು.

'ಹಿಜಾಬ್ ಕೇಸರಿ ಶಾಲು ವಿವಾದಕ್ಕೆ ತೆರೆ ಎಳೆಯಲು ಸರ್ಕಾರ ಈಗಾಗಲೇ ಸ್ಪಷ್ಟ ನಿರ್ಧಾರ ತೆಗೆದುಕೊಂಡಿದೆ. ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಹೀಗಾಗಿ ಯಾವುದೇ ಗೊಂದಲ ಹಾಗೂ ಸಮಸ್ಯೆ ಇಲ್ಲ' ಎಂದೂ ಅವರು ಹೇಳಿದರು.

'ಕಿತಾಬ್ ಮರೆತು ಮಕ್ಕಳ ಹೆರುವ ಯಂತ್ರವಾಗಬೇಡಿ'

ಮೈಸೂರು: 'ಹಿಜಾಬ್ ಬೇಕೆಂದು ಕಿತಾಬ್ (ಪುಸ್ತಕ) ಮರೆತು ಮಕ್ಕಳನ್ನು ಹೆರುವ ಯಂತ್ರವಾಗಿ ಉಳಿಯಬೇಡಿ. ಹಿಜಾಬ್ ಧರಿಸಬೇಕು ಎಂದು ಹಟ ಹಿಡಿಯುವವರಿಗೆ ಹಿಜಾಬ್ ಬೇಕೇ, ಕಿತಾಬ್ ಬೇಕೇ ಎಂದು ಪ್ರಶ್ನಿಸುವೆ' ಎಂದು ಸಂಸದ ಪ್ರತಾಪಸಿಂಹ ಹೇಳಿದರು.

ಪ್ರತಾಪ ಸಿಂಹ

'ವಿದ್ಯೆ ಕಲಿತು ಮುಖ್ಯವಾಹಿನಿಗೆ ಬಂದು ಸ್ವತಂತ್ರ ಜೀವನ ನಡೆಸಲಿ ಎಂಬುದೇ ನಮ್ಮ ಉದ್ದೇಶ. ಕಿತಾಬ್ ಹಿಂದೆ ಹೋದವರು ಕಲ್ಪನಾ ಚಾವ್ಲಾ, ಸುನಿತಾ ವಿಲಿಯಮ್ಸ್, ನಿರ್ಮಲಾ ಸೀತಾರಾಮನ್ ಆಗಿ ಹೆಸರು ಪಡೆದಿದ್ದಾರೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಹಿಜಾಬ್ ವಿವಾದದಲ್ಲಿ ಶಾಂತಿ ಕಾಪಾಡಿ ಎಂದು ಮನವಿ ಮಾಡಿದ್ದು ಸಾಕು. ಶಾಂತಿ ಕದಡುವವರ ವಿರುದ್ಧ ಸರ್ಕಾರ ಕ್ರಮಕೈಗೊಳ್ಳಲಿ. ಹಿಜಾಬ್ ವಿವಾದದ ಹಿಂದೆ ಕೆಎಫ್‌ಡಿ, ಪಿಎಫ್‌ಐ ಸಂಘಟನೆ ಕೈವಾಡವಿದ್ದು, ಅವುಗಳನ್ನು ನಿಷೇಧಿಸಲಿ' ಎಂದು ಆಗ್ರಹಿಸಿದರು.

ನಕಲಿ ಖಾತೆ ಮೂಲಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಪ್ರಚಾರ: ಬೀಬಿ ಮುಸ್ಕಾನ್ ಖಾನ್ ಬೇಸರ

'ಸಂಘಟನೆ ಜೊತೆ ಗುರುತಿಸಿಕೊಂಡಿಲ್ಲ, ಅವಶ್ಯವೂ ಇಲ್ಲ'

● ಎಂ.ಎನ್.ಯೋಗೇಶ್

ಪ್ರಜಾವಾಣಿ ಸಂದರ್ಶನ

ಮಂಡ್ಯ: 'ಜೈ ಶ್ರೀರಾಮ್' ಘೋಷಣೆಗೆ ಪ್ರತಿಯಾಗಿ 'ಅಲ್ಲಾಹು ಅಕ್ಬರ್' ಘೋಷಣೆ ಕೂಗಿದ್ದ ನಗರದ ಪಿಇಎಸ್ ಪದವಿ ಕಾಲೇಜು ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್ ಅವರಿಗೆ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತಿದೆ. ದೇಶದ ವಿವಿಧೆಡೆಯಿಂದ ಮುಖಂಡರು, ಪ್ರಮುಖರು ಕೊಂಡಾಡುತ್ತಿದ್ದು, ಮಂಡ್ಯಕ್ಕೆ ಬಂದು ಉಡುಗೊರೆ ನೀಡುತ್ತಿದ್ದಾರೆ. ಹಲವು ಸಂಘಟನೆಗಳು ಹಣ ನೀಡಿವೆ.

ದೇಶ–ವಿದೇಶಗಳ ಸುದ್ದಿವಾಹಿನಿಗಳ ವರದಿಗಾರರೂ ಬರುತ್ತಿದ್ದಾರೆ. 'ಅಲ್ಲಾಹು ಅಕ್ಬರ್' ಘೋಷಣೆ ಮೇಲಿನ ಚರ್ಚೆಗಳು ನಡೆಯುತ್ತಲೇ ಇವೆ. ಇಂತಹ ಸಂದರ್ಭದಲ್ಲಿ ಬೀಬಿ ಮುಸ್ಕಾನ್ ಖಾನ್ 'ಪ್ರಜಾವಾಣಿ' ಜೊತೆ ಮಾತನಾಡಿದ್ದಾರೆ.

● ಘಟನೆ ನಡೆದು ಆರು ದಿನಗಳಾದರೂ ನಿಮ್ಮ ಕುರಿತು ಚರ್ಚೆಗಳು ಮುಂದುವರಿದಿವೆ, ಈಗ ನಿಮ್ಮ ಮನಸ್ಥಿತಿ ಹೇಗಿದೆ?

ಘೋಷಣೆ ಕುರಿತಂತೆ ಪರ–ವಿರೋಧ ಚರ್ಚೆಗೆ ಬೇಸರವಿಲ್ಲ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಅಪಪ್ರಚಾರದಿಂದ ತುಂಬಾ ನೋವಾಗಿದೆ. ನಾನು ಫೇಸ್‌ಬುಕ್, ಟ್ವಿಟರ್ ಬಳಸುತ್ತಿಲ್ಲ. ಕೆಲವರು ನಕಲಿ ಖಾತೆ ತೆರೆದು ಸುಳ್ಳು ಹಬ್ಬಿಸುತ್ತಿದ್ದಾರೆ. ನನ್ನ ಭಾವಚಿತ್ರ ಎಡಿಟ್ ಮಾಡಿ ಕೆಟ್ಟದಾಗಿ ಬರೆಯುತ್ತಿದ್ದಾರೆ. ಕಾಲೇಜು, ಮನೆ ಬಿಟ್ಟರೆ ನನಗೆ ಬೇರೆ ಪ್ರಪಂಚವಿಲ್ಲ. ನಾನು ಚಳವಳಿಗಾರರ ಜೊತೆ ಸಂಪರ್ಕದಲ್ಲಿದ್ದೆ, ತರಬೇತಿ ಪಡೆದಿದ್ದೆ ಎಂದೆಲ್ಲಾ ಸುಳ್ಳು ಸುದ್ದಿ ಹರಡಿಸುತ್ತಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿದ್ದಾಳೆ, ನೇಣು ಹಾಕಿದ್ದಾರೆ ಎಂದೆಲ್ಲಾ ಬರೆದಿದ್ದಾರೆ. ಇದರ ವಿರುದ್ಧ ಪೊಲೀಸರಿಗೆ ದೂರು ನೀಡಲು ನಿರ್ಧರಿಸಿದ್ದೇನೆ.

ಬೀಬಿ ಮುಸ್ಕಾನ್ ಖಾನ್

● ಹಿಜಾಬ್–ಕೇಸರಿ ಶಾಲು ಕುರಿತು ನಡೆಯುತ್ತಿದ್ದ ಬೆಳವಣಿಗೆಗಳು ನಿಮಗೆ ಮೊದಲೇ ಗೊತ್ತಿತ್ತಾ?

ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ಉಡುಪಿಯ ಕಾಲೇಜೊಂದರಲ್ಲಿ ಪ್ರವೇಶ ನಿರಾಕರಿಸಿದ್ದಾರೆ ಎಂಬ ಸುದ್ದಿ ತಿಳಿದಿತ್ತು. ಇಂತಹ ಘಟನೆ ಮಂಡ್ಯದಲ್ಲಿ, ಅದೂ ನಮ್ಮ ಕಾಲೇಜಿನಲ್ಲಿ ನಡೆಯುತ್ತದೆ ಎಂದು ಎಣಿಸಿರಲಿಲ್ಲ. ನಾನು ಎಂದಿನಂತೆ ಹಿಜಾಬ್, ಬುರ್ಖಾ ಧರಿಸಿ ಕಾಲೇಜಿಗೆ ತೆರಳಿದ್ದೆ.

● ನಿಮ್ಮ ತಂದೆ ಮುಸ್ಲಿಂ ಸಂಘಟನೆಗಳ ಜೊತೆ ಗುರುತಿಸಿಕೊಂಡಿದ್ದಾರೆ ಎಂದು ಗೃಹ ಸಚಿವರೇ ಹೇಳಿದ್ದಾರಲ್ಲಾ?

ನನ್ನ ತಂದೆ, ಕುಟುಂಬ ಸದಸ್ಯರು ಯಾವುದೇ ಸಂಘಟನೆ ಜೊತೆ ಗುರುತಿಸಿಕೊಂಡಿಲ್ಲ. ರಾಜಕಾರಣದಲ್ಲಿ ಯಾರಿಗೂ ಆಸಕ್ತಿ ಇಲ್ಲ. ನಮ್ಮ ಕುಟುಂಬ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಟ್ಟಿದೆ. ಕೋವಿಡ್ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಜನರಿಗೆ ಸಹಾಯ ಮಾಡಿದ್ದೇವೆ. ನಮಗೆ ಕುಟುಂಬಕ್ಕೆ ಯಾವುದೇ ಸಂಘಟನೆಯ ಅವಶ್ಯವಿಲ್ಲ.

● ಮುಂದಿನ ನಿಮ್ಮ ಹಾದಿ?

ಕಾನೂನು ಪದವಿ ಅಧ್ಯಯನ ಮಾಡುವ ಉದ್ದೇಶವಿದೆ. ಮುಂದೆ ಮಹಿಳಾ ಹಕ್ಕುಗಳ ಪರವಾಗಿ ಹೋರಾಟ ಮುಂದುವರಿಸುತ್ತೇನೆ. ವಕೀಲೆಯಾಗಿ ಯಾವುದೇ ಧರ್ಮ–ಭೇದವಿಲ್ಲದೇ ಮಹಿಳೆಯರಿಗೆ ನ್ಯಾಯ ಕೊಡಿಸುವ ಕೆಲಸ ಮಾಡುತ್ತೇನೆ.

● ನಿಮ್ಮ ಘೋಷಣೆ ಉದ್ದೇಶವೇನಿತ್ತು?

ಜೈ ಶ್ರೀರಾಮ್ ಘೋಷಣೆ ತಪ್ಪು ಎಂದು ನಾನು ಹೇಳುವುದಿಲ್ಲ. ನಾನು ಯಾವ ಉದ್ದೇಶ, ಸಾಧನೆಗೂ 'ಅಲ್ಲಾಹು ಅಕ್ಬರ್' ಘೋಷಣೆ ಕೂಗಲಿಲ್ಲ. ಕೇಸರಿ ಶಾಲು ಹಾಕಿಕೊಂಡಿದ್ದ ವಿದ್ಯಾರ್ಥಿಗಳು ನನ್ನ ಕಡೆಗೆ ಧಾವಿಸಿ ಬರುವಾಗ ಗಾಬರಿಯಾಯಿತು. 'ಹಿಜಾಬ್, ಬುರ್ಖಾ ತೆಗಿ' ಎಂಬ ಕೂಗು ಕಿವಿಗೆ ಬಿತ್ತು. ನನ್ನ ಧಿರಿಸು ನನ್ನ ಸ್ವಾಭಿಮಾನ. ನನ್ನ ಸ್ವಯಂ ರಕ್ಷಣೆ, ಸ್ವಾಭಿಮಾನದ ರಕ್ಷಣೆ ಅನಿವಾರ್ಯವಾಗಿತ್ತು. ಆ ಸಂದರ್ಭದಲ್ಲಿ ದೇವರ ನುಡಿಗಳು ತಾನಾಗಿಯೇ ಬಂದವು.

ಉಡುಗೊರೆ ಹಣದಲ್ಲಿ ಆಂಬುಲೆನ್ಸ್ ಕೊಡುಗೆ

● ದೇಶ–ವಿದೇಶಗಳಿಂದ ಉಡುಗೊರೆ ರೂಪದಲ್ಲಿ ಹಣ ಹರಿದು ಬಂದಿರುವುದು ನಿಜವೇ?

ಬಂದವರೆಲ್ಲರೂ ಉಡುಗೊರೆ ಕೊಡುತ್ತಿದ್ದಾರೆ. ಆದರೆ, ಹಣದ ರೂಪದಲ್ಲಿ ಬಂದಿರುವುದು ₹ 6 ಲಕ್ಷ ಮಾತ್ರ. ಆ ಹಣವೂ ನಮಗೆ ಬೇಡ. ನನ್ನ ಹೆಸರಿನಲ್ಲಿ ಮಂಡ್ಯ ಜಿಲ್ಲಾಸ್ಪತ್ರೆಗೆ ಒಂದು ಆಂಬುಲೆನ್ಸ್ ಕೊಡುಗೆ ನೀಡಲು ನಮ್ಮ ತಂದೆ ನಿರ್ಧರಿಸಿದ್ದಾರೆ.

ಮಹಿಳೆಯರ ಸುರಕ್ಷೆಗಾಗಿ ಹಿಜಾಬ್ ಪದ್ಧತಿ: ಶಾಸಕ ಜಮೀರ್ ಅಹ್ಮದ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಗೋಷಾ ಮತ್ತು ಪರದಾ ಪದ್ಧತಿ ಅನುಸರಿಸದೇ ಇರುವುದರಿಂದಲೇ ಅತ್ಯಾಚಾರ ಪ್ರಕರಣಗಳು ಭಾರತದಲ್ಲಿ ಹೆಚ್ಚಾಗಿವೆ' ಎಂದು ಶಾಸಕ ಜಮೀರ್ ಅಹ್ಮದ್ ಖಾನ್ ಅಭಿಪ್ರಾಯಪಟ್ಟರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಹಿಜಾಬ್ ಎಂದರೆ ಪರದಾ ಪದ್ಧತಿಯಾಗಿದೆ. ಯುವತಿಯರ ಸೌಂದರ್ಯ ಮುಚ್ಚಿಡಲು ಲಗಾಯ್ತಿನಿಂದಲೂ ಇದನ್ನು ಬಳಸಲಾಗುತ್ತದೆ. ಇದು ನಮ್ಮ ಧರ್ಮದಲ್ಲಿ ಕಡ್ಡಾಯ ಅಂತೇನೂ ಇಲ್ಲ. ಆದರೆ ಮಹಿಳೆಯರ ಸುರಕ್ಷೆಗಾಗಿ ಇದನ್ನು ಬಳಸಲಾಗುತ್ತದೆ. ಹಿಜಾಬ್ ಧರಿಸುವುದು ಬೇಡ ಎಂದವರ ಮನೆಯಲ್ಲಿ ಹೆಣ್ಣುಮಕ್ಕಳು ಇದ್ದಾರೆಯೋ ಇಲ್ಲವೋ ಗೊತ್ತಿಲ್ಲ' ಎಂದರು.

ಜಮೀರ್ ಅಹ್ಮದ್ ಖಾನ್

ಹೈದರಾಬಾದ್ ಹೊರವಲಯದಲ್ಲಿರುವ ಚಿನ್ನಜೀಯರ್ ಸ್ವಾಮಿ ಆಶ್ರಮದಲ್ಲಿ ಪ್ರತಿಷ್ಠಾಪಿಸಲಾಗಿರುವ ಶ್ರೀ ರಾಮಾನುಜಾಚಾರ್ಯರ ಪ್ರತಿಮೆಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾನುವಾರ ನಮಿಸಿದರು —ಪಿಟಿಐ ಚಿತ್ರ

'ಸಂತರಿಂದ ಸಾಂಸ್ಕೃತಿಕ ಮೌಲ್ಯಗಳ ಆಧಾರಿತ ರಾಷ್ಟ್ರದ ಪರಿಕಲ್ಪನೆ'

ಹೈದರಾಬಾದ್ (ಪಿಟಿಐ): 'ರಾಮಾನುಜಾಚಾರ್ಯರಂತಹ ಸಂತರು–ದಾರ್ಶನಿಕರು ಸಾಂಸ್ಕೃತಿಕ ಮೌಲ್ಯಗಳನ್ನು ಆಧರಿಸಿದ ರಾಷ್ಟ್ರದ ಪರಿಕಲ್ಪನೆ ನೀಡಿದ್ದಾರೆ' ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾನುವಾರ ಹೇಳಿದರು.

11ನೇ ಶತಮಾನದ ಸಂತ, ಧಾರ್ಮಿಕ ಸುಧಾರಕ ರಾಮಾನುಜಾಚಾರ್ಯರ ಜನ್ಮ ಸಹಸ್ರಮಾನೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಮಾನುಜಾಚಾರ್ಯ ಹಾಗೂ ಅವರಂತಹ ತತ್ವಜ್ಞಾನಿಗಳು ದೇಶಕ್ಕಾಗಿ ಹೊಸ ಸಾಂಸ್ಕೃತಿಕ ಅಸ್ಮಿತೆಯನ್ನೇ ಸೃಷ್ಟಿಸಿ, ಅದನ್ನು ಪೋಷಿಸಿದರು. ಸಾಂಸ್ಕೃತಿಕ ಏಕತೆಗೆ ಶ್ರಮಿಸಿದರು' ಎಂದರು.

'ಭಾರತೀಯ ಸಂತರು ಪ್ರತಿಪಾದಿಸಿದ ಸಂಸ್ಕೃತಿ ಆಧಾರಿತ ರಾಷ್ಟ್ರವು ಪಾಶ್ಚಾತ್ಯ ಚಿಂತಕರ ಪರಿಕಲ್ಪನೆಗಿಂತ ಭಿನ್ನವಾದುದು. ನಮ್ಮ ಸಂವಿಧಾನದ ಮೂಲಭೂತ ತತ್ವಗಳಿಗೆ ದೇಶದ ಸಾಂಸ್ಕೃತಿಕ ಪರಂಪರೆಯೇ ತಳಹದಿ ಎಂಬ ಮಾತನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರೇ ಹೇಳಿದ್ದಾರೆ' ಎಂದರು.

'ಶತಮಾನಗಳಷ್ಟು ಹಿಂದೆಯೇ ಭಕ್ತಿ ಚಳವಳಿ– ಪರಂಪರೆ ದೇಶವನ್ನು ಒಗ್ಗೂಡಿಸಿದೆ. ಈ ಚಳವಳಿ ಭಕ್ತಿಪಂಥವಾಗಿ ವ್ಯಾಪಕವಾಗಿದ್ದನ್ನು ನಾವು ಕಾಣಬಹುದು. ಈ ಬಗ್ಗೆ ನಮ್ಮ ಪುರಾಣಗಳಲ್ಲಿಯೂ ಉಲ್ಲೇಖ ಸಿಗುತ್ತದೆ' ಎಂದು ವಿವರಿಸಿದರು.

'ರಾಮಾನುಜಾಚಾರ್ಯರ ಬೋಧನೆಗಳಿಂದ ಪ್ರೇರಿತಗೊಂಡ ಭಕ್ತಿಪಂಥದ ಪ್ರಭಾವವನ್ನು ತಮಿಳುನಾಡಿನ ಶ್ರೀರಂಗಂ, ಕಾಂಚಿಪುರಂ, ಉತ್ತರಪ್ರದೇಶದ ವಾರಾಣಸಿಯಂತಹ ಸ್ಥಳಗಳಲ್ಲಿ ನೋಡಬಹುದು. ಇಂಥ ಪಂಥಗಳ ಮೂಲಕ ಭಾರತೀಯರಲ್ಲಿನ ಭಾವನಾತ್ಮಕ ಏಕತೆ ಗಟ್ಟಿಗೊಂಡಿರುವುದನ್ನು ಸಹ ಗುರುತಿಸಬಹುದು' ಎಂದು ಕೋವಿಂದ್ ಹೇಳಿದರು.

'ರಾಮಾನುಜಾಚಾರ್ಯರು ಪ್ರತಿಪಾದಿಸಿದ ವಿಶಿಷ್ಟಾದ್ವೈತ ಸಿದ್ಧಾಂತ ಕೇವಲ ಭಾರತೀಯ ತತ್ವಜ್ಞಾನಕ್ಕೆ ನೀಡಿದ ಕೊಡುಗೆಯಲ್ಲ, ಈ ಸಿದ್ಧಾಂತ ನಮ್ಮ ದೈನಂದಿನ ಬದುಕಿಗೂ ಅನ್ವಯವಾಗುತ್ತದೆ' ಎಂದೂ ಅವರು ಹೇಳಿದರು.

'ಕೋರ್ಟ್ ಆದೇಶದವರೆಗೆ ಯಥಾಸ್ಥಿತಿ'

ಉಡುಪಿ ತಹಶೀಲ್ದಾರ್ ಕಚೇರಿಯಲ್ಲಿ ಸರ್ವಧರ್ಮ ಮುಖಂಡರ ಶಾಂತಿಸಭೆ

ಪ್ರಜಾವಾಣಿ ವಾರ್ತೆ

ಉಡುಪಿ: 'ಹಿಜಾಬ್ ಪ್ರಕರಣದಲ್ಲಿ ಕೋರ್ಟ್ ಆದೇಶ ಬರುವವರೆಗೆ ಜಿಲ್ಲೆಯಲ್ಲಿ ಸಮವಸ್ತ್ರ ಕಡ್ಡಾಯ ಇಲ್ಲದ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಿಂದಿನಂತೆಯೇ ತರಗತಿಗೆ ಹಾಜರಾಗಬೇಕು. ಸಮವಸ್ತ್ರ ಕಡ್ಡಾಯ ಇರುವ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸದೆ ಹಾಜರಾಗಬೇಕು ಎಂಬ ಒಮ್ಮತದ ನಿರ್ಣಯ ತೆಗೆದುಕೊಳ್ಳಲಾಗಿದೆ' ಎಂದು ಶಾಸಕ ಕೆ. ರಘುಪತಿ ಭಟ್ ತಿಳಿಸಿದರು.

ಭಾನುವಾರ ಇಲ್ಲಿ, ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಶಾಂತಿಸಭೆಯ ಬಳಿಕ ಮಾತನಾಡಿದ ಅವರು, 'ಹಿಜಾಬ್ ವಿವಾದಕ್ಕೆ ಸಂಬಂಧಿಸಿ ನ್ಯಾಯಾಲಯದ ಆದೇಶ ಪಾಲಿಸಲು ಎಲ್ಲ ಧರ್ಮದ ಮುಖಂಡರು ನಿರ್ಧರಿಸಿದ್ದೇವೆ. ಅಲ್ಲಿಯವರೆಗೂ ಹಿಂದಿನಿಂದಲೂ ಅನುಮತಿ ಇದ್ದ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಬಹುದು. ಹಿಜಾಬ್ ಇಲ್ಲದೆ, ಸಮವಸ್ತ್ರಕ್ಕೆ ಮಾತ್ರ ಅವಕಾಶ ನೀಡಿದ್ದ ಕಾಲೇಜುಗಳಲ್ಲಿ ಆ ವ್ಯವಸ್ಥೆಯನ್ನೇ ಮುಂದುವರಿಸಲು ಒಮ್ಮತದಿಂದ ತೀರ್ಮಾನಿಸಲಾಗಿದೆ' ಎಂದರು.

ಉಡುಪಿಯಲ್ಲಿ ಹಿಂದಿನಂತೆಯೇ ಸೌಹಾರ್ದ ವಾತಾವರಣ ಮೂಡಬೇಕು ಎಂಬ ನಿಟ್ಟಿನಲ್ಲಿ ಶಾಂತಿಸಭೆ ನಡೆಸಲಾಗಿದೆ. ಸರ್ವಧರ್ಮಗಳ ಹಾಗೂ ಸಂಘಟನೆಗಳ ಮುಖಂಡರು ಭಾಗವಹಿಸಿ ಬೆಂಬಲ ನೀಡಿದ್ದಾರೆ ಎಂದು ಹೇಳಿದರು.

ಎಸ್‌ಡಿಪಿಐ ಜಿಲ್ಲಾ ಘಟಕದ ಅಧ್ಯಕ್ಷ ಮಹಮ್ಮದ್ ನಜೀರ್ ಮಾತನಾಡಿ, 'ಬುದ್ಧಿವಂತರ ಜಿಲ್ಲೆಯಲ್ಲಿ ನಡೆಯಬಾರದ ಘಟನೆ ನಡೆದಿದೆ. ಹಿಜಾಬ್ ವಿವಾದ ಸೌಹಾರ್ದಯುತವಾಗಿ ಬಗೆಹರಿದು, ಜಿಲ್ಲೆಯಲ್ಲಿ ಶಾಂತಿ ಸೌಹಾರ್ದ ನೆಲೆಸಬೇಕು' ಎಂದು ಅಭಿಪ್ರಾಯಪಟ್ಟರು.

'ಹಿಜಾಬ್ ವಿಚಾರದಲ್ಲಿ ಕೆಲವು ವಿದ್ಯಾರ್ಥಿನಿಯರು ಸಾಂವಿಧಾನಿಕ ಹಕ್ಕುಗಳಿಗೆ ಒತ್ತಾಯಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಹಿಜಾಬ್ ಧರಿಸುವುದು, ಬಿಡುವುದು ವಿದ್ಯಾರ್ಥಿನಿಯರ ವೈಯಕ್ತಿಕ ಸ್ವಾತಂತ್ರ್ಯವಾಗಿದ್ದು, ಇದರಲ್ಲಿ ಎಸ್‌ಡಿಪಿಐ ಮಧ್ಯೆ ಪ್ರವೇಶಿಸುವುದಿಲ್ಲ' ಎಂದರು.

ಮತ್ತೊಂದೆಡೆ ಮುಂಜಾಗ್ರತಾ ಕ್ರಮವಾಗಿ ಫೆ.14ರಿಂದ 19ರವರೆಗೆ ಜಿಲ್ಲೆಯ ಎಲ್ಲ ಪ್ರೌಢಶಾಲೆಗಳ ಸುತ್ತಲಿನ 200 ಮೀಟರ್ ಪ್ರದೇಶದಲ್ಲಿ ಸೆಕ್ಷನ್ 144ರ ಅಡಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಎಂ.ಕೂರ್ಮಾರಾವ್ ಆದೇಶ ಹೊರಡಿಸಿದ್ದಾರೆ.

ಶಿವಮೊಗ್ಗದಲ್ಲೂ ನಿಷೇಧಾಜ್ಞೆ: ಹಿಜಾಬ್ ವಿವಾದದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ ಪ್ರೌಢಶಾಲೆಗಳ 200 ಮೀಟರ್ ವ್ಯಾಪ್ತಿಯಲ್ಲಿ ಸೋಮವಾರ ಬೆಳಿಗ್ಗೆ 6ರಿಂದ ಸೆಕ್ಷನ್ 144 ಅಡಿ ನಿಷೇಧಾಜ್ಞೆಯನ್ನು ವಿಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಸೆಲ್ವಮಣಿ ತಿಳಿಸಿದ್ದಾರೆ.

ವಿವಾದಕ್ಕೆ ಸರ್ಕಾರದಿಂದಲೇ ಪ್ರೋತ್ಸಾಹ: ಡಿಕೆಶಿ

ಗದಗ: 'ಹಿಜಾಬ್ ಮತ್ತು ಕೇಸರಿ ಶಾಲು ವಿವಾದ ನಿಯಂತ್ರಿಸಲು ಸರ್ಕಾರ ಸಂಪೂರ್ಣ ವಿಫಲವಾಗಿದೆ. ಅಲ್ಲದೇ, ವಿವಾದ ರಾಜ್ಯದೆಲ್ಲೆಡೆ ವ್ಯಾಪಿಸಲು ಸರ್ಕಾರವೇ ಪ್ರೋತ್ಸಾಹ ನೀಡಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾನುವಾರ ಆರೋಪಿಸಿದರು.

'ರಾಜ್ಯದಲ್ಲಿರುವಂತೆ ತಾಂತ್ರಿಕ, ಶೈಕ್ಷಣಿಕ, ಸಾಂಸ್ಕೃತಿಕ ಶ್ರೀಮಂತಿಕೆ ಬೇರೆಲ್ಲೂ ಇಲ್ಲ. ಇಂತಹ ವಾತಾವರಣದಲ್ಲಿ ಈಗ ವಿವಾದ ಹುಟ್ಟಿಕೊಂಡಿದೆ. ಬಿಜೆಪಿ ಸರ್ಕಾರದಿಂದಲೇ ರಾಜ್ಯಕ್ಕೆ ಕಪ್ಪುಚುಕ್ಕೆ ಬಿದ್ದಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಸಂವಿಧಾನ ಮತ್ತು ರಾಷ್ಟ್ರಧ್ವಜವೇ ಕಾಂಗ್ರೆಸ್ ಪಕ್ಷದ ಧರ್ಮ. ತಲೆಕೆಟ್ಟ ಕೆ.ಎಸ್.ಈಶ್ವರಪ್ಪ, ತ್ರಿವರ್ಣಧ್ವಜ ತೆಗೆದು ಕೆಂಪುಕೋಟೆ ಮೇಲೆ ಕೇಸರಿ ಧ್ವಜ ಹಾರಿಸುವ ಕಾಲ ನಿರ್ಮಾಣವಾಗಲಿದೆ ಎಂದಿದ್ದಾರೆ. 'ರಾಷ್ಟ್ರಧ್ವಜ ಸ್ತಂಭಕ್ಕೆ ಯಾರು ಕೇಸರಿಧ್ವಜ ಕಟ್ಟಿದರು? ಸಿ.ಎಂ ಮಾತು ಆಡುತ್ತಿಲ್ಲ. ಬಾಯಿಗೆ ಹೊಲಿಗೆ ಹಾಕಿಕೊಂಡಿದ್ದಾರೆಯೇ? ಈಶ್ವರಪ್ಪ ಮೇಲೆ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು.

'ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ಮೊದಲಿನಿಂದಲೂ ರಕ್ಷಣೆ ಮಾಡಿಕೊಂಡು ಬಂದಿದೆ. ಮುಂದೆಯೂ ರಕ್ಷಿಸುತ್ತದೆ' ಎಂದು ಅವರು ಪ್ರತಿಪಾದಿಸಿದರು.

'ಹಿಜಾಬ್– ಶಾಲು ವಿವಾದ ಕೊನೆಗಾಣಿಸಬೇಕಿದೆ'

ತುಮಕೂರು: ರಾಜ್ಯದಲ್ಲಿ ಸೌಹಾರ್ದತೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಹಿಜಾಬ್–ಕೇಸರು ಶಾಲು ವಿವಾದವನ್ನು ಇಲ್ಲಿಗೆ ಕೊನೆಗಾಣಿಸಬೇಕಿದೆ ಎಂದು ರಾಜ್ಯ ವಕ್ಫ್ ಬೋರ್ಡ್ ಅಧ್ಯಕ್ಷ ಮೌಲಾನಾ ಶಾಫಿ ಸಅದಿ ಹೇಳಿದರು.

ನಗರದ ಸಿದ್ಧಗಂಗಾ ಮಠಕ್ಕೆ ಭಾನುವಾರ ಭೇಟಿ ನೀಡಿ ಸಿದ್ಧಲಿಂಗ ಸ್ವಾಮೀಜಿ ಜೊತೆ ಚರ್ಚಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಸಂವಿಧಾನದಲ್ಲಿ ಅವರವರ ಧರ್ಮ ಪಾಲನೆಗೆ ಅವಕಾಶ ನೀಡಲಾಗಿದೆ. ನ್ಯಾಯಾಲಯದ ತೀರ್ಪು ಸೌಹಾರ್ದಯುತವಾಗಿ ಬರುವ ನಿರೀಕ್ಷೆ ಇದೆ. ನ್ಯಾಯಾಲಯದ ತೀರ್ಪಿಗೆ ಗೌರವ ನೀಡಬೇಕು ಎಂದರು. ಸೌಹಾರ್ದತೆ ಸಾರಿದ ರಾಷ್ಟ್ರದಲ್ಲಿ ಹಿಜಾಬ್–ಕೇಸರಿ ಶಾಲು ವಿವಾದದ ಮೂಲಕ ಸಾಮರಸ್ಯ ಕದಡುವ ಪ್ರಯತ್ನಕ್ಕೆ ಕೈ ಹಾಕಿರುವ ವ್ಯಕ್ತಿಗಳನ್ನು ಮಟ್ಟಹಾಕಬೇಕಿದೆ ಎಂದರು.

ಬಿಜೆಪಿ ಸಂಸದ ಪ್ರತಾಪ್ ಸಿಂಹ ಅವರು ಮಾತೆತ್ತಿದರೆ ಮುಸ್ಲಿಮರಿಗೆ ಪಾಕಿಸ್ತಾನಕ್ಕೆ ಹೋಗಿ ಎನ್ನುತ್ತಾರೆ. ಅವರೇ ಪಾಕಿಸ್ತಾನಕ್ಕೆ ಹೋಗಲಿ. ಅವರ ಹೇಳಿಕೆ ಯಾರಿಗಾದರೂ ಸಿಟ್ಟು ತರಿಸುತ್ತದೆ
ಕಿಮ್ಮನೆ ರತ್ನಾಕರ, ಕೆಪಿಸಿಸಿ ವಕ್ತಾರ

ಇಂದಿನಿಂದ ಅಧಿವೇಶನ

ಒಂದನೇ ಪುಟದಿಂದ

ಈ ವಿಷಯವನ್ನು ಮತ್ತೆ ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷಗಳ ಪ್ರಮುಖರು ತಯಾರಿ ನಡೆಸಿದ್ದಾರೆ. ಅನುದಾನ ಬಿಡುಗಡೆಯಲ್ಲಿನ ತಾರತಮ್ಯ ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸುವ ಸಾಧ್ಯತೆಯೂ ಇದೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತ ಚರ್ಚೆ ಮತ್ತು ಇತರ ಸಂದರ್ಭಗಳಲ್ಲಿ ಪ್ರತಿಪಕ್ಷಗಳಿಂದ ತೂರಿ ಬರಬಹುದಾದ ವಾಗ್ಬಾಣಗಳನ್ನು ಎದುರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅವರ ಸಂಪುಟದ ಸದಸ್ಯರೂ ಸಜ್ಜಾಗಿದ್ದಾರೆ. ಅಧಿಕಾರಿಗಳ ಸಭೆ ನಡೆಸಿರುವ ಮುಖ್ಯಮಂತ್ರಿ, ಪ್ರತಿಪಕ್ಷಗಳ ಸವಾಲುಗಳಿಗೆ ಅಂಕಿ-ಅಂಶಗಳ ಸಮೇತ ಜವಾಬು ನೀಡುವ ಹುಮ್ಮಸ್ಸಿನಲ್ಲಿದ್ದಾರೆ.

ಹಿಂದಿನ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಗೆ ವಿಧಾನ ಪರಿಷತ್‌ನ ಅಂಗೀಕಾರ ಪಡೆಯಲು ಸಾಧ್ಯವಾಗಿರಲಿಲ್ಲ. ಈ ಬಾರಿ ಪರಿಷತ್‌ನಲ್ಲೂ ಮಸೂದೆ ಮಂಡಿಸಿ, ಒಪ್ಪಿಗೆ ಪಡೆಯಲು ಪ್ರಯತ್ನಿಸುವ ಸಾಧ್ಯತೆ ಇದೆ. 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪರೀಕ್ಷೆಯ ಆಯ್ಕೆಪಟ್ಟಿಯನ್ನು ಊರ್ಜಿತಗೊಳಿಸುವ ಮಸೂದೆ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ ತಿದ್ದುಪಡಿ ಮಸೂದೆ ಸೇರಿದಂತೆ ಹಲವು ಮಸೂದೆಗಳು ಈ ಅಧಿವೇಶನದಲ್ಲಿ ಮಂಡನೆಯಾಗಲಿವೆ.

ಹಲವು ಬದಲಾವಣೆಗಳು

ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ನೇಮಕವಾಗಿದ್ದಾರೆ. ಉಪ ನಾಯಕರಾಗಿ ಕೆ.ಗೋವಿಂದರಾಜು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಕೆ.ಪ್ರಕಾಶ್ ರಾಠೋಡ್ ನೇಮಕಗೊಂಡಿದ್ದಾರೆ. ವಿಧಾನಸಭೆಯಲ್ಲಿ ವಿರೋಧ ಪಕ್ಷದ ಉಪ ನಾಯಕರಾಗಿ ಕಾಂಗ್ರೆಸ್‌ನ ಯು.ಟಿ. ಖಾದರ್ ನೇಮಕಗೊಂಡಿದ್ದಾರೆ. ಈ ಎಲ್ಲರೂ ಹೊಸ ಜವಾಬ್ದಾರಿಗಳೊಂದಿಗೆ ಅಧಿವೇಶನಕ್ಕೆ ಬರುತ್ತಿದ್ದಾರೆ. ಸಭಾನಾಯಕರಾಗಿ ಶ್ರೀನಿವಾಸಪೂಜಾರಿ ಮುಂದುವರೆಯಲಿದ್ದಾರೆ. ಆದರೆ, ಉಪಸಭಾಪತಿ ಮತ್ತು ಮುಖ್ಯ ಸಚೇತಕರ ಆಯ್ಕೆ ಆಗಬೇಕಾಗಿದೆ. ಉಪಸಭಾಪತಿ ಸ್ಥಾನಕ್ಕೆ ಆಯನೂರು ಮಂಜುನಾಥ, ಅರುಣ್ ಶಹಪೂರ ಮತ್ತು ವೈ.ಎ.ನಾರಾಯಣ ಸ್ವಾಮಿ ಅವರು ಹೆಸರು ಕೇಳಿ ಬಂದಿದೆ. ಸೋಮವಾರ ಆಯ್ಕೆ ಪ್ರಕಟವಾಗುವ ಸಾಧ್ಯತೆ ಇದೆ.

2021ರ ಡಿಸೆಂಬರ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿರುವವರ ಪೈಕಿ ಹಲವರು ಇದೇ ಮೊದಲ ಬಾರಿ ಮೇಲ್ಮನೆ ಪ್ರವೇಶಿಸಿದ್ದಾರೆ.

ಗೋವಾ, ಉತ್ತರಾಖಂಡ: ಇಂದು ಮತದಾನ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನ ಸೋಮವಾರ ನಡೆಯಲಿದೆ. ಈ ಹಂತದಲ್ಲಿ ಉತ್ತರ ಪ್ರದೇಶದ 55 ಕ್ಷೇತ್ರಗಳಲ್ಲಿ ಮತದಾನ ಆಗಲಿದೆ. ಉತ್ತರಾಖಂಡ ಮತ್ತು ಗೋವಾ ವಿಧಾನಸಭೆಗೂ ಸೋಮವಾರ ಮತದಾನ ಆಗಲಿದೆ. ಈ ಎರಡೂ ರಾಜ್ಯಗಳಲ್ಲಿ ಒಂದೇ ಹಂತದಲ್ಲಿ ಮತದಾನ ಪೂರ್ಣಗೊಳ್ಳಲಿದೆ. ಉತ್ತರಾಖಂಡದಲ್ಲಿ 70 ಕ್ಷೇತ್ರಗಳಿದ್ದರೆ, ಗೋವಾದಲ್ಲಿ 40 ಕ್ಷೇತ್ರಗಳಿವೆ. ಈ ಮೂರೂ ರಾಜ್ಯಗಳಲ್ಲಿ ಈಗ ಬಿಜೆಪಿ ನೇತೃತ್ವದ ಸರ್ಕಾರಗಳು ಇವೆ

ಉತ್ತರ ಪ್ರದೇಶದಲ್ಲಿ ಬಿಜೆಪಿ–ಎಸ್‌ಪಿ ನೇರ ಹಣಾಹಣಿ?

ಲಖನೌ (ಪಿಟಿಐ): ಉತ್ತರ ಪ್ರದೇಶದ ಪಶ್ಚಿಮ ಭಾಗ ಮತ್ತು ರೋಹಿಲ್‌ಖಂಡ ಭಾಗದ ವಿಧಾನಸಭಾ ಕ್ಷೇತ್ರಗಳಲ್ಲಿ ಸೋಮವಾರ ಮತದಾನ ಆಗಲಿದೆ. ಸಹರನ್‌ಪುರ, ಮೊರಾದಾಬಾದ್, ಸಂಭಾಲ್, ರಾಂಪುರ, ಅಮ್ರೋಹ, ಬದೌನ್, ಬರೇಲಿ ಮತ್ತು ಶಾಜಹಾನ್‌ಪುರ ಜಿಲ್ಲೆಗಳಲ್ಲಿ ಮತದಾನ ನಡೆಯಲಿದೆ. ಈ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಎಸ್‌ಪಿ ನಡುವೆ ನೇರ ಹಣಾಹಣಿ ಇದ್ದಂತೆ ಕಾಣಿಸುತ್ತಿದೆ.

ಒಟ್ಟು 586 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ. ಸಮಾಜವಾದಿ ಪಕ್ಷದ ಮುಖಂಡ ಮೊಹಮ್ಮದ್ ಆಜಂ ಖಾನ್ ಮತ್ತು ಹಣಕಾಸು ಸಚಿವ ಸುರೇಶ್ ಖನ್ನಾ ಕಣದಲ್ಲಿ ಇರುವ ಪ್ರಮುಖರು.

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಮುಸ್ಲಿಮರು ಮತ್ತು ದಲಿತರು ಗಣನೀಯ ಸಂಖ್ಯೆಯಲ್ಲಿ ಇದ್ದಾರೆ. ಕಳೆದ ಬಾರಿ ಈ ಪ್ರದೇಶದಲ್ಲಿ ಎಸ್‌ಪಿಯಿಂದ 10 ಮುಸ್ಲಿಮರು ಗೆದ್ದಿದ್ದರು. ಬರೇಲ್ವಿ ಮತ್ತು ದೇವಬಂದ್ ಪಂಗಡದ ಧಾರ್ಮಿಕ ನಾಯಕರ ಪ್ರಭಾವ ಇಲ್ಲಿ ವ್ಯಾಪಕವಾಗಿದೆ. ಇದು ಸಮಾಜವಾದಿ ಪಕ್ಷವು ಪ್ರಾಬಲ್ಯ ಹೊಂದಿರುವ ಪ್ರದೇಶ ಎಂದು ಪರಿಗಣಿತವಾಗಿದೆ.

ಯೋಗಿ ಆದಿತ್ಯನಾಥ ಸಂಪುಟದಲ್ಲಿ ಸಚಿವರಾಗಿದ್ದ ಧರಂ ಸಿಂಗ್ ಸೈನಿ ಅವರ ಭವಿಷ್ಯವೂ ಈ ಹಂತದಲ್ಲಿ ನಿರ್ಧಾರ ಆಗಲಿದೆ. ಚುನಾವಣೆ ಘೋಷಣೆಯಾದ ಬಳಿಕ ಅವರು ಬಿಜೆಪಿಗೆ ರಾಜೀನಾಮೆ ನೀಡಿ ಎಸ್‌ಪಿ ಸೇರಿದ್ದಾರೆ. ಖನ್ನಾ ಅವರು ಶಾಜಹಾನ್‌ಪುರ, ಸೈನಿ ಅವರು ನಾಕುಡ್, ಆಜಂ ಖಾನ್ ಅವರು ರಾಂಪುರದಿಂದ ಸ್ಪರ್ಧಿಸಿದ್ದಾರೆ. ಆಜಂ ಖಾನ್ ಅವರ ಮಗ ಅಬ್ದುಲ್ಲಾ ಆಜಂ ಅವರು ಸ್ವರ್ ಕ್ಷೇತ್ರದಿಂದ ಕಣದಲ್ಲಿದ್ದಾರೆ.

ಅಬ್ದುಲ್ಲಾ ವಿರುದ್ಧ ಹೈದರ್ ಅಲಿ ಖಾನ್ ಸ್ಪರ್ಧಿಸಿದ್ದಾರೆ. ಇವರು ರಾಂಪುರ ನವಾಬ್ ಕುಟುಂಬದವರು. ಬಿಜೆಪಿಯ ಮಿತ್ರ ಪಕ್ಷ ಅಪ್ನಾದಳ ಇವರಿಗೆ ಟಿಕೆಟ್ ನೀಡಿದೆ.

ಬಿಜೆಪಿ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಅವರೇ ಪ್ರಮುಖ ಪ್ರಚಾರಕರಾಗಿದ್ದರು. ಮುಖ್ಯ ಪ್ರತಿಸ್ಪರ್ಧಿ ಸಮಾಜವಾದಿ ಪಕ್ಷವನ್ನೇ ಗುರಿಯಾಗಿಸಿಕೊಂಡು ಅವರು ಪ್ರಚಾರ ನಡೆಸಿದ್ದಾರೆ. ರಾಜ್ಯವನ್ನು ಗಲಭೆಮುಕ್ತವಾಗಿ ಇರಿಸಬೇಕಿದ್ದರೆ ಬಿಜೆಪಿ ಅಧಿಕಾರದಲ್ಲಿ ಇರಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ. ತ್ರಿವಳಿ ತಲಾಖ್ ವಿರುದ್ಧದ ಕಾಯ್ದೆಯನ್ನೂ ಅವರು ಉಲ್ಲೇಖಿಸಿದ್ದಾರೆ.

ಸಮಾಜವಾದಿ ಪಕ್ಷದ ಪರವಾಗಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಪ್ರಮುಖ ಪ್ರಚಾರಕ. 'ವಿಶ್ವವಿದ್ಯಾಲಯ ಕಟ್ಟಿದ ಆಜಂ ಖಾನ್ ಅವರು ಜೈಲಲ್ಲಿ ಇದ್ದಾರೆ. ಆದರೆ, ರೈತರ ಮೇಲೆ ವಾಹನ ಹರಿಸಿ ಹತ್ಯೆ ಮಾಡಿದ ಆರೋಪ ಹೊತ್ತಿರುವ ವ್ಯಕ್ತಿ ಜಾಮೀನಿನಲ್ಲಿ ಹೊರಗೆ ಬಂದಿದ್ದಾರೆ' ಎಂದು ಅಖಿಲೇಶ್ ಹೇಳಿದ್ದಾರೆ.

ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರ ಚುನಾವಣಾ ಪ್ರಚಾರದಲ್ಲಿ ಈ ಬಾರಿ ಬಿರುಸು ಇರಲಿಲ್ಲ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಹಿಳೆಯರನ್ನು ಕೇಂದ್ರವಾಗಿರಿಸಿ ಪ್ರಚಾರ ನಡೆಸಿದ್ದಾರೆ.

ಗೋವಾ: ಬಹುಕೋನ ಸ್ಪರ್ಧೆ ಸಾಧ್ಯತೆ

ಪಣಜಿ (ಪಿಟಿಐ): ಗೋವಾದ 40 ವಿಧಾನಸಭಾ ಕ್ಷೇತ್ರಗಳಲ್ಲಿ 301 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಈವರೆಗೆ, ಇಲ್ಲಿ ಎರಡು ಪಕ್ಷಗಳ ನಡುವೆ ನೇರ ಸ್ಪರ್ಧೆ ಇತ್ತು. ಈ ಬಾರಿ ಆಮ್ ಆದ್ಮಿ ಪಕ್ಷ, ತೃಣಮೂಲ ಕಾಂಗ್ರೆಸ್ ಪಕ್ಷಗಳು ಸ್ಪರ್ಧೆಗೆ ಇಳಿದಿವೆ. ಹಾಗಾಗಿ, ಬಹುಕೋನ ಸ್ಪರ್ಧೆ ಕಾಣಿಸುತ್ತಿದೆ.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ (ಬಿಜೆಪಿ), ವಿರೋಧ ಪಕ್ಷದ ನಾಯಕ ದಿಗಂಬರ ಕಾಮತ್ (ಕಾಂಗ್ರೆಸ್), ಮಾಜಿ ಮುಖ್ಯಮಂತ್ರಿಗಳಾದ ಚರ್ಚಿಲ್ ಅಲೆಮಾವೊ (ಟಿಎಂಸಿ), ರವಿ ನಾಯಕ್ (ಬಿಜೆಪಿ) ಲಕ್ಷ್ಮಿಕಾಂತ್ ಪರ್ಸೇಕರ್ (ಪಕ್ಷೇತರ) ಕಣದಲ್ಲಿರುವ ಪ್ರಮುಖರು. ಗೋವಾ ಫಾರ್ವರ್ಡ್ ಪಾರ್ಟಿಯ (ಜಿಎಫ್‌ಪಿ) ವಿಜಯ್ ಸರ್ದೇಸಾಯಿ, ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷದ (ಎಂಜಿಪಿ) ಸುದಿನ್ ಧವಳೀಕರ್, ಮಾಜಿ ಮುಖ್ಯಮಂತ್ರಿ ಮನೋಹರ ಪರಿಕ್ಕರ್ ಮಗ ಉತ್ಪಲ್ ಪರಿಕ್ಕರ್ (ಪಕ್ಷೇತರ) ಅವರೂ ಸ್ಪರ್ಧೆಯಲ್ಲಿ ಇದ್ದಾರೆ.

ಕಾಂಗ್ರೆಸ್ ಮತ್ತು ಗೋವಾ ಫಾರ್ವರ್ಡ್ ಪಾರ್ಟಿ ಮೈತ್ರಿ ಮಾಡಿಕೊಂಡಿವೆ. ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಮತ್ತು ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷದ ನಡುವೆ ಮೈತ್ರಿ ಇದೆ. ಶಿವಸೇನಾ ಮತ್ತು ಎನ್‌ಸಿಪಿ ಜತೆಯಾಗಿ ಸ್ಪರ್ಧಿಸುತ್ತಿವೆ. ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷವು ಏಕಾಂಗಿಯಾಗಿಯೇ ಸ್ಪರ್ಧಿಸಿದೆ. ದಿ ರೆವಲ್ಯೂಷನರಿ ಗೋವನ್ಸ್, ಗೋವೆಂಚೊ ಸ್ವಾಭಿಮಾನ್ ಪಾರ್ಟಿ, ಜೈ ಮಹಾಭಾರತ್ ಪಾರ್ಟಿ, ಸಂಭಾಜಿ ಬ್ರಿಗೇಡ್ ಮುಂತಾದ ಪಕ್ಷಗಳೂ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ. 68 ಮಂದಿ ಪಕ್ಷೇತರರೂ ಸ್ಪರ್ಧೆಯಲ್ಲಿ ಇದ್ದಾರೆ. 2017ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶೇ 82.56ರಷ್ಟು ಮತದಾನ ಆಗಿತ್ತು. 17 ಕ್ಷೇತ್ರಗಳಲ್ಲಿ ಗೆದ್ದಿದ್ದ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ, 13 ಕ್ಷೇತ್ರಗಳಲ್ಲಿ ಗೆದ್ದ ಬಿಜೆಪಿ ಪ್ರಾದೇಶಿಕ ಪಕ್ಷಗಳು ಮತ್ತು ಪಕ್ಷೇತರರ ನೆರವಿನೊಂದಿಗೆ ಸರ್ಕಾರ ರಚಿಸಿತ್ತು. ಈ ಬಾರಿ, ಬಿಜೆಪಿ ಯಾವ ಪಕ್ಷದ ಜತೆಗೂ ಮೈತ್ರಿ ಮಾಡಿಕೊಂಡಿಲ್ಲ.

ಮತಗಟ್ಟೆ ಅಧಿಕಾರಿಗಳು ಚುನಾವಣಾ ಸಾಮಗ್ರಿಗಳ ಜತೆಗೆ ನಿಯೋಜನೆಯಾದ ಮತಗಟ್ಟೆಗಳಿಗೆ ತೆರಳುವ ಮುನ್ನ ಗೋವಾದ ಶ್ಯಾಮ್ ಪ್ರಸಾದ್ ಮುಖರ್ಜಿ ಸ್ಟೇಡಿಯಂನಲ್ಲಿ ಭಾನುವಾರ ಸೇರಿದ್ದರು –ಪಿಟಿಐ ಚಿತ್ರ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಯೋಗಿ–ಪಿಣರಾಯಿ: ವಾಗ್ವಾದದ ಮರ್ಮವೇನು?
ಭಾಗವಹಿಸುವವರು:
ರಾಮಕೃಷ್ಣ ಉಪಾಧ್ಯ, ಪತ್ರಕರ್ತರು, ರಾಜಕೀಯ ವಿಶ್ಲೇಷಕರು
ಎ. ನಾರಾಯಣ, ಪ್ರಾಧ್ಯಾಪಕರು, ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ
ಕೆ.ಎಸ್.ವಿಮಲಾ, ಉಪಾಧ್ಯಕ್ಷರು, ಜನವಾದಿ ಮಹಿಳಾ ಸಂಘಟನೆ
ಗೋ. ಮಧುಸೂದನ್, ಬಿಜೆಪಿ ಮುಖಂಡರು
ಸಂವಾದ ಮಧ್ಯಾಹ್ನ 12ರಿಂದ 1
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ಕನ್ನಡ ಧ್ವನಿ

ನುಡಿ–ಕಿಡಿ

ಬಿಜೆಪಿ ಇಡೀ ಸಮಾಜ ಮತ್ತು ದೇಶದ ಬಗ್ಗೆ ಮಾತ್ರ ಯೋಚಿಸುತ್ತದೆ. ಕೇವಲ ಒಂದು ಕುಟುಂಬದ ಹಿತಕ್ಕಾಗಿ ದುಡಿಯುವ ಪಕ್ಷವು, ಎಂದಿಗೂ ಬಿಜೆಪಿಯನ್ನು ಎದುರಿಸಲು ಸಾಧ್ಯವಿಲ್ಲ

ಸ್ಮೃತಿ ಇರಾನಿ, ಕೇಂದ್ರ ಸಚಿವೆ


ಬಿಜೆಪಿಯಿಂದ ಮತದಾರರು ದೂರ ಸರಿಯುತ್ತಿದ್ದಾರೆ. ಚುನಾವಣೆ ಎದುರಿಸುವಲ್ಲಿ ಬಿಜೆಪಿ, ವೈಚಾರಿಕವಾಗಿ ದಿವಾಳಿಯಾಗಿದೆ. ಈ ಕಾರಣದಿಂದಲೇ ಹಿಜಾಬ್ ವಿವಾದವನ್ನು ಮುನ್ನೆಲೆಗೆ ತರುತ್ತಿದೆ

ಸಲ್ಮಾನ್ ಖುರ್ಷಿದ್, ಕಾಂಗ್ರೆಸ್ ನಾಯಕ

ನಮ್ಮ ಸೇನೆಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದರೆ ನಾವು ಸುಮ್ಮನೆ ಇರಬೇಕೆ? ರಾಹುಲ್, ರಾಜೀವ್ ಗಾಂಧಿ ಅವರ ಪುತ್ರ ಎಂಬುದಕ್ಕೆ ನಾವು ಪುರಾವೆ ಕೇಳಿದ್ದೇವೆಯೇ ಎಂಬ ಹೇಳಿಕೆಗೆ ನಾನು ಈಗಲೂ ಬದ್ಧವಾಗಿದ್ದೇನೆ

ಹಿಮಂತ ಬಿಸ್ವಾ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

ಬಿಜೆಪಿ ಆಳ್ವಿಕೆಯಿರುವ ರಾಜ್ಯವೊಂದರ ಮುಖ್ಯಮಂತ್ರಿಯು ಅಸಭ್ಯ ಮಾತುಗಳು, ಮಹಿಳೆಯರ ಬಗ್ಗೆ ಬಿಜೆಪಿ ಹೇಗೆ ಯೋಚಿಸುತ್ತದೆ ಎಂಬುದಕ್ಕೆ ಸ್ಪಷ್ಟ ನಿದರ್ಶನ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಉತ್ತರಾಖಂಡ: ಪರ್ಯಾಯ ಆಳ್ವಿಕೆಗೆ ಎಎಪಿ ಸವಾಲು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ 632 ಅಭ್ಯರ್ಥಿಗಳಿದ್ದಾರೆ. ಅವರಲ್ಲಿ 152 ಮಂದಿ ಪಕ್ಷೇತರರು. ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ಇಲ್ಲಿ ಅಬ್ಬರದ ಪ್ರಚಾರ ನಡೆಸಿವೆ. ವರ್ಚುವಲ್ ಮತ್ತು ಭೌತಿಕ ರ‍್ಯಾಲಿಗಳು ನಡೆದಿವೆ. ಅಭ್ಯರ್ಥಿಗಳು ಮತ್ತು ಮುಖಂಡರು ಮನೆ ಮನೆ ಪ್ರಚಾರವನ್ನೂ ಮಾಡಿದ್ದಾರೆ.

2000ನೇ ಇಸವಿಯಲ್ಲಿ ಉತ್ತರಾಖಂಡ ರಾಜ್ಯ ರಚನೆಯಾದ ಬಳಿಕ ಇಲ್ಲಿ ನಡೆಯುತ್ತಿರುವ ಐದನೇ ಚುನಾವಣೆ ಇದು. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಸಚಿವರಾದ ಸತ್ಪಾಲ್ ಮಹಾರಾಜ್, ಸುಬೋಧ್ ಉನಿಯಾಲ್, ಅರವಿಂದ ಪಾಂಡೆ, ಧನ್ ಸಿಂಗ್ ರಾವತ್, ರೇಖಾ ಆರ್ಯ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮದನ್ ಕೌಶಿಕ್ ಕಣದಲ್ಲಿರುವ ಪ್ರಮುಖರು. ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್, ಮಾಜಿ ಸಚಿವರಾದ ಯಶಪಾಲ್ ಆರ್ಯ, ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಗಣೇಶ್ ಗೊಡಿಯಾಲ್, ವಿರೋಧ ಪಕ್ಷದ ನಾಯಕ ಪ್ರೀತಮ್ ಸಿಂಗ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಪ್ರಮುಖರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್, ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಮುಂತಾದವರು ಪ್ರಚಾರ ನಡೆಸಿದ್ದಾರೆ.

ಕಳೆದ ಚುನಾವಣೆಯಲ್ಲಿ ಬಿಜೆಪಿ 57 ಕ್ಷೇತ್ರಗಳಲ್ಲಿ ಗೆದ್ದಿತ್ತು. ಕಾಂಗ್ರೆಸ್‌ಗೆ 11 ಸ್ಥಾನಗಳು ಮಾತ್ರ ಸಿಕ್ಕಿದ್ದವು. ಎರಡು ಕ್ಷೇತ್ರಗಳಲ್ಲಿ ಪಕ್ಷೇತರರು ಗೆದ್ದಿದ್ದರು.

ಈವರೆಗೆ, ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ಇತ್ತು. ಕಾಂಗ್ರೆಸ್ ಮತ್ತು ಬಿಜೆಪಿ ಇಲ್ಲಿ ಪರ್ಯಾಯವಾಗಿ ಸರ್ಕಾರ ರಚನೆ ಮಾಡಿವೆ. ಈ ಬಾರಿ ಎಎಪಿ ಎಲ್ಲ 70 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರ್ಕಾರಗಳು ಜನರ ಆಶೋತ್ತರಗಳನ್ನು ಈಡೇರಿಸಿಲ್ಲ ಎಂಬುದು ಎಎಪಿಯ ಆರೋಪವಾಗಿದೆ.

ಪ್ರತಿ ಮನೆಗೆ 300 ಯೂನಿಟ್ ಉಚಿತ ವಿದ್ಯುತ್, 18 ವರ್ಷ ದಾಟಿದ ಎಲ್ಲ ಮಹಿಳೆಯರಿಗೆ ತಿಂಗಳಿಗೆ ₹1,000, ಪ್ರತಿ ಮನೆಗೆ ಒಂದು ಉದ್ಯೋಗ, ನಿರುದ್ಯೋಗಿಗಳಿಗೆ ತಿಂಗಳಿಗೆ ₹5,000 ಭತ್ಯೆ ನೀಡುವ ಭರವಸೆಯನ್ನು ಎಎಪಿ ನೀಡಿದೆ.

ಕಾಂಗ್ರೆಸ್ 'ಓಲೈಕೆ ರಾಜಕಾರಣ' ಮಾಡುತ್ತಿದೆ ಎಂಬುದು ಬಿಜೆಪಿಯ ಪ್ರಮುಖ ಆರೋಪವಾಗಿದೆ. ರಸ್ತೆ, ರೈಲು ಮತ್ತು ವಿಮಾನ ಸಂಪರ್ಕದ ಹಲವು ಯೋಜನೆಗಳು ಪ್ರಗತಿಯಲ್ಲಿವೆ. ಹಲವು ಯೋಜನಾ ಹಂತದಲ್ಲಿವೆ. ಇವುಗಳ ಈಡೇರಿಕೆಗೆ ತನಗೆ ಮತ ಹಾಕಿ ಎಂಬುದು ಬಿಜೆಪಿಯ ಕೋರಿಕೆಯಾಗಿದೆ.

ಗೋವಾ: ಅಪರಾಧ ಹಿನ್ನೆಲೆಯ ಶೇ 26ರಷ್ಟು ಅಭ್ಯರ್ಥಿಗಳು ಕಣದಲ್ಲಿ

ಗೋವಾ ವಿಧಾನಸಭಾ ಚುನಾವಣೆಯ ಕಣದಲ್ಲಿರುವ ಅಭ್ಯರ್ಥಿಗಳಲ್ಲಿ ಶೇ 26ರಷ್ಟು ಮಂದಿಯ ವಿರುದ್ಧ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ತನ್ನ ವರದಿಯಲ್ಲಿ ಹೇಳಿದೆ. ಅಭ್ಯರ್ಥಿಗಳು ತಮ್ಮ ನಾಮಪತ್ರದಲ್ಲಿ ನಮೂದಿಸಿರುವ ವಿವರಗಳನ್ನು ಪರಿಶೀಲಿಸಿ ಎಡಿಆರ್ ಈ ವರದಿಯನ್ನು ಸಿದ್ಧಪಡಿಸಿದೆ.

- **ಮಹಿಳೆಯರ ಮೇಲೆ ಎಸಗಿದ ದೌರ್ಜನ್ಯ, ವಂಚನೆ ಪ್ರಕರಣಗಳಲ್ಲಿ 12 ಅಭ್ಯರ್ಥಿಗಳು ಆರೋಪಿಗಳಾಗಿದ್ದಾರೆ. ಒಬ್ಬ ಅಭ್ಯರ್ಥಿಯ ವಿರುದ್ಧ ಅತ್ಯಾಚಾರದ ಆರೋಪವೂ ಇದೆ**
- **ಕಣದಲ್ಲಿರುವ 8 ಅಭ್ಯರ್ಥಿಗಳ ವಿರುದ್ಧ ಕೊಲೆಯತ್ನ ಪ್ರಕರಣಗಳು ದಾಖಲಾಗಿವೆ**
- **ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳಲ್ಲಿ 168 (ಶೇ 61ರಷ್ಟು) ಅಭ್ಯರ್ಥಿಗಳು ತಾವು ಕೋಟ್ಯಧಿಪತಿಗಳು ಎಂದು ಘೋಷಿಸಿಕೊಂಡಿದ್ದಾರೆ**

ಅಂಕಿ-ಅಂಶಗಳು

35% ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ ಅಪರಾಧ ಹಿನ್ನೆಲೆಯವರ ಪ್ರಮಾಣ

15% ಎನ್‌ಸಿಪಿ ಅಭ್ಯರ್ಥಿಗಳಲ್ಲಿ ಅಪರಾಧ ಹಿನ್ನೆಲೆಯವರ ಪ್ರಮಾಣ

23% ಎಂಜಿಪಿ ಅಭ್ಯರ್ಥಿಗಳಲ್ಲಿ ಅಪರಾಧ ಹಿನ್ನೆಲೆಯವರ ಪ್ರಮಾಣ

15% ಟಿಎಂಸಿ ಅಭ್ಯರ್ಥಿಗಳಲ್ಲಿ ಅಪರಾಧ ಹಿನ್ನೆಲೆಯವರ ಪ್ರಮಾಣ

18% ಬಿಜೆಪಿ ಅಭ್ಯರ್ಥಿಗಳಲ್ಲಿ ಅಪರಾಧ ಹಿನ್ನೆಲೆಯವರ ಪ್ರಮಾಣ

10% ಎಎಪಿ ಅಭ್ಯರ್ಥಿಗಳಲ್ಲಿ ಅಪರಾಧ ಹಿನ್ನೆಲೆಯವರ ಪ್ರಮಾಣ

ಆಧಾರ: ಎಡಿಆರ್

ಚುನಾವಣಾ ಕಣದಲ್ಲಿ..

- **'ಎಸ್‌ಪಿಗೆ ಅವಕಾಶ':** 'ಉತ್ತರ ಪ್ರದೇಶದಲ್ಲಿ ಅಖಿಲೇಶ್ ನೇತೃತ್ವದ ಸಮಾಜವಾದಿ ಪಕ್ಷವು ಬಿಜೆಪಿಯನ್ನು ಸೋಲಿನ ಅಂಚಿಗೆ ತಳ್ಳಲಿದೆ. ಗೋವಾದಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾದರೂ, ಸರ್ಕಾರ ರಚಿಸಲು ಕಾಂಗ್ರೆಸ್‌ಗೆ ಅವಕಾಶವಿದೆ' ಎಂದು ಶಿವಸೇನಾ ವಕ್ತಾರ ಸಂಜಯ್ ರಾವುತ್ ಅಭಿಪ್ರಾಯಪಟ್ಟಿದ್ದಾರೆ
- **'ಎಎಪಿ ಮುಂದಿದೆ':** ಫೆಬ್ರುವರಿ 20ರಂದು ನಡೆಯಲಿರುವ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಎರಡೂ ಕ್ಷೇತ್ರಗಳಲ್ಲಿ ಸೋಲು ಕಾಣಲಿದ್ದಾರೆ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ಮೂರು ಬಾರಿ ಸಮೀಕ್ಷೆ ನಡೆಸಿದಾಗಲೂ, ರಾಜ್ಯದಲ್ಲಿ ಎಲ್ಲ ಪಕ್ಷಗಳಿಗಿಂತ ಎಎಪಿ ಮುಂದಿರುವುದು ಕಂಡು ಬಂದಿದೆ ಎಂದು ಹೇಳಿದ್ದಾರೆ
- **'ಒಂದೇ ನಾಣ್ಯದ ಎರಡು ಮುಖಗಳು':** ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹಾಗೂ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಒಂದೇ ನಾಣ್ಯದ ಎರಡು ಮುಖಗಳು ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಹೇಳಿದ್ದಾರೆ. ಉತ್ತರ ಪ್ರದೇಶದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, ಒಂದೇ ನಾಣ್ಯದ ಎರಡು ಮುಖ ಎಂಬುದಕ್ಕೆ ವಿವರಣೆ ನೀಡಲಿಲ್ಲ
- **ಬಿಎಸ್‌ಪಿ ಪಟ್ಟಿ:** ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ಉತ್ತರ ಪ್ರದೇಶ ಚುನಾವಣೆಗೆ 47 ಅಭ್ಯರ್ಥಿಗಳ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಿದೆ. ಮಿರ್ಜಾಪುರ, ಗಾಜಿಪುರ, ಆಜಂಗಡ ಜಿಲ್ಲೆಯ ಅಭ್ಯರ್ಥಿಗಳನ್ನು ಪ್ರಕಟಿಸಲಾಗಿದೆ.
- **ಬಿಜೆಪಿ ಪರ ಪ್ರಚಾರ:** ಪ್ರಧಾನಿ ಅವರ ವಿಚಾರಗಳಿಂದ ಪ್ರೇರಿತರಾಗಿರುವ ಒಡಿಶಾದ ಮೋಹನ್ ಮಹಾಪಾತ್ರ (27) ಎಂಬ ಯುವಕ, ಮಹಾತ್ಮಾ ಗಾಂಧಿ ಅವರ ವೇಷತೊಟ್ಟು ಲಖನೌನಲ್ಲಿ ಬಿಜೆಪಿ ಪರವಾಗಿ ಪ್ರಚಾರ ನಡೆಸುತ್ತಿದ್ದಾರೆ. 'ಸಿಲ್ವರ್ ಗಾಂಧಿ'ಎಂದೇ ಖ್ಯಾತರಾಗಿರುವ ಮೋಹನ್, ಚುನಾವಣೆ ಮುಗಿಯುವವರೆಗೆ ಉತ್ತರ ಪ್ರದೇಶದಲ್ಲೇ ಇರುವುದಾಗಿ ಹೇಳಿದ್ದಾರೆ.

ಪಾದಯಾತ್ರೆಗೆ ಆಯೋಗದ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಚುನಾವಣೆ ನಡೆಯಲಿರುವ ಪಂಜಾಬ್, ಮಣಿಪುರ ಮತ್ತು ಉತ್ತರ ಪ್ರದೇಶದಲ್ಲಿ ಮತ ಯಾಚನೆಗಾಗಿ ಪಾದಯಾತ್ರೆ ನಡೆಸಲು ಅಭ್ಯರ್ಥಿಗಳಿಗೆ ಮತ್ತು ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗವು ಅನುವು ಮಾಡಿದೆ.

ಕೋವಿಡ್ –19 ಸಾಂಕ್ರಾಮಿಕ ಹರಡುವಿಕೆ ತಡೆಯಲು ಐದು ರಾಜ್ಯಗಳ ಚುನಾವಣಾ ಪ್ರಚಾರದ ಮೇಲೆ ಜ.8ರಂದು ಚುನಾವಣಾ ಆಯೋಗವು ಹಲವಾರು ನಿರ್ಬಂಧಗಳನ್ನು ಹೇರಿತ್ತು. ಆ ನಿರ್ಬಂಧಗಳನ್ನು ಆಯೋಗವು ಸಡಿಲಿಸಿದೆ.

ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಸ್‌ಡಿಎಂಎ) ನಿಗದಿಪಡಿಸಿದಷ್ಟು ಸಂಖ್ಯೆಯಲ್ಲಿ ಜನರು ಪಾದಯಾತ್ರೆಗಳಲ್ಲಿ ಭಾಗವಹಿಸಬಹುದು. ರಾತ್ರಿ 10 ಗಂಟೆಯಿಂದ ಬೆಳಗ್ಗೆ 6 ಗಂಟೆ ವರೆಗೆ ಚುನಾವಣಾ ಪ್ರಚಾರ ನಡೆಸುವಂತಿಲ್ಲ. ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಬೆಳಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆ ವರೆಗೆ ಚುನಾವಣಾ ಪ್ರಚಾರ ಕೈಗೊಳ್ಳಬಹುದು. ಪಕ್ಷಗಳು ಮತ್ತು ಅಭ್ಯರ್ಥಿಗಳು ಹೊರಾಂಗಣ ಪ್ರದೇಶದಲ್ಲಿ, ಆ ಸ್ಥಳದ ಸಾಮರ್ಥ್ಯದ ಶೇ 50ರಷ್ಟು ಜನರನ್ನು ಸೇರಿಸಿ ಅಥವಾ ಎಸ್‌ಡಿಎಂಎ ಸೂಚಿಸುವಷ್ಟು ಜನರನ್ನು ಸೇರಿಸಿ ಚುನಾವಣಾ ಸಭೆ ಮತ್ತು ರ‍್ಯಾಲಿಗಳನ್ನು ನಡೆಸಬಹುದು ಎಂದು ಆಯೋಗವು ಹೇಳಿದೆ.

ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ, ಚುನಾವಣಾ ಆಯುಕ್ತರಾದ ರಾಜೀವ್ ಕುಮಾರ್ ಮತ್ತು ಅನೂಪ್ ಚಂದ್ರ ಪಾಂಡೆ ಅವರು ಚುನಾವಣೆ ನಿಗದಿ ಆಗಿರುವ ರಾಜ್ಯಗಳ ಕೋವಿಡ್–19 ಪರಿಸ್ಥಿತಿಯನ್ನು ಪರಿಶೀಲಿಸಿದರು. ಬಳಿಕ ಈ ಆದೇಶ ನೀಡಿದ್ದಾರೆ.

ಎಎಪಿ, ಟಿಎಂಸಿಯಿಂದ ಪರಸ್ಪರರ ಮೇಲೆ ದೂರು

ಪಣಜಿ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಆಮ್ ಆದ್ಮಿ ಪಕ್ಷ (ಎಎಪಿ) ಭಾನುವಾರ ಪರಸ್ಪರರ ಮೇಲೆ ದೂರು ದಾಖಲಿಸಿವೆ.

ಮಾರುವೇಷದ ಕಾರ್ಯಾಚರಣೆಯ ವಿಡಿಯೊವೊಂದು ಸುದ್ದಿವಾಹಿನಿಯಲ್ಲಿ ಪ್ರಸಾರವಾಗಿತ್ತು. ಚುನಾವಣೆಯಲ್ಲಿ ಗೆದ್ದರೆ ಪಕ್ಷ ಬದಲಿಸುವಂತೆ ಟಿಎಂಸಿಯ ಒಬ್ಬರು ಅಭ್ಯರ್ಥಿ ಮತ್ತು ಕಾಂಗ್ರೆಸ್‌ನ ಮೂವರು ಅಭ್ಯರ್ಥಿಗಳು ಲಂಚ ತೆಗೆದುಕೊಳ್ಳುತ್ತಿರುವುದು ವಿಡಿಯೊದಲ್ಲಿ ಸೆರೆಯಾಗಿದೆ ಎನ್ನಲಾಗಿದೆ.

ಪಣಜಿ ಕ್ಷೇತ್ರದ ಎಎಪಿ ಅಭ್ಯರ್ಥಿ ವಾಲ್ಮೀಕಿ ನಾಯ್ಕ್ ಅವರು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗೆ ಈ ವಿಡಿಯೊಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದಾರೆ. ವಿಡಿಯೊ ಕುರಿತು ಅಧಿಕಾರಿಗಳಿಗೆ ಮಾಹಿತಿ ಸಿಗಲಿ ಎಂಬ ಕಾರಣದಿಂದ ದೂರು ನೀಡಿರುವುದಾಗಿ ವಾಲ್ಮೀಕಿ ನಾಯ್ಕ್ ಹೇಳಿದ್ದಾರೆ.

ಬೆನೌಲಿಮ್‌ನ ಟಿಎಂಸಿ ಅಭ್ಯರ್ಥಿ ಚರ್ಚಿಲ್ ಅಲೆಮಾವೊ ಕೂಡ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ದೂರು ನೀಡಿದ್ದಾರೆ. ಎಲ್ಲಾ ವೇದಿಕೆಗಳಿಂದಲೂ ಈ ವಿಡಿಯೊವನ್ನು ತೆಗೆಯುವಂತೆ ಅವರು ಕೇಳಿಕೊಂಡಿದ್ದಾರೆ.

ಟಿಎಂಸಿಯ ರಾಜ್ಯಸಭೆ ಸಂಸದೆ ಸುಶ್ಮಿತಾ ದೇವ್ ಅವರು ಕೂಡಾ ವಾಲ್ಮೀಕಿ ನಾಯ್ಕ್ ಮತ್ತು ದೆಹಲಿಯ ಎಎಪಿ ಶಾಸಕಿ ಆತಿಶಿ ವಿರುದ್ಧ ದೂರು ದಾಖಲಿಸಿದ್ದಾರೆ. ಆಕ್ಷೇಪಾರ್ಹ ವಿಡಿಯೊ ಇರುವ ಟ್ವೀಟ್ ಅನ್ನು ಎಎಪಿ ಅಳಿಸಬೇಕು ಮತ್ತು ಇದಕ್ಕೆ ಸಂಬಂಧಿಸಿದ ಪೋಸ್ಟ್‌ಗಳನ್ನು ಇತರ ಸಾಮಾಜಿಕ ಜಾಲತಾಣ ವೇದಿಕೆಗಳಿಂದ ತೆಗೆಯಬೇಕು ಎಂದು ಸುಶ್ಮಿತಾ ಅವರು ಆಗ್ರಹಿಸಿದ್ದಾರೆ.

ಪೊಲೀಸ್ ಇಲಾಖೆ ಆಧುನೀಕರಣ ಯೋಜನೆ ಅವಧಿ ವಿಸ್ತರಣೆಗೆ ಅಸ್ತು

ನವದೆಹಲಿ (ಪಿಟಿಐ): ಪೊಲೀಸ್ ಇಲಾಖೆಯ ಬೃಹತ್ ಆಧುನೀಕರಣ ಯೋಜನೆಯನ್ನು ಐದು ವರ್ಷದವರೆಗೂ, ಅಂದರೆ 2025–26ರವರೆಗೆ ಮುಂದುವರಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಯೋಜನೆಯ ಒಟ್ಟು ಅಂದಾಜು ವೆಚ್ಚ ₹ 20,275 ಕೋಟಿ.

ಯೋಜನೆಯಡಿ ಜಮ್ಮು ಮತ್ತು ಕಾಶ್ಮೀರ, ಮಾವೋವಾದಿ ಬಾಧಿತ ಈಶಾನ್ಯ ರಾಜ್ಯಗಳಲ್ಲಿ ಭದ್ರತೆಗೆ ಸಂಬಂಧಿತ ವೆಚ್ಚ, ಹೊಸ ಬೆಟಾಲಿಯನ್‌ಗಳ ಸ್ಥಾಪನೆ, ಅತ್ಯಾಧುನಿಕ ಪ್ರಯೋಗಾಲಯಗಳು, ತನಿಖಾ ವ್ಯವಸ್ಥೆಯನ್ನು ಸ್ಥಾಪಿಸುವ ಕಾರ್ಯಗಳು ಇದರಲ್ಲಿ ಸೇರಿವೆ.

ಗೃಹ ಸಚಿವ ಅಮಿತ್ ಶಾ ಅವರು ಆಂತರಿಕ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ ರಕ್ಷಣೆ, ಆಧುನಿಕ ತಂತ್ರಜ್ಞಾನ ಅಳವಡಿಕೆಗೆ ಸಂಬಂಧಿಸಿದ ಈ ಆಧುನೀಕರಣ ಯೋಜನೆಯನ್ನು 2021–22ರಿಂದ 2025–26ಕ್ಕೆ ವಿಸ್ತರಿಸಲು ಆಸಕ್ತಿ ವಹಿಸಿದ್ದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಈ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ಯೋಜನೆಗಳನ್ನು ಮುಂದುವರಿಸಲು ಅನುಮೋದನೆ ನೀಡಿತು ಎಂದು ಅಧಿಕೃತ ಹೇಳಿಕೆಯು ತಿಳಿಸಿದೆ.

ಪ್ರಯೋಗಾಲಯಗಳ ಸ್ಥಾಪನೆ, ಮಾದಕವಸ್ತು ನಿಯಂತ್ರಣ ಘಟಕ ಸ್ಥಾಪನೆಗೆ ರಾಜ್ಯಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ. ಜಮ್ಮು ಮತ್ತು ಕಾಶ್ಮೀರ, ಈಶಾನ್ಯ ರಾಜ್ಯಗಳಲ್ಲಿ ಭದ್ರತೆಗೆ ₹ 18,839 ಕೋಟಿ ಅನ್ನು ಅಂತಿಮಗೊಳಿಸಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕಟ್ನಿ ಜಿಲ್ಲೆಯ ಸ್ಲೀಮಾನಾಬಾದ್ ಬಳಿ ಘಟನೆ; 7 ಜನರ ರಕ್ಷಣೆ

ಮಧ್ಯಪ್ರದೇಶ: ನಿರ್ಮಾಣ ಹಂತದ ಸುರಂಗ ಕುಸಿತ

ಕಟ್ನಿ,ಮಧ್ಯಪ್ರದೇಶ(ಪಿಟಿಐ): 'ಮಧ್ಯ ಪ್ರದೇಶದ ಕಟ್ನಿ ಜಿಲ್ಲೆಯ ಸ್ಲೀಮಾನಾಬಾದ್‌ನಲ್ಲಿ ನಿರ್ಮಾಣ ಹಂತದ ಸುರಂಗ ಕುಸಿದು ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ 9 ಜನ ಕಾರ್ಮಿಕರ ಪೈಕಿ ಏಳು ಜನರನ್ನು ರಕ್ಷಿಸಲಾಗಿದೆ' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಇನ್ನಿಬ್ಬರು ಅವಶೇಷಗಳಡಿ ಸಿಲುಕಿದ್ದು, ರಕ್ಷಣಾ ಕಾರ್ಯ ಮುಂದುವರಿದಿದೆ' ಎಂದು ಮಧ್ಯ ಪ್ರದೇಶದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಗೃಹ ಇಲಾಖೆ) ರಾಜೇಶ್ ರಾಜೊರ ತಿಳಿಸಿದ್ದಾರೆ.

'ಬಾರ್ಗಿ ಕಾಲುವೆ ಯೋಜನೆಯಡಿ ನಿರ್ಮಿಸಲಾಗುತ್ತಿರುವ ಸುರಂಗ ಶನಿವಾರ ರಾತ್ರಿ ಕುಸಿದಿತ್ತು. ಅವಶೇಷಗಳಡಿ ಸಿಲುಕಿರುವ ಇಬ್ಬರು ಕಾರ್ಮಿಕರ ರಕ್ಷಣೆಗೆ ರಾಜ್ಯ ವಿಪತ್ತು ತುರ್ತು ಸ್ಪಂದನಾ ಪಡೆ (ಎಸ್‌ಡಿಇಆರ್‌ಎಫ್) ತಂಡ ಮತ್ತು ಇತರ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ರಕ್ಷಿಸಲಾದವರ ಪೈಕಿ ಆರು ಜನರನ್ನು ಕಟ್ನಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಅವಶೇಷಗಳಡಿ ಸಿಲುಕಿರುವ ಕಾರ್ಮಿಕರು ರಕ್ಷಣಾ ತಂಡದ ಸಿಬ್ಬಂದಿ ಕರೆಗಳಿಗೆ ಪ್ರತಿಕ್ರಿಯಿಸುತ್ತಿದ್ದಾರೆ' ಎಂದು ಸ್ಲೀಮಾನಾಬಾದ್ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಸಂಘಮಿತ್ರ ಗೌತಮ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಕಟ್ನಿ ಜಿಲ್ಲಾಧಿಕಾರಿ ಹಾಗೂ ಎಸ್‌ಪಿ ಜತೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

ಮಧ್ಯಪ್ರದೇಶದ ಕಟ್ನಿ ಜಿಲ್ಲೆಯ ಸ್ಲೀಮಾನಾಬಾದ್ ಬಳಿ ನಿರ್ಮಾಣ ಹಂತದ ಸುರಂಗ ಕುಸಿದು ಅವಶೇಷಗಳಡಿ ಸಿಲುಕಿದವರ ರಕ್ಷಣೆಗಾಗಿ ಎನ್‌ಡಿಆರ್‌ಎಫ್ ಸಿಬ್ಬಂದಿ ಭಾನುವಾರ ಕಾರ್ಯಾಚರಣೆ ಕೈಗೊಂಡಿದ್ದರು –ಪಿಟಿಐ ಚಿತ್ರ

'ತಾಯಿಯನ್ನು ನೆನಪಿಸಿಕೊಂಡೆ..'

'ಜೀವಂತವಾಗಿ ಹೊರಬರುವ ಭರವಸೆಯನ್ನೇ ನಾನು ಕಳೆದುಕೊಂಡಿದ್ದೆ. ಅವಶೇಷಗಳಡಿ ಸಿಲುಕಿ ಒಂದು ವೇಳೆ ನಾನು ಸತ್ತರೂ, ಆಘಾತಕ್ಕೊಳಗಾಗದೇ ಶಾಂತಿಯಿಂದಿರಲು ನನ್ನ ತಾಯಿಗೆ ತಿಳಿಸುವಂತೆ ನನ್ನೊಂದಿಗಿದ್ದ ಕಾರ್ಮಿಕನಿಗೆ ಹೇಳಿದೆ' ರಕ್ಷಿಸಲ್ಪಟ್ಟ ಕಾರ್ಮಿಕ ಮೋತಿ ಲಾಲ್ ಕೋಲ್ (30)ಹೇಳಿದರು.

'ಮುಂದಿನ ಜನ್ಮದಲ್ಲಿ ನಾನು ಮತ್ತೇ ನನ್ನ ತಾಯಿಯ ಗರ್ಭದಲ್ಲಿಯೇ ಜನಿಸುತ್ತೇನೆ ಎಂಬುದಾಗಿ ತಿಳಿಸುವಂತೆ ನನ್ನ ಗೆಳೆಯ ನಂದಕುಮಾರ್ ಯಾದವ್‌ಗೆ ತಿಳಿಸಿದ್ದೆ' ಎಂದು ಹೇಳಿದರು. ಅವರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹನುಮನ ಜನ್ಮಸ್ಥಳ ವಿವಾದದ ನಡುವೆಯೇ ನಿರ್ಧಾರ

ತಿರುಮಲ ಅಂಜನಾದ್ರಿ ಅಭಿವೃದ್ಧಿ: ಟಿಟಿಡಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹನುಮಂತನ ಜನ್ಮಸ್ಥಳದ ವಿವಾದದ ನಡುವೆಯೇ, ಆಂಜನೇಯನ ನಿಜವಾದ ಜನ್ಮಸ್ಥಳ ಎಂದು ಕಳೆದ ವರ್ಷ ಘೋಷಿಸಿದ್ದ ತಿರುಮಲ ಅಂಜನಾದ್ರಿಯ ಆಕಾಶಗಂಗೆ ಪ್ರದೇಶವನ್ನು ಭವ್ಯವಾಗಿ ಅಭಿವೃದ್ಧಿಪಡಿಸಲು ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಮುಂದಾಗಿದೆ.

ಕಿಷ್ಕಿಂದಾ-ಹಂಪಿಯಲ್ಲಿರುವ ಶ್ರೀ ಹನುಮದ್ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಆಕ್ಷೇಪಣೆಗಳನ್ನು ಬದಿಗಿಟ್ಟು, 'ಹನುಮಾನ್ ಜನ್ಮ ಭೂಮಿ, ಆಕಾಶಗಂಗಾ' ಅಭಿವೃದ್ಧಿ ಕಾಮಗಾರಿಗಳಿಗೆ ಬುಧವಾರ ಶಂಕುಸ್ಥಾಪನೆ ನೆರವೇರಿಸಲಾಗುವುದು. ರಾಮಾಯಣಕ್ಕೆ ಸಂಬಂಧಿಸಿದ ಅಯೋಧ್ಯೆ, ಚಿತ್ರಕೂಟ ಇತ್ಯಾದಿ ಸ್ಥಳಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಟಿಟಿಡಿ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷ ಏಪ್ರಿಲ್‌ನಲ್ಲಿ, ಟಿಟಿಡಿ ತಿರುಮಲ ಬೆಟ್ಟಗಳ ಅಂಜನಾದ್ರಿಯನ್ನು ಹನುಮಾನ್ ಜನ್ಮಸ್ಥಳ ಎಂದು ಘೋಷಿಸಿತ್ತು. ಇದು ಸಾಹಿತ್ಯ, ಪೌರಾಣಿಕ, ಶಾಸನ ಮತ್ತು ವೈಜ್ಞಾನಿಕ, ಭೌಗೋಳಿಕ ಪುರಾವೆಗಳನ್ನು ಆಧರಿಸಿದೆ ಎಂದು ಅದು ಹೇಳಿದೆ.

ತಿರುಮಲ ಅಂಜನಾದ್ರಿಯನ್ನು ಹನುಮಂತನ ಜನ್ಮಸ್ಥಳ ಎಂದು ದೃಢಪಡಿಸಲು ಪುರಾಣಗಳು, ಪುರಾತತ್ವ ಮತ್ತು ಇತರ ಪುರಾವೆಗಳನ್ನು ಸಂಶೋಧಿಸಲು ಖ್ಯಾತ ವಿದ್ವಾಂಸರು ಮತ್ತು ಸಂಶೋಧಕರ ಸಮಿತಿಯನ್ನು ಟಿಟಿಡಿ ಈ ಹಿಂದೆ ರಚಿಸಿತ್ತು. 'ಆಂಜನೇಯನ ಜನ್ಮಸ್ಥಳವಾಗಿ ಜಗತ್ತಿನ ಯಾವುದೇ ಭಾಗವನ್ನು ದೃಢೀಕರಿಸಲು ಯಾವುದೇ ಪುರಾವೆಗಳು ಕಂಡುಬಂದಿಲ್ಲ' ಎಂದು ಸಮಿತಿಯ ವರದಿ ಹೇಳಿದೆ.

ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಹಂಪಿಯ ಸ್ಥಳವನ್ನು ಹನುಮಂತನ ಮೂಲಸ್ಥಾನವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಎರಡು ವರ್ಷಗಳ ಹಿಂದೆ ಕಿಷ್ಕಿಂದೆಯ ಟ್ರಸ್ಟ್ ಅನ್ನು ರಚಿಸಲಾಗಿದೆ ಎಂದು ವರದಿಯಾಗಿದೆ. ಈ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿ ಗೋವಿಂದಾನಂದ ಸರಸ್ವತಿ ಅವರು ಟಿಟಿಡಿ ಸಮಿತಿಯ ಸಮರ್ಥನೆಯನ್ನು ಕಟುವಾಗಿ ವಿರೋಧಿಸಿದ್ದಾರೆ.

'ಹನುಮಂತ ದೇವರಿಗೆ ಸಂಬಂಧಿಸಿದ ಇತರ ಸ್ಥಳಗಳ ಹಕ್ಕುಗಳನ್ನು ಪರಿಶೀಲಿಸಲು ಟಿಟಿಡಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿತ್ತು. ನಮಗೆ ಅಂತಹ ಅಧಿಕೃತ ಪುರಾವೆಗಳು ಕಂಡುಬಂದಿಲ್ಲ ಮತ್ತು ಜುಲೈನಲ್ಲಿ ನಡೆದ ವೆಬಿನಾರ್‌ನಲ್ಲಿ, ಮಠಾಧೀಶರು, ಪ್ರತಿಷ್ಠಿತ ವಿದ್ವಾಂಸರು ಮತ್ತು ಪ್ರಪಂಚದಾದ್ಯಂತದ ವಿವಿಧ ತಜ್ಞರು ನಮ್ಮ ಸಮಿತಿಯ ಸಂಶೋಧನೆಗಳನ್ನು ಸರ್ವಾನುಮತದಿಂದ ಬೆಂಬಲಿಸಿದ್ದಾರೆ. ಆದ್ದರಿಂದ ಹನುಮಾನ್ ಜನ್ಮಸ್ಥಳದ ಅಭಿವೃದ್ಧಿ ಕಾರ್ಯಗಳಿಗೆ ಮುಂದಾಗಿದ್ದೇವೆ' ಎಂದು ಟಿಟಿಡಿ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ. ಧರ್ಮ ರೆಡ್ಡಿ ಹೇಳಿದರು.

ಪ್ರಯಾಣಿಕ ದಟ್ಟಣೆ ಮಾರ್ಗಗಳಲ್ಲಿ 'ಕವಚ' ಅಳವಡಿಕೆ: ರೈಲ್ವೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ 'ರೈಲುಗಳ ಡಿಕ್ಕಿ ತಪ್ಪಿಸುವ ವ್ಯವಸ್ಥೆ' (ಟಿಸಿಎಎಸ್)ಯನ್ನು ಪ್ರಯಾಣಿಕರ ಭಾರಿ ದಟ್ಟಣೆ ಇರುವ ದೆಹಲಿ–ಮುಂಬೈ ಮತ್ತು ದೆಹಲಿ–ಹೌರಾ ಮಾರ್ಗಗಳಲ್ಲಿ ಅಳವಡಿಸಲು ಭಾರತೀಯ ರೈಲ್ವೆ ನಿರ್ಧರಿಸಿದೆ.

'ಕವಚ' ಎಂದೂ ಕರೆಯಲಾಗುವ ಈ ವ್ಯವಸ್ಥೆಯನ್ನು ಮೊದಲ ಹಂತದಲ್ಲಿ ಈ ಎರಡು ಮಾರ್ಗಗಳಲ್ಲಿ ಅಳವಡಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡನೇ ಹಂತದಲ್ಲಿ ಮುಂಬೈ–ಚೆನ್ನೈ, ಹೌರಾ–ಚೆನ್ನೈ ಮಾರ್ಗಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದ್ದು, ಸಮೀಕ್ಷಾ ಕಾರ್ಯ ನಡೆಯುತ್ತಿದೆ. 'ಪೂರ್ವ ಸರಕು ಕಾರಿಡಾರ್'ನಲ್ಲೂ ಈ ವ್ಯವಸ್ಥೆಯನ್ನು ಅಳವಡಿಸಲು ರೈಲ್ವೆ ಉದ್ದೇಶಿಸಿದೆ ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಇಬ್ಬರು ವಕೀಲರು, ಉದ್ಯಮಿ ಬಂಧನ

ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್ ಹಾಗೂ ಆಂಧ್ರಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಆನ್‌ಲೈನ್‌ನಲ್ಲಿ ಅವಹೇಳನಕಾರಿ ಪೋಸ್ಟ್‌ಗಳನ್ನು ಹಾಕಿದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ಇಬ್ಬರು ವಕೀಲರು ಹಾಗೂ ಒಬ್ಬ ಉದ್ಯಮಿಯನ್ನು ಬಂಧಿಸಿದೆ ಎಂದು ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ವಕೀಲರಾದ ಎಂ.ಚಂದ್ರಶೇಖರ ರಾವ್, ಕಲಾನಿಧಿ ಗೋಪಾಲಕೃಷ್ಣ ಹಾಗೂ ಉದ್ಯಮಿ ಗುಂಟಾ ರಮೇಶ ರಾವ್ ಬಂಧಿತರು.

ಮಹಾರಾಷ್ಟ್ರ ಸಚಿವ ಏಕನಾಥ ಶಿಂಧೆಗೆ ಬೆದರಿಕೆ ಪತ್ರ

ಠಾಣೆ (ಪಿಟಿಐ): ರಾಜ್ಯದ ಗಡ್‌ಚಿರೋಲಿ ಜಿಲ್ಲೆಯಲ್ಲಿ ತಮ್ಮ ಕಾರ್ಯಕರ್ತರನ್ನು ಕೊಂದಿದ್ದಕ್ಕಾಗಿ ಪ್ರತೀಕಾರ ತೀರಿಸಿಕೊಳ್ಳುವುದಾಗಿ ನಕ್ಸಲರು ಮಹಾರಾಷ್ಟ್ರ ನಗರಾಭಿವೃದ್ಧಿ ಸಚಿವ ಏಕನಾಥ ಶಿಂಧೆ ಅವರಿಗೆ ಬೆದರಿಕೆ ಪತ್ರವೊಂದನ್ನು ಬರೆದಿದ್ದಾರೆ ಎಂದು ಮೂಲಗಳು ಭಾನುವಾರ ಹೇಳಿವೆ.

ಏಕನಾಥ ಶಿಂಧೆ

ಠಾಣೆಯಲ್ಲಿನ ಸಚಿವರ ನಿವಾಸಕ್ಕೆ ಶುಕ್ರವಾರ ಪತ್ರವನ್ನು ಕಳುಹಿಸಲಾಗಿದೆ. ಆದ್ದರಿಂದ ನಿವಾಸದ ಸುತ್ತಮುತ್ತ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ಜಿಲ್ಲೆಯ ಅಧಿಕಾರಿಯೊಬ್ಬರು ಹೇಳಿದರು.

ಗಡ್‌ಚಿರೋಲಿಯಲ್ಲಿ ನಕ್ಸಲ್ ಹಾವಳಿಯನ್ನು ತಪ್ಪಿಸಲು ಅಭಿವೃದ್ಧಿಯೊಂದೇ ಮಾರ್ಗ ಎಂದು ಸಚಿವ ಏಕನಾಥ್ ಅವರು ಹೇಳಿದ್ದರು.

ಕಳೆದ ವರ್ಷ ನವೆಂಬರ್‌ನಲ್ಲಿ ಉನ್ನತ ಕಮಾಂಡರ್‌ಗಳು ಸೇರಿ 26 ನಕ್ಸಲರನ್ನು ಗಡ್‌ಚಿರೋಲಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿತ್ತು.

ಬೆದರಿಕೆ ಪತ್ರ ಸಂಬಂಧ ಠಾಣೆ ಪೊಲೀಸರು ದೂರು ದಾಖಲಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಲು ಪತ್ರವನ್ನು ಅಪರಾಧ ವಿಭಾಗದ ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಶೇ 5ರಷ್ಟು ಷೇರು ಮಾರಲಿರುವ ವಿಮಾ ನಿಗಮ

ಐಪಿಒಗೆ ಅರ್ಜಿ ಸಲ್ಲಿಸಿದ ಎಲ್‌ಐಸಿ

ನವದೆಹಲಿ (ರಾಯಿಟರ್ಸ್/ಪಿಟಿಐ): ಕೇಂದ್ರ ಸರ್ಕಾರದ ಮಾಲೀಕತ್ವದ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ), ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಮೂಲಕ ತನ್ನ ಷೇರು ಮಾರಾಟ ಮಾಡಲು ಅನುಮತಿ ಕೋರಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಭಾನುವಾರ ಅರ್ಜಿ ಸಲ್ಲಿಸಿದೆ.

ಕೇಂದ್ರ ಸರ್ಕಾರಕ್ಕೆ ಬಂಡವಾಳ ಹಿಂತೆಗೆತದ ಗುರಿಯನ್ನು ತಲುಪಲು ಈ ಐಪಿಒ ಮಹತ್ವದ್ದು. ಅರ್ಜಿಯಲ್ಲಿ ಇರುವ ಮಾಹಿತಿ ಪ್ರಕಾರ ಎಲ್‌ಐಸಿ 31.62 ಕೋಟಿ ಷೇರುಗಳನ್ನು (ಅಂದರೆ, ಸರಿಸುಮಾರು ಶೇಕಡ 5ರಷ್ಟು ಷೇರುಗಳನ್ನು) ಮಾರಾಟ ಮಾಡಲಿದೆ.

ಎಲ್‌ಐಸಿಯ ಇಂದಿನ ಆಸ್ತಿಗಳು ಹಾಗೂ ಭವಿಷ್ಯದ ಲಾಭದ ಒಟ್ಟು ಮೌಲ್ಯವು ₹ 5.39 ಲಕ್ಷ ಕೋಟಿ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ದೇಶದ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆದುಕೊಳ್ಳುತ್ತಿರುವ ಹೊತ್ತಿನಲ್ಲಿಯೇ ಎಲ್‌ಐಸಿ ಐಪಿಒ ಬರುತ್ತಿದೆ.

ಎಲ್‌ಐಸಿಯು ಒಟ್ಟು 28.30 ಕೋಟಿ ವಿಮೆ ಪಾಲಿಸಿಗಳನ್ನು ಮಾರಾಟ ಮಾಡಿದೆ. 13.5 ಲಕ್ಷ ಏಜೆಂಟರನ್ನು ಕಂಪನಿ ಹೊಂದಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ತಿಳಿಸಿದ್ದಾರೆ. ಎಲ್‌ಐಸಿಯ ಮಾರುಕಟ್ಟೆ ಮೌಲ್ಯದ ಅಂದಾಜನ್ನು ಸರ್ಕಾರವು ಅರ್ಜಿಯಲ್ಲಿ ತಿಳಿಸಿಲ್ಲ.

ಐಪಿಒ ಸಂದರ್ಭದಲ್ಲಿ ಎಲ್‌ಐಸಿ ವಿಮೆ ಹೊಂದಿರುವವರಿಗೆ ಎಷ್ಟು ವಿನಾಯಿತಿ ನೀಡಲಾಗುತ್ತದೆ ಎಂಬುದನ್ನು ಕೂಡ ಸರ್ಕಾರ ತಿಳಿಸಿಲ್ಲ. ಎಲ್‌ಐಸಿಯಲ್ಲಿ ಹೂಡಿಕೆ ಮಾಡಲು ವಿದೇಶಿ ಹೂಡಿಕೆದಾರರಿಗೆ ಕೂಡ ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರವು ಆಲೋಚನೆ ನಡೆಸಿದೆ.

ಎಲ್‌ಐಸಿಯು ಒಂದು ನಿಗಮ ಎಂದು ನೋಂದಣಿ ಆಗಿರುವ ಕಾರಣ, ಇದರಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಕೊಡಬೇಕು ಎಂದಾದರೆ ವಿದೇಶಿ ನೇರ ಬಂಡವಾಳ ಹೂಡಿಕೆ ನೀತಿಯಲ್ಲಿ ಬದಲಾವಣೆ ತರಬೇಕಾಗುತ್ತದೆ. ಸೆಪ್ಟೆಂಬರ್ ಅಂತ್ಯದ ವೇಳೆಗೆ ಎಲ್‌ಐಸಿ 1.05 ಲಕ್ಷಕ್ಕಿಂತ ಹೆಚ್ಚು ನೌಕರರನ್ನು ಹೊಂದಿದೆ. ₹ 33.90 ಲಕ್ಷ ಕೋಟಿಗಿಂತ ಹೆಚ್ಚಿನ ಸಂಪತ್ತನ್ನು ಎಲ್‌ಐಸಿ ನಿರ್ವಹಣೆ ಮಾಡುತ್ತಿದೆ.

ಎಲ್‌ಐಸಿ ಐಪಿಒ ಮೂಲಕ ಸಂಗ್ರಹ ಆಗಲಿರುವ ಬಂಡವಾಳದ ಮೊತ್ತವು ಹಿಂದಿನ ವರ್ಷದಲ್ಲಿ ನಡೆದ ಪೇಟಿಎಂ ಐಪಿಒಕ್ಕಿಂತ ದೊಡ್ಡದಾಗಿ ಇರಲಿದೆ.

ಜಿಲ್ಲೆಗಳಲ್ಲಿ ಸೈಬರ್ ಸೆಲ್‌ಗೆ ಶಿಫಾರಸು

ನವದೆಹಲಿ: ಸೈಬರ್ ಅಪರಾಧಗಳನ್ನು ತಡೆಯಲು ಎಲ್ಲ ಜಿಲ್ಲೆಗಳಲ್ಲಿ ಸೈಬರ್ ಸೆಲ್‌ಗಳ ಸ್ಥಾಪನೆ, ಸೈಬರ್ ಅಪರಾಧ ಸ್ಥಳಗಳನ್ನು ಗುರುತಿಸುವಿಕೆ, ಪೊಲೀಸ್ ಪಡೆಗೆ ಐ.ಟಿ. ವೃತ್ತಿಪರರ ನೇಮಕ ಸೇರಿದಂತೆ ವಿವಿಧ ಶಿಫಾರಸುಗಳನ್ನು ಸಂಸದೀಯ ಸಮಿತಿ ಮಾಡಿದೆ.

ಗ್ರೌಂಡ್ ಹ್ಯಾಂಡ್ಲಿಂಗ್ ವಿಭಾಗದ ಮಾರಾಟ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯ ಗ್ರೌಂಡ್ ಹ್ಯಾಂಡ್ಲಿಂಗ್ ವಿಭಾಗವನ್ನು (ವಿಮಾನಕ್ಕೆ ಹಲವು ಬಗೆಯ ಸೇವೆಗಳನ್ನು ಒದಗಿಸುವ ವಿಭಾಗ) ಖಾಸಗಿಯವರಿಗೆ ಮಾರಾಟ ಮಾಡುವ ಪ್ರಕ್ರಿಯೆಯನ್ನು ಸರ್ಕಾರ ಆರಂಭಿಸಲಿದ್ದು, ಆಸಕ್ತಿಪತ್ರವನ್ನು (ಇಒಐ) ಮುಂದಿನ ಹಣಕಾಸು ವರ್ಷದಲ್ಲಿ ಹೊರಡಿಸುವ ಸಾಧ್ಯತೆ ಇದೆ.

'ಏರ್ ಇಂಡಿಯಾ ಕಂಪನಿಯ ಅಂಗಸಂಸ್ಥೆಗಳನ್ನು ಮಾರಾಟ ಮಾಡಲು ನಮಗೆ ಕೇಂದ್ರ ಸಚಿವ ಸಂಪುಟದ ಅನುಮೋದನೆ ಈಗಾಗಲೇ ಇದೆ. ಹಾಗಾಗಿ, ಗ್ರೌಂಡ್ ಹ್ಯಾಂಡ್ಲಿಂಗ್ ವಿಭಾಗಗಳಲ್ಲಿ ಒಂದರ ಖರೀದಿಗೆ ಬಿಡ್ ಆಹ್ವಾನಿಸಿ ಆಸಕ್ತಿಪತ್ರವನ್ನು ಹೊರಡಿಸಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೂಕು ನುಗ್ಗಲು

ರವಿದಾಸ್ ಜಯಂತಿಯ ಅಂಗವಾಗಿ ಉತ್ತರ ಪ್ರದೇಶದ ಕಾಶಿಗೆ ತೆರಳಲು ಜಲಂಧರ್‌ನ ರೈಲು ನಿಲ್ದಾಣದಲ್ಲಿ ಜನರು ರೈಲು ಹತ್ತುವಾಗ ಕಂಡುಬಂದ ನೂಕುನುಗ್ಗಲು

ಪಿಟಿಐ ಚಿತ್ರ

ಎಲ್‌ಐಸಿ ಐಪಿಒ: ತಿಳಿಯಬೇಕಾದ ಸಂಗತಿಗಳು

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒಗೆ (ಆರಂಭಿಕ ಸಾರ್ವಜನಿಕ ಹೂಡಿಕೆ) ದಿನಗಣನೆ ಶುರುವಾಗಿದೆ. ಈ ವರ್ಷದ ಮಾರ್ಚ್ 31ರ ಒಳಗಾಗಿ ಐಪಿಒ ನಡೆಯುವ ಸಾಧ್ಯತೆ ಹೆಚ್ಚಿದ್ದು, ಅದಕ್ಕಾಗಿ ಭರದ ಸಿದ್ಧತೆಯೂ ನಡೆದಿದೆ. ಭಾರತದಲ್ಲಷ್ಟೇ ಅಲ್ಲ, ಜಾಗತಿಕ ಮಟ್ಟದಲ್ಲೂ ಎಲ್‌ಐಸಿ ಐಪಿಒ ದೊಡ್ಡ ಸುದ್ದಿ ಮಾಡುತ್ತಿದೆ. ಈ ಹೊತ್ತಿನಲ್ಲಿ ಎಲ್‌ಐಸಿ ಐಪಿಒ ಹೂಡಿಕೆಗೆ ಒಳ್ಳೆಯ ಆಯ್ಕೆಯೇ ಎನ್ನುವ ಬಗ್ಗೆ ಅರಿತುಕೊಳ್ಳುವ ಅಗತ್ಯವಿದೆ.

ಎಲ್‌ಐಸಿ ಐಪಿಒ ಹಿನ್ನೆಲೆ: 1956ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಎಲ್‌ಐಸಿ ಸದ್ಯ ಹಣಕಾಸು ಸಚಿವಾಲಯದ ಸುಪರ್ದಿಯಲ್ಲಿದ್ದು ಜಾಗತಿಕವಾಗಿ 'ಟಾಪ್–10' ವಿಮಾ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿದೆ. ಈಗ ಎಲ್‌ಐಸಿಯ ಶೇ 10ರಷ್ಟು ಪಾಲುದಾರಿಕೆಯನ್ನು ಕೇಂದ್ರ ಸರ್ಕಾರವು ಮಾರಾಟ ಮಾಡಲು, ಐಪಿಒಗೆ ಮುಂದಾಗಿದೆ ಎಂಬ ವರದಿಗಳು ಇವೆ. ಇದು ಸರ್ಕಾರದ ಬಂಡವಾಳ ಹಿಂತೆಗೆತದ ಪ್ರಮುಖ ಹೆಜ್ಜೆಯಾಗಿದ್ದು ಸುಮಾರು ₹ 80,000 ಕೋಟಿಯಿಂದ ₹ 1 ಲಕ್ಷ ಕೋಟಿವರೆಗೆ ಬಂಡವಾಳ ಸಂಗ್ರಹದ ಗುರಿ ಹೊಂದಲಾಗಿದೆ. ಐಪಿಒ ಬಳಿಕ ಎಲ್‌ಐಸಿಯ ಮೌರುಕಟ್ಟೆ ಮೌಲ್ಯ ₹ 14 ಲಕ್ಷ ಕೋಟಿಯಷ್ಟಾಗಲಿದೆ ಎಂಬ ಅಂದಾಜು ಇದೆ.

ಎಲ್‌ಐಸಿಯ ಮಾರುಕಟ್ಟೆ ಪಾಲು: ಭಾರತದ ವಿಮಾ ಮಾರುಕಟ್ಟೆಯ ಮೌಲ್ಯ 2019-20ರಲ್ಲಿ ಸುಮಾರು ₹ 7.63 ಲಕ್ಷ ಕೋಟಿ ಆಗಿತ್ತು. ವಿಮಾ ವಲಯದಲ್ಲಿನ ಶೇ 67.39ರಷ್ಟು ಮಾರುಕಟ್ಟೆ ಎಲ್‌ಐಸಿ ಹಿಡಿತದಲ್ಲಿದೆ. ಇನ್ನುಳಿದ ಶೇ 32.61ರಷ್ಟು ಪಾಲು 23 ಖಾಸಗಿ ವಿಮಾ ಕಂಪನಿಗಳ ಬಳಿ ಇದೆ. ಕಂಪನಿಯ ಗಾತ್ರದ ಕಾರಣದಿಂದಾಗಿ ಎಲ್‌ಐಸಿ ಐಪಿಒ ದೊಡ್ಡ ಮಟ್ಟದಲ್ಲಿ ಸುದ್ದಿಯಲ್ಲಿದೆ. ಎಲ್‌ಐಸಿಯ ರಿಟರ್ನ್ ಆನ್ ಈಕ್ವಿಟಿ (ಹೂಡಿಕೆ ಮೇಲಿನ ಗಳಿಕೆ) ಶೇ 82ರಷ್ಟಿದೆ ಎಂದು ಕ್ರಿಸಿಲ್ ಸಂಸ್ಥೆಯ ವರದಿ ಹೇಳುತ್ತಿದೆ.

ಜಾಗತಿಕ ಮಟ್ಟದಲ್ಲಿ ವಿಮೆ ಹೊಂದಿರುವವರ ಸರಾಸರಿ ಪ್ರಮಾಣ ಶೇ 7.23ರಷ್ಟು. ಆದರೆ ಭಾರತದಲ್ಲಿ ವಿಮೆ ಹೊಂದಿರುವವರು ಒಟ್ಟು ಜನಸಂಖ್ಯೆಯ ಶೇ 4.2ರಷ್ಟು ಮಂದಿ ಮಾತ್ರ. ಹೀಗಾಗಿ, ಭವಿಷ್ಯದಲ್ಲಿ ವಿಮಾ ವಲಯದಲ್ಲಿ ಗಣನೀಯ ಪ್ರಮಾಣದ ಬೆಳವಣಿಗೆಗೆ ಅವಕಾಶಗಳಿವೆ.

ಎಲ್‌ಐಸಿ ಆರ್ಥಿಕ ಸ್ಥಿತಿಗತಿ: ಅವಧಿ ವಿಮೆ (ಟರ್ಮ್ ಇನ್ಶೂರೆನ್ಸ್), ಆರೋಗ್ಯ ವಿಮೆ, ಯುಲಿಪ್ ಪಾಲಿಸಿಗಳು, ಎಂಡೋಮೆಂಟ್ ಪಾಲಿಸಿಗಳು, ಮನಿ ಬ್ಯಾಕ್ ಪಾಲಿಸಿಗಳು, ಹಿರಿಯ ನಾಗರಿಕರಿಗಾಗಿ ಇರುವ ಹೂಡಿಕೆಗಳು, ರಾಷ್ಟ್ರೀಯ ಪಿಂಚಣಿ ಯೋಜನೆ ಸೇರಿ ಹಲವು ಸೇವೆ ಮತ್ತು ಉತ್ಪನ್ನಗಳನ್ನು ನೀಡಿ ಎಲ್‌ಐಸಿ ಆದಾಯ ಗಳಿಸುತ್ತಿದೆ. ಇದಲ್ಲದೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಕೂಡ ಎಲ್‌ಐಸಿ ಹಣ ಬೆಳೆಸುತ್ತಿದೆ. ಎಲ್‌ಐಸಿಯ ಹಣಕಾಸಿನ ಸ್ಥಿತಿಗತಿ ಉತ್ತಮವಾಗಿದೆ. 2000-01ರಲ್ಲಿ ಎಲ್‌ಐಸಿಯ ತೆರಿಗೆ ನಂತರದ ನಿವ್ವಳ ಲಾಭ ₹ 317 ಕೋಟಿ ಇತ್ತು. 2004-05ರಲ್ಲಿ ಅದು ₹ 708 ಕೋಟಿಗೆ ಏರಿಕೆಯಾಗಿದೆ. 2009-10ರಲ್ಲಿ ನಿವ್ವಳ ಲಾಭ ₹ 1,061 ಕೋಟಿ ಆಗಿದ್ದರೆ, 2014-15ರ ಅವಧಿಯಲ್ಲಿ ಅದು ₹ 1,834 ಕೋಟಿ ಆಗಿದೆ. 2019-20ನೇ ಸಾಲಿನಲ್ಲಿ ಎಲ್‌ಐಸಿಯ ತೆರಿಗೆ ನಂತರದ ನಿವ್ವಳ ಲಾಭ ₹ 2,713 ಕೋಟಿಗೆ ಏರಿಕೆಯಾಗಿದೆ.

ಎಲ್‌ಐಸಿ ಐಪಿಒ ಅನುಕೂಲಗಳು: 'ಇನ್ಶೂರೆನ್ಸ್ ಅಂದ್ರೆ ಎಲ್‌ಐಸಿ' ಎನ್ನುವ ಮಟ್ಟಿಗೆ ಎಲ್‌ಐಸಿ ಜನರ ಮನದಲ್ಲಿ ಗಟ್ಟಿಯಾಗಿ ಬೇರೂರಿದೆ. ಪ್ರತಿಯೊಂದು ಮನೆಗೂ ಎಲ್‌ಐಸಿ ಪರಿಚಯವಿದೆ. ಎಲ್‌ಐಸಿ ಅಡಿಯಲ್ಲಿ 2,048 ಶಾಖೆಗಳು, ಎಂಟು ವಲಯಗಳು, 113 ವಿಭಾಗೀಯ ಕಚೇರಿಗಳು, 1,408 ಉಪ ಕಚೇರಿಗಳು ಇವೆ. ಸುಮಾರು 13.5 ಲಕ್ಷ ಏಜೆಂಟರು ಇದ್ದಾರೆ. 2021-22ರ ಮೊದಲಾರ್ಧದಲ್ಲಿ ಎಲ್‌ಐಸಿಯ ತೆರಿಗೆ ನಂತರದ ಲಾಭ ₹ 1,437 ಕೋಟಿ ಇದೆ.

ಎಲ್‌ಐಸಿ ಐಪಿಒ ಸವಾಲುಗಳು: ಎಲ್‌ಐಸಿಯ ಹಣಕಾಸಿನ ಸ್ಥಿತಿ ಉತ್ತಮವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಖಾಸಗಿ ಕಂಪನಿಗಳಿಂದ ಅದು ಸವಾಲುಗಳನ್ನು ಎದುರಿಸಿ ವಿಮಾ ವಲಯದಲ್ಲಿ ಮುನ್ನಡೆ ಕಾಯ್ದುಕೊಳ್ಳಬೇಕಾಗುತ್ತದೆ. ವಿಮಾ ಪ್ರೀಮಿಯಂಗಳ ವಿಚಾರದಲ್ಲಿ ಖಾಸಗಿ ಕಂಪನಿಗಳ ಜೊತೆ ಸ್ಪರ್ಧಾತ್ಮಕವಾಗಿ ಬೆಲೆ ನಿಗದಿ ಮಾಡುವತ್ತ ಎಲ್‌ಐಸಿ ಗಮನಹರಿಸಬೇಕಿದೆ. ವಿಮಾ ವಲಯ ಸಂಪೂರ್ಣ ಡಿಜಿಟಲೀಕರಣಕ್ಕೆ ಒಳಗಾಗುತ್ತಿದ್ದು ಆ ಸವಾಲು ಎದುರಿಸಲು ಎಲ್‌ಐಸಿ ಎಷ್ಟರಮಟ್ಟಿಗೆ ಸನ್ನದ್ಧವಾಗಲಿದೆ ಎನ್ನುವುದನ್ನು ಕಾದುನೋಡಬೇಕಿದೆ. ಹೊಸ ಜನಸ್ನೇಹಿ ವಿಮಾ ಉತ್ಪನ್ನಗಳನ್ನು ರೂಪಿಸುವತ್ತಲೂ ಎಲ್‌ಐಸಿ ಗಮನಹರಿಸಬೇಕಾಗುತ್ತದೆ.

ಷೇರುಗಳ ಬೆಲೆ ನಿಗದಿ: ಎಲ್‌ಐಸಿ ಐಪಿಒದಲ್ಲಿ ಪ್ರತಿ ಷೇರಿನ ಬೆಲೆ ₹ 400ರಿಂದ ₹ 600ರ ನಡುವೆ ಇರಬಹುದು ಎನ್ನಲಾಗಿದೆ. ಆದರೆ ನಿಖರವಾಗಿ ಇಂತಿಷ್ಟೇ ಇರುತ್ತದೆ ಎಂದು ಹೇಳುವುದು ಕಷ್ಟ.

ಪಾಲಿಸಿದಾರರಿಗೆ ಬಂಪರ್: ಎಲ್‌ಐಸಿ ತನ್ನ ಪಾಲಿಸಿದಾರರಿಗಾಗಿ ಶೇ 10ರಷ್ಟು ಷೇರುಗಳನ್ನು ಮೀಸಲಿಡಲಿದೆ ಎಂಬ ವರದಿಗಳಿವೆ. 29 ಕೋಟಿ ಎಲ್‌ಐಸಿ ಪಾಲಿಸಿದಾರರು ಇದರ ಅನುಕೂಲ ಪಡೆಯಬಹುದು. ಈ ಕೋಟಾದ ಅಡಿಯಲ್ಲಿ ಐಪಿಒ ಅರ್ಜಿ ಸಲ್ಲಿಸಬೇಕು ಅಂದರೆ ಎಲ್‌ಐಸಿ ದಾಖಲೆಗಳೊಂದಿಗೆ ನಿಮ್ಮ ಪ್ಯಾನ್ ಕಾರ್ಡ್ ಲಿಂಕ್ ಮಾಡಿರಬೇಕು. ಪ್ಯಾನ್ ಲಿಂಕ್ ಮಾಡಲು ಈ ವೆಬ್ ಕೊಂಡಿ ಬಳಸಬಹುದು: https://licindia.in/Home/Online-PAN-Registration.

ಪ್ಯಾನ್ ಲಿಂಕ್ ಆಗಿದ್ದರೆ ಸಾಲದು. ಡಿ-ಮ್ಯಾಟ್ ಖಾತೆ ಸಹ ಹೊಂದಿರಬೇಕು. ಅದನ್ನು ಬ್ಯಾಂಕ್‌ಗಳ ಮೂಲಕ ಅಥವಾ ಕೆಲವು ಆನ್‌ಲೈನ್ ಅಪ್ಲಿಕೇಷನ್‌ಗಳ ಮೂಲಕ ತೆರೆಯಬಹುದು. ಎಲ್‌ಐಸಿ ಪಾಲಿಸಿ ಹೊಂದದವರು ಕೂಡ ಸಾಮಾನ್ಯ ಕೋಟಾದ ಅಡಿಯಲ್ಲಿ ಐಪಿಒಗೆ ಅರ್ಜಿ ಸಲ್ಲಿಸಬಹುದು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಮಾರಾಟದ ಒತ್ತಡಕ್ಕೆ ಸಿಲುಕಿದ ಷೇರುಪೇಟೆ

ಫೆಬ್ರುವರಿ 11ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಶೇ 1ರಷ್ಟು ಕುಸಿತ ಕಂಡಿವೆ. 58,152 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.83ರಷ್ಟು ಕುಸಿದಿದೆ. 17,374 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.80ರಷ್ಟು ತಗ್ಗಿದೆ. ಆರ್‌ಬಿಐ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಇಟ್ಟಿರುವುದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ, ಅಮೆರಿಕದಲ್ಲಿ ಹಣದುಬ್ಬರದ ನಡುವೆ ಬಡ್ಡಿ ದರ ಹೆಚ್ಚಳ ಸೇರಿದಂತೆ ಹಲವು ಬೆಳವಣಿಗೆಗಳಿಗೆ ಕಳೆದ ವಾರ ಸಾಕ್ಷಿಯಾಗಿದೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 3.8ರಷ್ಟು, ರಿಯಲ್ ಎಸ್ಟೇಟ್ ಶೇ 2.7ರಷ್ಟು ಮತ್ತು ಎಫ್‌ಎಂಸಿಜಿ ಶೇ 2.2ರಷ್ಟು ತಗ್ಗಿದೆ. ಲೋಹ ಸೂಚ್ಯಂಕ ಮಾತ್ರ ಶೇ 3.8ರಷ್ಟು ಗಳಿಕೆ ಕಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,641.81 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,562.19 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಟಾಟಾ ಸ್ಟೀಲ್ ಶೇ 7ರಷ್ಟು, ಕೋಲ್ ಇಂಡಿಯಾ ಶೇ 4ರಷ್ಟು, ಹಿಂಡಾಲ್ಕೊ ಶೇ 3ರಷ್ಟು, ಇಂಡಸ್‌ಇಂಡ್ ಬ್ಯಾಂಕ್ ಶೇ 3ರಷ್ಟು ಗಳಿಕೆ ಕಂಡಿವೆ. ಎಚ್‌ಡಿಎಫ್‌ಸಿ ಲೈಫ್ ಶೇ 5ರಷ್ಟು, ಟಾಟಾ ಕನ್ಸ್ಯೂಮರ್ ಶೇ 4ರಷ್ಟು, ಎಲ್ ಆ್ಯಂಡ್ ಟಿ ಶೇ 4ರಷ್ಟು, ಎಸ್‌ಬಿಐ ಲೈಫ್ ಶೇ 3ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ರೋಸರಿ ಬಯೋಟೆಕ್, ರಾಜೇಶ್ ಎಕ್ಸ್‌ಪೋರ್ಟ್ಸ್, ಕ್ರಿಸಿಲ್, ಕೋಲ್ ಇಂಡಿಯಾ, ಗ್ರ್ಯಾಫೈಟ್ ಇಂಡಿಯಾ, ರೇಲ್‌ಟೆಲ್, ಐಷರ್ ಮೋಟರ್ಸ್, ಅಂಬುಜಾ ಸಿಮೆಂಟ್, ಡಿಶ್ ಟಿವಿ, ಜೆಟ್ ಏರ್‌ವೇಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶಿ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿದೆ.

ಬ್ಯಾಂಕಿಂಗ್ ವಂಚನೆ, ಕಾಂಗ್ರೆಸ್ ಟೀಕೆ

ನವದೆಹಲಿ: ಬ್ಯಾಂಕ್‌ಗಳಿಗೆ ವಂಚನೆ ಮಾಡುವವರಿಗಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು 'ಲೂಟಿ ಮಾಡು ಮತ್ತು ಪರಾರಿಯಾಗು' ಎಂಬ ಯೋಜನೆಯನ್ನು ಜಾರಿಗೆ ತಂದಿದೆ ಎಂದು ಕಾಂಗ್ರೆಸ್ ಭಾನುವಾರ ಟೀಕಿಸಿದೆ.

ಎಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟಕ್ಕೆ ₹ 22,842 ಕೋಟಿ ಮೊತ್ತದ ವಂಚನೆ ಎಸಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಗುಜರಾತ್ ಮೂಲದ ಎಬಿಜಿ ಶಿಪ್‌ಯಾರ್ಡ್ ಲಿಮಿಟೆಡ್, ಅದರ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಿಶಿ ಕಮಲೇಶ್ ಅಗರ್ವಾಲ್ ಸೇರಿದಂತೆ ಇತರರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ. ಇದರ ಬೆನ್ನಲ್ಲೇ, ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ಪಿ.ಎಫ್. ಬಡ್ಡಿ ದರ ಮಾರ್ಚ್‌ನಲ್ಲಿ ನಿರ್ಧಾರ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಧರ್ಮದರ್ಶಿಗಳ ಮಂಡಳಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ (2021–22) ಪಿ.ಎಫ್. ನಿಧಿಗೆ ನೀಡಬೇಕಿರುವ ಬಡ್ಡಿ ಪ್ರಮಾಣದ ಬಗ್ಗೆ ಮಾರ್ಚ್‌ನಲ್ಲಿ ನಡೆಯುವ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಿದೆ.

'ಧರ್ಮದರ್ಶಿಗಳ ಮಂಡಳಿಯ ಸಭೆಯು ಮಾರ್ಚ್‌ನಲ್ಲಿ ಗುವಾಹಟಿಯಲ್ಲಿ ನಡೆಯಲಿದೆ. ಬಡ್ಡಿಯ ಬಗ್ಗೆ ಅಲ್ಲಿ ಪ್ರಸ್ತಾವ ಬರಲಿದೆ' ಎಂದು ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ತಿಳಿಸಿದರು. 2021–22ನೇ ಸಾಲಿಗೆ ಕೂಡ ಶೇಕಡ 8.5ರಷ್ಟು ಬಡ್ಡಿ ನಿಗದಿ ಮಾಡಲಾಗುತ್ತದೆಯೇ ಎಂಬ ಪ್ರಶ್ನೆಗೆ ಯಾದವ್ ಅವರು, 'ಈ ಹಣಕಾಸು ವರ್ಷದಲ್ಲಿ ಸಂಘಟನೆಗೆ ಎಷ್ಟು ಆದಾಯ ಸಿಗಲಿದೆ ಎಂಬುದನ್ನು ಆಧರಿಸಿ ಬಡ್ಡಿಯ ಪ್ರಮಾಣ ತೀರ್ಮಾನವಾಗುತ್ತದೆ' ಎಂದರು. ಯಾದವ್ ಅವರು ಧರ್ಮದರ್ಶಿಗಳ ಮಂಡಳಿಯ ಅಧ್ಯಕ್ಷರೂ ಹೌದು. ಹಿಂದಿನ ಹಣಕಾಸು ವರ್ಷದಲ್ಲಿ (2020–21) ಪಿ.ಎಫ್. ನಿಧಿಗೆ ಶೇ 8.5ರಷ್ಟು ಬಡ್ಡಿ ನೀಡಲಾಗಿತ್ತು.

ಧರ್ಮದರ್ಶಿಗಳ ಮಂಡಳಿಯು ಬಡ್ಡಿ ದರ ನಿಗದಿ ಮಾಡಿದ ನಂತರದಲ್ಲಿ, ಆ ಪ್ರಸ್ತಾವನೆಯನ್ನು ಕೇಂದ್ರ ಹಣಕಾಸು ಸಚಿವಾಲಯಕ್ಕೆ ರವಾನಿಸಿ, ಸಚಿವಾಲಯದ ಸಹಮತ ಪಡೆಯಲಾಗುತ್ತದೆ. ಹಣಕಾಸು ಸಚಿವಾಲಯವು ಅನುಮೋದನೆ ನೀಡಿದ ನಂತರ ಇಪಿಎಫ್‌ಒ, ಬಡ್ಡಿ ದರಕ್ಕೆ ಅನುಗುಣವಾಗಿ ಮೊತ್ತ ಪಾವತಿಸುತ್ತದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹435
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹435

ರಾಮನಗರ ರೇಷ್ಮೆ

ಮಿಶ್ರತಳಿ	₹400-756
ದ್ವಿತಳಿ	₹555-966

ಮೇ ತಿಂಗಳಲ್ಲಿ 5ಜಿ ಹರಾಜು?

ನವದೆಹಲಿ (ಪಿಟಿಐ): ತರಂಗಾಂತರ ಮಾರಾಟ ಪ್ರಕ್ರಿಯೆಯ ನಿಯಮಗಳಿಗೆ ಸಂಬಂಧಿಸಿದ ಶಿಫಾರಸುಗಳನ್ನು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಮಾರ್ಚ್ ಒಳಗೆ ಸಲ್ಲಿಸಿದರೆ 5ಜಿ ತರಂಗಾಂತರ ಹರಾಜು ಪ್ರಕ್ರಿಯೆಯು ಮೇ ತಿಂಗಳಿನಲ್ಲಿ ನಡೆಯುವ ಸಾಧ್ಯತೆ ಇದೆ.

5ಜಿ ತರಂಗಾಂತರ ಹರಾಜಿಗೆ ಸಂಬಂಧಿಸಿದ ಶಿಫಾರಸುಗಳನ್ನು ಮಾರ್ಚ್‌ಗೆ ಮುನ್ನ ಸಲ್ಲಿಸುವುದಾಗಿ ಟ್ರಾಯ್ ಹೇಳಿದೆ ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಈಚೆಗೆ ತಿಳಿಸಿದ್ದರು. ಹರಾಜನ್ನು ಆದಷ್ಟು ಬೇಗ ನಡೆಸುವುದಕ್ಕೆ ಅಗತ್ಯವಿರುವ ಇತರ ಪ್ರಕ್ರಿಯೆಗಳಿಗೆ ದೂರಸಂಪರ್ಕ ಇಲಾಖೆಯು ಸಜ್ಜಾಗುತ್ತಿದೆ ಎಂದೂ ಅವರು ಹೇಳಿದ್ದರು.

'ಟ್ರಾಯ್ ಶಿಫಾರಸು ಮಾರ್ಚ್ ಒಳಗೆ ಬರಲಿದೆ. ನಂತರ, ನಮಗೆ ಶಿಫಾರಸುಗಳ ಬಗ್ಗೆ ತೀರ್ಮಾನ ಕೈಗೊಳ್ಳಲು ಒಂದು ತಿಂಗಳು ಬೇಕು' ಎಂದು ದೂರಸಂಪರ್ಕ ಕಾರ್ಯದರ್ಶಿ ಕೆ. ರಾಜಾರಾಮನ್ ತಿಳಿಸಿದ್ದಾರೆ. ದೂರಸಂಪರ್ಕ ಇಲಾಖೆ ನೀಡಿರುವ ಮಾಹಿತಿ ಪ್ರಕಾರ, 4ಜಿ ಸೇವೆಗಳಲ್ಲಿ ಸಿಗುವುದಕ್ಕಿಂತ ಹತ್ತು ಪಟ್ಟು ಹೆಚ್ಚಿನ ಡೌನ್‌ಲೋಡ್ ವೇಗ 5ಜಿ ಸೇವೆಗಳಲ್ಲಿ ಲಭ್ಯವಾಗಲಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಆರನೇ ವರ್ಷದ ಪುಣ್ಯಸ್ಮರಣೆ

ಪದ್ಮಶಾಲಿ ಕನಮಾಕಲು

ಶ್ರೀ ಕೆ.ಪಿ.ಎಂ. ನಂಜಪ್ಪನವರು

ವಿಜಯನಗರ, ಬೆಂಗಳೂರು.

ನಿಧನ: 14-02-2016

ಅಧ್ಯಕ್ಷರು: ಶ್ರೀ ಭಾವನಾಋಷಿ ಪದ್ಮಪೀಠ ಮಹಾಸಂಸ್ಥಾನ(ರಿ)

ಮಾಜಿ ಅಧ್ಯಕ್ಷರು: ಕರ್ನಾಟಕ ಪದ್ಮಶಾಲಿ ಸಂಘ

ಮಾಜಿ ಅಧ್ಯಕ್ಷರು: ಕೊಡಿಯಾಲದವರ ಪದ್ಮಶಾಲಿ ಸಂಘ

ಮಾಲೀಕರು: ಭುವನೇಶ್ವರಿ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್

ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ: ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.

ಸವಿನೆನಪು

ಡಾ|| ಜೆ.ಎಲ್. ತಿಮ್ಮಯ್ಯ

14ನೇ ಫೆಬ್ರವರಿ 1990

ಪತ್ನಿ, ಕುಟುಂಬವರ್ಗದವರು ಮತ್ತು ಸ್ನೇಹಿತರು

ಅಪರೂಪದ ಮಾಣಿಕ್ಯ ಶೋಷಿತವರ್ಗದ ನಂದಾದೀಪ

ಸನ್ಮಾನ್ಯ ಶ್ರೀ ಆರ್ ಭರಣಯ್ಯ I.A.S,

ಇವರ 110ನೇ ಜನ್ಮದಿನದ ಅಕ್ಕರೆಯ ಸ್ಮರಣೆ

(14.02.1912 -17.01.1974)

ಸರ್ಕಾರದಲ್ಲಿ ಉದ್ಯೋಗ ಒದಗಿಸಿ ಕೊಟ್ಟು ಅವರ ಬಾಳಿನಲ್ಲಿ ನಂದಾದೀಪವನ್ನು ಬೆಳಗಿಸಿದ ಹಿರಿಯ ನುರಿತ ಹಾಗೂ ಕರ್ನಾಟಕ ಕಂಡ ಅಮೋಘ ಅಪರೂಪದ ಭಾರತ ಸೇವೆಯ ಆಡಳಿತಾಧಿಕಾರಿ, ಒಬ್ಬ ಮಾನವತಾವಾದಿ, ವಿಶ್ವಮಾನವ, ಡಾ|| ಬಿ ಆರ್ ಅಂಬೇಡ್ಕರ್ ರವರ ಸಂದೇಶದಂತೆ ಶೋಷಿತರಿಗೆ ಸ್ಪಂಧಿಸಿ ಸತ್ಯ ಕರ್ತವ್ಯ ನಿಷ್ಠೆಯಿಂದ ಎಲ್ಲಾವರ್ಗದವರಿಗೆ ದಾರಿದೀಪವಾಗಿದ್ದವರು.

ಸನ್ಮಾನ್ಯರ 110ನೇ ಈ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಿಗೆ ಗೌರವ ಹಾಗೂ ಸದಾ ಸ್ಮರಣೆಯಲ್ಲಿರುವ ಕುಟುಂಬವರ್ಗದವರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

URGENT REQUIREMENT: LED-TECHNICIAN, Looking For Candidates From any ITI/ Diploma, Freshers Can Apply. 9739320044.

Drivers

ಉಬರ್ ಮತ್ತು ಓಲಾಗೆ ಚಾಲಕರು ಬೇಕಾಗಿದ್ದಾರೆ! ಪ್ರತಿ ತಿಂಗಳು ರೂ.30000/- ವರೆಗೆ ಗಳಿಸಬಹುದು. ಎವರೆಸ್ಟ್ ಫ್ಲೀಟ್: 080-47179009 ಅನ್ನು ಸಂಪರ್ಕಿಸಿ.

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC PUC Degree ಸಂಬಳ15000 to 28000 ಸಂಪರ್ಕಿಸಿ 9980814578, 9980812378

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 10.000 - 15,000. 8951315839, 9880545002

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-48,000/- 9739066244, 7406066011

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್, ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು, ಯುವಕರು ಬೇಕಾಗಿದ್ದಾರೆ. ತಕ್ಷಣ ವಸತಿಯೂಟದೊಂದಿಗೆ ಸಂಬಳ 16,000 - 23,000. 6366324863, 9663196788

Walk-in

SENIOR PROJECT Manager Required, Manufacturing company in Nelamangala for sheet metal fabrication of furnaces. Must join immediately. CTC: 35k-50K :9844520055

LIASOINING OFFICER Full-time Employee required for manufacturing company in Nelamangala for land, labour, pollution board related issues. :9741165652

SENIOR DESIGN Engineer, Experience in designing machinery for furnace sheet metal fabrication company in Malleshwaram must join immediately. CTC: 30K- 50K :9844520035

FITTERS AND Welders required for factory at Nelamangala, Must join immediately. Salary: 20k- 25k, with accommodation :9003755930

PURCHASE OFFICER for manufacturing company at Malleshwaram Need to join immediately. Contact: 9844520044

ASTRO YATRA

ಓಂ ದುರ್ಗಾ ಅಂಜನ ಜ್ಯೋತಿಷ್ಯ ಮತ್ತು ವಾಸ್ತು ಕೇಂದ್ರ

Om Durga Anjanam Astro & Vastu Centre



ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೇವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿಧ್ವಾನ್

ಗುರು ಶ್ರೀದೇವಾನಂದನ್ ರವರಿಂದ

ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ, ಸುಖ ಶಾಂತಿ ನೆಮ್ಮದಿಗಾಗಿ, ಸಿರಿಸಂಪತ್ತು ಸ್ತ್ರೀ–ಪುರುಷ, ದಾಂಪತ್ಯ, ಮದುವೆ, ಸಂತಾನ, ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಚ ಅತೀಘೋರ ನೀಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾ ವಶೀಕರಣ, ಆಕರ್ಷಣ ಸಮ್ಮೋಹನ, ದುಷ್ಟಶಕ್ತಿಗಳು ಉದ್ಘಾಟನೆ ಮತ್ತು ಶತ್ರು ಸಂಬಂದಿತ ಮಾಟ ದೃಷ್ಟಿಶಾಪಗಳಿಗೆ ಇಚಿತೆ ಪರಿಹಾರಕ್ಕೆ ಸಂಪರ್ಕಿಸಿ.

ನಿಮ್ಮ ಇಚ್ಛೆಗೆ 24 ಘಂಟೆ ಮಾತ್ರ.

8217437023 / 9845005009

★||ವಶೀಕರಣ ಸ್ಪೆಷಲಿಸ್ಟ್||★ ಸ್ತ್ರೀ_ಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ_ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 27 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9008968867

★||ನಂ.1 ಸ್ತ್ರೀಪುರುಷ||★ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಒಂದು ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಪಾಂಡುರಂಗ ಗುರೂಜಿ. 9972033162

ಪ್ರವಾಸ

Travel

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಾಸಂಘ, ಗಿರಿನಗರ ಬೆಂಗಳೂರು-86. 9916473906, 8861111568

10/03/2022, 11/15 ದಿನಗಳು ದೆಹಲಿ, ಆಗ್ರ, ಅಲಹಾಬದ್,ಕಾಶಿ, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ. (ಕೆಲವೇ ಸೀಟುಗಳಿವೆ) ಪೆಬ್ರವರಿ, ಮಾರ್ಚ ಎಪ್ರಿಲ್‌ನಲ್ಲಿ ಅಂಡಮಾನ್ ಹವಳದ್ವೀಪ Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

06.04.2022, 10 ದಿನಗಳು ದೆಹಲಿ, ಅಮೃತ್ಸರ್, ವೈಷ್ಣೋದೇವಿ, ಕುಲುಮನಾಲಿ/ 25.04.2022, 8 ದಿನಗಳು ಕಾಶಿ,ಗಯಾ,ಕಲ್ಕತ್ತಾ, ಭುವನೇಶ್ವರ್ ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂಗಳೂರು-03. 9448294477

ಭವಿಷ್ಯ

Astrology

★||ಶ್ರೀಶಕ್ತಿ ಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್_ಕಛೇರಿ, ಸಾಲಬಾಧೆ, ಯಾವುದೇ_ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9591588881

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

	Ordinary	Bold	Ordinary Semi Display	Bold Semi Display
Per word	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:

Ph:080- 45557160 | 163 | 164 | M: 9880856233

9731810277 | 9901641752 | 9845114560 | 9886213331

condition apply*

dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233

Jerry : 9731810277 | Ravichandra : 9901641752

Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಐಪಿಎಲ್ ಮೆಗಾ ಹರಾಜು: ಯುವ ಆಟಗಾರ ರಾಜ್ ಬಾವಾಗೆ ಒಲಿದ ಅದೃಷ್ಟ; ಸಕಾರಿಯಾ, ಖಲೀಲ್‌ಗೂ ದೊಡ್ಡ ಮೊತ್ತ

ಪಂಜಾಬ್‌ಗೆ ಲಿವಿಂಗ್‌ಸ್ಟೋನ್; ಮುಂಬೈಗೆ ಜೋಫ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮೆಗಾ ಹರಾಜಿನ ಎರಡನೇ ದಿನ ತಮ್ಮ ಖಜಾನೆಯನ್ನು ತೆರೆದವು.

ಹರಾಜು ಪ್ರಕ್ರಿಯೆ ಕೊನೆಯ ದಿನವಾದ ಭಾನುವಾರದಂದು ಅತಿ ಹೆಚ್ಚು ಮೌಲ್ಯ ಪಡೆದ ಇಂಗ್ಲೆಂಡ್‌ನ ಲಿಯಾಮ್ ಲಿವಿಂಗ್‌ಸ್ಟೋನ್ (₹ 11.50 ಕೋಟಿ) ಅವರನ್ನು ಪಂಜಾಬ್ ತನ್ನತ್ತ ಸೆಳೆದುಕೊಂಡಿತು. ಅವರ ಸಹ ಆಟಗಾರ, ವೇಗಿ ಜೋಫ್ರಾ ಆರ್ಚರ್ ಅವರನ್ನು ಮುಂಬೈ ಇಂಡಿಯನ್ಸ್ ತಂಡವು (₹ 8 ಕೋಟಿ) ಖರೀದಿಸಿತು. ಆದರೆ ಬಹಳ ಸಮಯದಿಂದ ಗಾಯದ ಸಮಸ್ಯೆ ಎದುರಿಸುತ್ತಿರುವ ಜೋಫ್ರಾ ಮೇಲೆ ಇಷ್ಟು ದೊಡ್ಡ ಮೊತ್ತ ಹೂಡಿದ್ದು ಅಚ್ಚರಿ ತರಿಸಿತು.

ಆದರೆ, ಮೊದಲ ದಿನವೇ ಜಾಕ್‌ಪಾಟ್ ಹೊಡೆದಿದ್ದ ಇಶಾನ್ ಕಿಶನ್, ದೀಪಕ್ ಚಾಹರ್ ಅವರಿಗಿಂತ ಹೆಚ್ಚಿನ ಮೌಲ್ಯವನ್ನು ಎರಡನೇ ದಿನ ಯಾರೂ ಪಡೆಯಲಿಲ್ಲ. ಇದರಿಂದಾಗಿ ಇಶಾನ್ (₹15.25 ಕೋಟಿ) ಈ ಬಾರಿಯ ದುಬಾರಿ ಆಟಗಾರನಾದರು.

ಆದರೆ ಹರಾಜು ಪ್ರಕ್ರಿಯೆಯಲ್ಲಿ ಅಚ್ಚರಿ ಮೂಡಿಸಿದ ಇನ್ನೊಂದು ವಿಷಯವೆಂದರೆ; ಆಸ್ಟ್ರೇಲಿಯಾದ ಬ್ಯಾಟರ್ ಸ್ಟೀವ್ ಸ್ಮಿತ್, ಆ್ಯರನ್ ಫಿಂಚ್, ಭಾರತದ ಸುರೇಶ್ ರೈನಾ, ವೇಗಿ ಇಶಾಂತ್ ಶರ್ಮಾ ಅವರು ಬಿಕರಿಯಾಗಲಿಲ್ಲ.

ಪಂಜಾಬ್ ಧಾರಾಳ

ನೆಸ್ ವಾಡಿಯಾ ಸಹಮಾಲೀಕತ್ವದ ಪಂಜಾಬ್ ತಂಡವು ಸಬಲ ತಂಡವನ್ನು ಕಟ್ಟಲು ವಿದೇಶಿ ಆಟಗಾರರತ್ತ ಒಲವು ತೋರಿದೆ. ಮೊದಲ ದಿನ ಇಂಗ್ಲೆಂಡ್‌ನ ಜಾನಿ ಬೆಸ್ಟೊ, ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ, ಭಾನುವಾರ ಲಿಯಾಮ್, ವಿಂಡೀಸ್ ಆಟಗಾರ ಓಡಿಯನ್ ಸ್ಮಿತ್, ಶ್ರೀಲಂಕೆಯ ಭಾನುಕಾ, ನೇಥನ್ ಎಲ್ಲಿಸ್ ಅವರನ್ನೂ ಸೇರ್ಪಡೆ ಮಾಡಿಕೊಂಡಿತು.

ಕನ್ನಡಿಗ ಅನಿಲ್ ಕುಂಬ್ಳೆ ಮುಖ್ಯ ಕೋಚ್ ಆಗಿರುವ ಪಂಜಾಬ್ ತಂಡವು ಯುವ ಆಟಗಾರರಿಗೂ ಮಣೆ ಹಾಕಿದೆ. ಈಚೆಗೆ 19 ವರ್ಷದೊಳಗಿನವರ ವಿಶ್ವಕಪ್ ಗೆದ್ದ ಭಾರತ ತಂಡದ ಆಲ್‌ರೌಂಡರ್ ರಾಜಾ ಬಾವಾ ಅವರಿಗೆ ಎರಡು ಕೋಟಿ ರೂಪಾಯಿ ಕೊಟ್ಟು ಖರೀದಿಸಿತು.

ಮುಂಬೈಗೆ ಆರ್ಚರ್

ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ತನ್ನ ಬೌಲಿಂಗ್ ವಿಭಾಗವನ್ನು ಬಲಿಷ್ಠ ಗೊಳಿಸಿದೆ. ಅನುಭವಿ ಮಧ್ಯಮವೇಗಿ ಜೈದೇವ್ ಉನದ್ಕತ್, ಇಂಗ್ಲೆಂಡ್‌ನ ಜೋಫ್ರಾ ಆರ್ಚರ್, ಟೈಮಲ್ ಮಿಲ್ಸ್ ಅವರನ್ನು ಸೇರ್ಪಡೆ ಮಾಡಿಕೊಂಡಿತು. ಮೊದಲ ದಿನ ಇಶಾನ್ ಕಿಶನ್ ಅವರನ್ನು ಸೇರ್ಪಡೆ ಮಾಡಿಕೊಂಡಿತ್ತು.

ಆರ್‌ಸಿಬಿಯಲ್ಲಿ ಕನ್ನಡಿಗ ಅನೀಶ್ವರ್

ಮೊದಲ ದಿನದ ಹರಾಜಿನಲ್ಲಿ ಕರ್ನಾಟಕದ ಆಟಗಾರನನ್ನು ಆಯ್ಕೆ ಮಾಡದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆಗೆ ಗುರಿಯಾಗಿತ್ತು.

ಎರಡನೇ ದಿನದ ಪ್ರಕ್ರಿಯೆಯಯಲ್ಲಿ ಕನ್ನಡಿಗ ಅನೀಶ್ವರ್ ಗೌತಮ್ ಅವರನ್ನು ಮೂಲಬೆಲೆ 20 ಲಕ್ಷ ರೂಪಾಯಿ ನೀಡಿ ಖರೀದಿಸಿತು.

ಉಳಿದಂತೆ ದೇಶಿ ಕ್ರಿಕೆಟಿಗರು, ಯುವ ಆಟಗಾರರ ಮೇಲೆ ಹೆಚ್ಚು ಹಣ ವಿನಿಯೋಗಿಸಿತು.

ವಿಂಡೀಸ್‌ನ ಶರ್ಫೇನ್ ರುದರ್‌ಫೋರ್ಡ್ ಅವರಿಗೆ ಒಂದು ಕೋಟಿ ಕೊಟ್ಟು ಖರೀದಿಸಿತು. ಬೌಲರ್ ಸಿದ್ಧಾರ್ಥ್ ಕೌಲ್ ಅವರಿಗೆ 75 ಲಕ್ಷ ನೀಡಿದೆ.

ಮೊದಲ ದಿನ ದಿನೇಶ್ ಕಾರ್ತಿಕ್, ಫಫ್ ಡುಪ್ಲೆಸಿ ಮತ್ತು ಜೋಶ್ ಹ್ಯಾಜಲ್‌ವುಡ್ ಅವರನ್ನು ಸೇರ್ಪಡೆ ಮಾಡಿಕೊಂಡಿತ್ತು.

ಡೆಲ್ಲಿ ಬೌಲಿಂಗ್ ಪಡೆ

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪ್ರಮುಖ ಬೌಲರ್ ಎನ್ರಿಚ್ ನಾಕಿಯಾಗೆ ಈ ಬಾರಿ ಶಾರ್ದೂಲ್ ಠಾಕೂರ್ ಮತ್ತು ಖಲೀಲ್ ಅಹಮದ್ ಅವರ ಸಾಥ್ ಸಿಗಲಿದೆ.

ಅಲ್ಲದೇ ಯುವ ಪ್ರತಿಭಾವಂತ ಬೌಲರ್ ಚೇತನ್ ಸಕಾರಿಯಾ ಹಾಗೂ ಚೈನಾಮನ್ ಬೌಲರ್ ಕುಲದೀಪ್ ಯಾದವ್ ಕೂಡ ತಂಡ ಸೇರಿದ್ದಾರೆ.

ಚೆನ್ನೈಗೆ ಶಿವಂ ದುಬೆ

ಮುಂಬೈ ಹುಡುಗ ಶಿವಂ ದುಬೆ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ಸೆಳೆದುಕೊಂಡಿತು.

ದೀಪಕ್ ಚಾಹರ್, ಡ್ವೇನ್ ಬ್ರಾವೊ, ರವೀಂದ್ರ ಜಡೇಜ ಅವರೊಂದಿಗೆ ನಾಲ್ಕನೇ ಆಲ್‌ರೌಂಡರ್ ಆಗಿ ದುಬೆ ತಂಡ ಸೇರಿದ್ದಾರೆ.

19 ವರ್ಷದೊಳಗಿನವರ ಭಾರತ ತಂಡದಲ್ಲಿ ಆಡಿದ್ದ ಭರವಸೆಯಪ್ರತಿಭೆ ರಾಜವರ್ಧನ್ ಹಂಗರಗೇಕರ್ ಕೂಡ ಧೋನಿ ಬಳಗ ಸೇರಿದ್ದಾರೆ.

ಕೆಕೆಆರ್‌ಗೆ ಅಜಿಂಕ್ಯ ರಹಾನೆ

ಭಾರತ ತಂಡದ ಆಟಗಾರ ಅಜಿಂಕ್ಯ ರಹಾನೆ ಅವರು ಈ ಬಾರಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ರಹಾನೆ ಕೇವಲ ಒಂದು ಕೋಟಿ ಮೌಲ್ಯ ಪಡೆದರು. ಶ್ರೇಯಸ್ ಅಯ್ಯರ್ ಮತ್ತು ವಿಂಡೀಸ್‌ನ ಆ್ಯಂಡ್ರೆ ರಸೆಲ್ ಈ ತಂಡದಲ್ಲಿದ್ದಾರೆ.

ಫ್ರ್ಯಾಂಚೈಸಿಗಳ ಪರ್ಸ್‌ನಲ್ಲಿ ಬಾಕಿ ಹಣ		
ತಂಡ	ಮೊತ್ತ (₹)	ಖರೀದಿಸಿದ ಆಟಗಾರರು
ಚೆನ್ನೈ ಸೂಪರ್‌ಕಿಂಗ್ಸ್	2.95 ಕೋಟಿ	25
ಡೆಲ್ಲಿ ಕ್ಯಾಪಿಟಲ್ಸ್	10 ಲಕ್ಷ	24
ಗುಜರಾತ್ ಟೈಟನ್ಸ್	15 ಲಕ್ಷ	23
ಕೋಲ್ಕತ್ತ ನೈಟ್‌ರೈಡರ್ಸ್	45 ಲಕ್ಷ	25
ಲಖನೌ ಸೂಪರ್ ಜೈಂಟ್ಸ್	00	21
ಮುಂಬೈ ಇಂಡಿಯನ್ಸ್	10 ಲಕ್ಷ	25
ಪಂಜಾಬ್ ಕಿಂಗ್ಸ್	3.45 ಕೋಟಿ	25
ರಾಜಸ್ಥಾನ್ ರಾಯಲ್ಸ್	95 ಲಕ್ಷ	24
ರಾಯಲ್ ಚಾಲೆಂಜರ್ಸ್ ಬೆಂಗಳೂರು	1.55 ಕೋಟಿ	22
ಸನ್‌ರೈಸರ್ಸ್ ಹೈದರಾಬಾದ್	10 ಲಕ್ಷ	23

ಮಾರಾಟವಾಗದ ಪ್ರಮುಖರು

ಸುರೇಶ್ ರೈನಾ, ಸ್ಟೀವ್ ಸ್ಮಿತ್, ಶಕೀಬ್ ಅಲ್ ಹಸನ್, ಇಮ್ರಾನ್ ತಾಹೀರ್, ಆ್ಯಡಂ ಜಂಪಾ, ಆ್ಯರನ್ ಫಿಂಚ್, ದೇವಿಡ್ ಮಿಲಾನ್, ಉಸ್ಮಾನ್ ಖ್ವಾಜಾ, ಕೇದಾರ್ ಜಾಧವ್, ಮಾರ್ಟಿನ್ ಗಪ್ಟಿಲ್, ಕಾರ್ಲೋಸ್ ಬ್ರೆಥ್‌ವೇಟ್, ಚೇತೇಶ್ವರ್ ಪೂಜಾರ, ಮುರಳಿ ವಿಜಯ್.

ಅಂಕಿ ಸಂಖ್ಯೆ: ಐಪಿಎಲ್ ವೆಬ್‌ಸೈಟ್

ಈ ಬಾರಿ ಹರಾಜು ವಿಭಿನ್ನ: ಅನಿಲ್ ಕುಂಬ್ಳೆ

ಬೆಂಗಳೂರು: ಈ ಸಲದ ಹರಾಜು ಪ್ರಕ್ರಿಯೆಯಲ್ಲಿ ಹತ್ತು ತಂಡಗಳು ಪೈಪೋಟಿ ನಡೆಸಿದ ಕಾರಣ ಆಟಗಾರರ ಆಯ್ಕೆ ಮಾಡುವುದು ಕಠಿಣ ಸವಾಲಿನದಾಗಿತ್ತು ಎಂದು ಪಂಜಾಬ್ ಕಿಂಗ್ಸ್ ತಂಡದ ಮುಖ್ಯ ಅನಿಲ್ ಕುಂಬ್ಳೆ ಹೇಳಿದರು.

ಭಾನುವಾರ ಇಂಗ್ಲೆಂಡ್ ತಂಡದ ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ವೆಸ್ಟ್ ಇಂಡೀಸ್‌ನ ಒಡಿಯನ್ ಸ್ಮಿತ್ ಅವರನ್ನು ಭಾರಿ ಮೊತ್ತ ಕೊಟ್ಟ ಪಂಜಾಬ್ ಖರೀದಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಕುಂಬ್ಳೆ, '2011, 2014ರ ಮೆಗಾ ಹರಾಜು ಮತ್ತು ಹೋದ ಬಾರಿಯ ಸಣ್ಣಪ್ರಮಾಣದ ಹರಾಜಿನಲ್ಲಿ ನಾನು ಭಾಗವಹಿಸಿದ್ದೆ. ಆದರೆ ಈ ಬಾರಿಯದ್ದು ವಿಭಿನ್ನ ಮತ್ತು ಸವಾಲಿನದ್ದಾಗಿತ್ತು. ಬಹುತೇಕ ಎಲ್ಲ ಆಟಗಾರರಿಗೂ ದೊಡ್ಡ ಮೊತ್ತದ ಮೌಲ್ಯ ನೀಡಲಾಗುತ್ತಿತ್ತು. ಅದರಿಂದ ಪರ್ಸ್ ಬ್ಯಾಲೆನ್ಸ್ ನಿರ್ವಹಿಸುವುದು ಕೂಡ ಸವಾಲಿನದ್ದಾಗಿತ್ತು' ಎಂದರು.

'ಹರಾಜಿನ ಲೆಕ್ಕಾಚಾರಗಳೂ ಕೂಡ ವಿಭಿನ್ನ ರೀತಿಯದ್ದಾಗಿದ್ದವು. ಕಳೆದೆರಡು ದಿನಗಳಲ್ಲಿ ಆದ ಅನುಭವ ಇದು' ಎಂದರು.

'ಈ ಬಾರಿ ಭಾರತದ ವೇಗದ ಬೌಲರ್‌ಗಳು ಉತ್ತಮ ಮೌಲ್ಯ ಪಡೆದಿದ್ದು ಸಂತಸ ತಂದಿದೆ. ಬೌಲರ್‌ಗಳಿಗೆ ಬಹಳ ಬೇಡಿಕೆ ಇತ್ತು. ಪ್ರತಿಭೆ, ಪರಿಶ್ರಮಕ್ಕೆ ಸಿಕ್ಕ ಮನ್ನಣೆ ಇದು' ಎಂದು ಅನಿಲ್ ಶ್ಲಾಘಿಸಿದರು.

ಚೆನ್ನೈ ಸೂಪರ್ ಕಿಂಗ್ಸ್

ತಂಡದಲ್ಲಿ ಉಳಿದುಕೊಂಡವರು: ರವೀಂದ್ರ ಜಡೇಜ (₹ 16 ಕೋಟಿ), ಮಹೇಂದ್ರ ಸಿಂಗ್ ಧೋನಿ (12 ಕೋಟಿ), ಋತುರಾಜ್ ಗಾಯಕವಾಡ್ (8 ಕೋಟಿ), ಮೋಯಿನ್ ಅಲಿ (6 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ದೀಪಕ್ ಚಾಹರ್, ಅಂಬಟಿ ರಾಯುಡು, ಡ್ವೇನ್ ಬ್ರಾವೊ, ರಾಬಿನ್ ಉತ್ತಪ್ಪ, ಕೆ.ಎಂ. ಆಸಿಫ್, ತುಷಾರ್ ದೇಶಪಾಂಡೆ.

ಭಾನುವಾರ ಆಯ್ಕೆಗೊಂಡವರು: ಡೆವೊನ್ ಕಾನ್ವೆ (1 ಕೋಟಿ), ಸುಭ್ರಾಂಶು ಸೇನಾಪತಿ (20 ಲಕ್ಷ), ಶಿವಂ ದುಬೆ (4 ಕೋಟಿ), ಮಿಚೆಲ್ ಸ್ಯಾಂಟನರ್ (1.90 ಕೋಟಿ), ಡ್ವೇನ್ ಪ್ರಿಟೋರಿಯಸ್ (50 ಲಕ್ಷ), ಮಹೇಶ್ ತೀಕ್ಷಣ (70 ಲಕ್ಷ), ಸಿಮರ್‌ಜೀತ್ ಸಿಂಗ್ (20 ಲಕ್ಷ), ಆ್ಯಡಂ ಮಿಲ್ನೆ (1.90 ಕೋಟಿ), ಮುಖೇಶ್ ಚೌಧರಿ (20 ಲಕ್ಷ), ಪ್ರಶಾಂತ್ ಸೋಲಂಕಿ (1.20 ಕೋಟಿ), ಹರಿ ನಿಶಾಂತ್ (20 ಲಕ್ಷ), ಎನ್.ಜಗದೀಶನ್ (20 ಲಕ್ಷ), ಕ್ರಿಸ್ ಜೋರ್ಡಾನ್ (3.60 ಕೋಟಿ), ಭಗತ್ ವರ್ಮಾ (20 ಲಕ್ಷ), ರಾಜವರ್ಧನ್ ಹಂಗರ್ಗೇಕರ್ (1.50 ಕೋಟಿ),

ಡೆಲ್ಲಿ ಕ್ಯಾಪಿಟಲ್ಸ್

ತಂಡದಲ್ಲಿ ಉಳಿದುಕೊಂಡವರು: ರಿಷಭ್ ಪಂತ್ (16 ಕೋಟಿ), ಅಕ್ಷರ್ ಪಟೇಲ್ (9 ಕೋಟಿ), ಪೃಥ್ವಿ ಶಾ (7.5 ಕೋಟಿ), ಆ್ಯನ್ರಿಚ್ ನಾರ್ಕಿಯಾ (6.5 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ಶಾರ್ದೂಲ್ ಠಾಕೂರ್, ಮಿಚೆಲ್ ಮಾರ್ಷ್, ಡೇವಿಡ್ ವಾರ್ನರ್, ಕುಲದೀಪ್ ಯಾದವ್, ಮುಸ್ತಫಿಜುರ್ ರೆಹಮಾನ್, ಸರ್ಫರಾಜ್ ಖಾನ್, ಅಶ್ವಿನ ಹೆಬ್ಬಾರ್, ಕಮಲೇಶ್ ನಾಗರಕೋಟಿ

ಮನದೀಪ್ ಸಿಂಗ್ (1.10 ಕೋಟಿ), ಯಶ್ ಧುಳ್ (50 ಲಕ್ಷ), ರೋವಮನ್ ಪೊವೆಲ್ (2.80 ಕೋಟಿ), ಶ್ರೀಕರ್ ಭರತ್ (2 ಕೋಟಿ), ಲಲಿತ್ ಯಾದವ್ (65 ಲಕ್ಷ), ರಿಪಾಲ್ ಪಟೇಲ್ (20 ಲಕ್ಷ), ಖಲೀಲ್ ಅಹಮದ್ (5.25 ಕೋಟಿ), ಚೇತನ್ ಸಕಾರಿಯಾ (4.20 ಕೋಟಿ), ಪ್ರವೀಣ್ ದುಬೆ (50 ಲಕ್ಷ), ಟಿಮ್ ಸೀಫರ್ಟ್ (50 ಲಕ್ಷ), ಲುಂಗಿ ಗಿಡಿ (50 ಲಕ್ಷ),

ಗುಜರಾತ್ ಟೈಟನ್ಸ್

ತಂಡದಲ್ಲಿ ಉಳಿದುಕೊಂಡವರು: ಹಾರ್ದಿಕ್ ಪಾಂಡ್ಯ (15 ಕೋಟಿ), ರಶೀದ್ ಖಾನ್ (15 ಕೋಟಿ), ಶುಭಮನ್ ಗಿಲ್ (8 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ಲಾಕಿ ಫರ್ಗ್ಯುಸನ್, ಮೊಹಮ್ಮದ್ ಶಮಿ, ಜೇಸನ್ ರಾಯ್, ರಾಹುಲ್ ತೆವಾಟಿಯಾ, ನೂರ್ ಅಹಮದ್, ಆರ್. ಸಾಯಿ ಕಿಶೋರ್, ಅಭಿನವ್ ಸಾದರಂಗಣಿ

ಡಾಮ್ನಿಕ್ ಡ್ರೇಕ್ಸ್ (1.10 ಕೋಟಿ), ವಿಜಯ ಶಂಕರ್ (1.40 ಕೋಟಿ), ಜಯಂತ್ ಯಾದವ್ (1.70 ಕೋಟಿ), ದರ್ಶನ್ ನಲ್ಕಂಡೆ (20 ಲಕ್ಷ), ಯಶ್ ದಯಾಳ್ (3.20 ಕೋಟಿ), ಪ್ರದೀಪ್ ಸಂಗ್ವಾನ್ (20 ಲಕ್ಷ), ಅಲ್ಜರಿ ಜೋಸೆಫ್ (2.40 ಕೋಟಿ), ಮ್ಯಾಥ್ಯು ವೇಡ್ (2.40 ಕೋಟಿ), ವೃದ್ಧಿಮಾನ್ ಸಹಾ (1.90 ಕೋಟಿ), ಗುರುಕೀರತ್ ಸಿಂಗ್ ಮಾನ್ (50 ಲಕ್ಷ), ವರುಣ್ ಆ್ಯರನ್ (50 ಲಕ್ಷ),

ಕೋಲ್ಕತ್ತ ನೈಟ್ ರೈಡರ್ಸ್

ತಂಡದಲ್ಲಿ ಉಳಿದುಕೊಂಡವರು: ಆ್ಯಂಡ್ರೆ ರಸೆಲ್ (12 ಕೋಟಿ), ವರುಣ್ ಚಕ್ರವರ್ತಿ (8 ಕೋಟಿ), ವೆಂಕಟೇಶ್ ಅಯ್ಯರ್ (8 ಕೋಟಿ), ಸುನಿಲ್ ನಾರಾಯಣ್ (6 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ಶ್ರೇಯಸ್ ಅಯ್ಯರ್, ನಿತೀಶ್ ರಾಣಾ, ಪ್ಯಾಟ್ ಕಮಿನ್ಸ್, ಶಿವಂ ಮಾವಿ, ಶೆಲ್ಡನ್ ಜಾಕ್ಸನ್

ಬಾಬಾ ಇಂದ್ರಜೀತ್ (20 ಲಕ್ಷ), ಪ್ರಥಮ್ ಸಿಂಗ್ (20 ಲಕ್ಷ), ಅಜಿಂಕ್ಯ ರಹಾನೆ (1 ಕೋಟಿ), ರಿಂಕು ಸಿಂಗ್ (55 ಲಕ್ಷ), ಅಭಿಜಿತ್ ತೋಮರ್ (40 ಲಕ್ಷ), ಅನುಕೂಲ್ ರಾಯ್ (20 ಲಕ್ಷ), ಚಾಮಿಕ ಕರುಣರತ್ನೆ (50 ಲಕ್ಷ), ಅಶೋಕ್ ಶರ್ಮಾ (55 ಲಕ್ಷ), ರಾಸಿಕ್ ಸಲಾಮ್ (20 ಲಕ್ಷ), ರಮೇಶ್ ಕುಮಾರ್ (20 ಲಕ್ಷ), ಅಲೆಕ್ಸ್ ಹೇಲ್ಸ್ (1.50 ಕೋಟಿ), ಸ್ಯಾಮ್ ಬಿಲಿಂಗ್ಸ್ (2 ಕೋಟಿ), ಟಿಮ್ ಸೌಥಿ (1.50 ಕೋಟಿ),

ಲಖನೌ ಸೂಪರ್ ಜೈಂಟ್ಸ್

ತಂಡದಲ್ಲಿ ಉಳಿದುಕೊಂಡವರು: ಕೆ.ಎಲ್. ರಾಹುಲ್ (17 ಕೋಟಿ), ಮಾರ್ಕಸ್ ಸ್ಟೋಯಿನಿಸ್ (9.2 ಕೋಟಿ), ರವಿ ಬಿಷ್ಣೋಯಿ (4 ಕೋಟಿ).

ಹರಾಜಿನಲ್ಲಿ ಆಯ್ಕೆಯಾದವರು: ಜೇಸನ್ ಹೋಲ್ಡರ್, ಕೃಣಾಲ್ ಪಾಂಡ್ಯ, ಮಾರ್ಕ್ ವುಡ್, ಕ್ವಿಂಟನ್ ಡಿಕಾಕ್, ದೀಪಕ್ ಹೂಡಾ, ಮನೀಷ್ ಪಾಂಡೆ, ಅಂಕಿತ್ ರಜಪೂತ್, ಆವೇಶ್ ಖಾನ್.

ಮನನ್ ವೊಹ್ರಾ, ಕೈಲ್ ಮಯರ್ಸ್ (50 ಲಕ್ಷ), ಕರಣ್ ಶರ್ಮಾ (20 ಲಕ್ಷ), ಕೃಷ್ಣಪ್ಪ ಗೌತಮ್ (90 ಲಕ್ಷ), ಆಯುಶ್ ಬಡೋಣಿ (20 ಲಕ್ಷ), ದುಷ್ಮಂತ್ ಚಮೀರ (2 ಕೋಟಿ), ಶಹಬಾಜ್ ನದೀಂ (50 ಲಕ್ಷ), ಮೊಹಸಿನ್ ಖಾನ್ (20 ಲಕ್ಷ), ಎವಿನ್ ಲೂಯಿಸ್ (2 ಕೋಟಿ), ಮಯಂಕ್ ಯಾದವ್ (20 ಲಕ್ಷ),

ಮುಂಬೈ ಇಂಡಿಯನ್ಸ್

ತಂಡದಲ್ಲಿ ಉಳಿದುಕೊಂಡವರು: ರೋಹಿತ್ ಶರ್ಮಾ (16 ಕೋಟಿ), ಜಸ್‌ಪ್ರೀತ್ ಬೂಮ್ರಾ (12 ಕೋಟಿ), ಸೂರ್ಯಕುಮಾರ್ ಯಾದವ್ (8 ಕೋಟಿ), ಕೀರನ್ ಪೊಲಾರ್ಡ್ (6 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ಇಶಾನ್ ಕಿಶನ್, ಡೆವಾಲ್ಡ್ ಬ್ರೆವಿಸ್, ಬಾಸಿಲ್ ಥಂಪಿ, ಮುರುಗನ್ ಅಶ್ವಿನ್

ತಿಲಕ್ ವರ್ಮಾ (1.70 ಕೋಟಿ), ಸಂಜಯ್ ಯಾದವ್ (50 ಲಕ್ಷ), ಡೇನಿಯಲ್ ಸ್ಯಾಮ್ಸ್ (2.60 ಕೋಟಿ), ಟಿಮ್ ಡೇವಿಡ್ (8.25 ಕೋಟಿ), ಮೊಹಮ್ಮದ್ ಅರ್ಷದ್ ಖಾನ್ (20 ಲಕ್ಷ), ಜೈದೇವ್ ಉನದ್ಕತ್ (1.30 ಕೋಟಿ), ಮಯಂಕ್ ಮರ್ಕಂಡೆ (65 ಲಕ್ಷ), ಜೋಫ್ರಾ ಆರ್ಚರ್ (8 ಕೋಟಿ), ಟೈಮಲ್ ಮಿಲ್ಸ್ (1.50 ಕೋಟಿ), ರಿಲೆ ಮರಡಿತ್ (1 ಕೋಟಿ), ರಮಣದೀಪ್ ಸಿಂಗ್ (20 ಲಕ್ಷ), ರಾಹುಲ್ ಬುದ್ಧಿ (20 ಲಕ್ಷ), ಅನಮೋಲ್‌ಪ್ರೀತ್ ಸಿಂಗ್ (20 ಲಕ್ಷ), ಹೃತಿಕ್ ಶೋಕೀನ್ (20 ಲಕ್ಷ), ಅರ್ಜುನ್ ತೆಂಡೂಲ್ಕರ್ (30 ಲಕ್ಷ), ಸಂಜಯ್ ಯಾದವ್ (50 ಲಕ್ಷ)

ಪಂಜಾಬ್ ಕಿಂಗ್ಸ್

ತಂಡದಲ್ಲಿ ಉಳಿದುಕೊಂಡವರು: ಮಯಂಕ್ ಅಗರವಾಲ್ (14 ಕೋಟಿ), ಅರ್ಷದೀಪ್ ಸಿಂಗ್ (4 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ಶಿಖರ್ ಧವನ್, ಕಗಿಸೊ ರಬಾಡ, ಜಾನಿ ಬೇಸ್ಟೊ, ರಾಹುಲ್ ಚಾಹರ್, ಪ್ರಭಸಿಮ್ರನ್ ಸಿಂಗ್, ಇಶಾನ್ ಪೊರೆಲ್, ಜಿತೇಶ್ ಶರ್ಮಾ, ಶಾರೂಖ್ ಖಾನ್, ಹರ್‌ಪ್ರೀತ್ ಬ್ರಾರ್.

ಪ್ರೇರಕ್ ಮಂಕಡ್ (20 ಲಕ್ಷ), ಬಾಲ್‌ತೇಜ್ ಸಿಂಗ್ (20 ಲಕ್ಷ), ಅನ್ಷ್ ಪಟೇಲ್ (20 ಲಕ್ಷ), ಲಿಯಾಮ್ ಲಿವಿಂಗ್‌ಸ್ಟೋನ್ (11.50 ಕೋಟಿ), ರಿಷಿ ಧವನ್ (55 ಲಕ್ಷ), ವೃತಿಕ್ ಚಟರ್ಜಿ (20 ಲಕ್ಷ), ಒಡೀನ್ ಸ್ಮಿತ್ (6 ಕೋಟಿ), ಸಂದೀಪ್ ಶರ್ಮಾ (50 ಲಕ್ಷ), ರಾಜ್ ಬಾವಾ (2 ಕೋಟಿ), ವೈಭವ್ ಅರೋರಾ (2 ಕೋಟಿ), ಪ್ರೇರಕ್ ಮಂಕಡ್ (20 ಲಕ್ಷ), ಭಾನುಕ ರಾಜಪಕ್ಷ (50 ಲಕ್ಷ), ಬೆನ್ನಿ ಹೊವೆಲ್ (40 ಲಕ್ಷ), ಅಥರ್ವ ತೈಡೆ (20 ಲಕ್ಷ), ನೇಥನ್ ಎಲ್ಲಿಸ್ (75 ಲಕ್ಷ).

ರಾಜಸ್ಥಾನ್ ರಾಯಲ್ಸ್

ತಂಡದಲ್ಲಿ ಉಳಿದುಕೊಂಡವರು: ಸಂಜು ಸ್ಯಾಮ್ಸನ್ (14 ಕೋಟಿ), ಜೋಸ್ ಬಟ್ಲರ್ (10 ಕೋಟಿ), ಯಶಸ್ವಿ ಜೈಸ್ವಾಲ್ (4 ಕೋಟಿ).

ಹರಾಜಿನಲ್ಲಿ ಆಯ್ಕೆಯಾದವರು: ಪ್ರಸಿದ್ಧ ಕೃಷ್ಣ, ಶಿಮ್ರಾನ್ ಹೆಟ್ಮೆಯರ್, ದೇವದತ್ತ ಪಡಿಕ್ಕಲ್, ಯಜುವೇಂದ್ರ ಚಾಹಲ್, ಆರ್. ಅಶ್ವಿನ್, ಟ್ರೆಂಟ್ ಬೌಲ್ಟ್, ಕೆ. ಸಿ. ಕಾರ್ಯಪ್ಪ, ರಿಯಾನ್ ಪರಾಗ್

ಅನುನಯ್ ಸಿಂಗ್ (20 ಲಕ್ಷ), ನವದೀಪ್ ಸೈನಿ (2.60 ಕೋಟಿ), ಒಬೆದ್ ಮೆಕೆ (75 ಲಕ್ಷ), ಕರುಣ್ ನಾಯರ್ (1.40 ಕೋಟಿ), ರಸಿ ವ್ಯಾನ್ ಡರ್ ಡಸೆನ್ (1 ಕೋಟಿ), ಧ್ರುವ ಜುರೆಲ್ (20 ಲಕ್ಷ), ಜೇಮ್ಸ್ ನೀಶಮ್ (1.50 ಕೋಟಿ), ಡೆರಿಲ್ ಮಿಚೆಲ್ (75 ಲಕ್ಷ), ಶುಭಮನ್ ಫರ್ವಾಲ್ (20 ಲಕ್ಷ), ನೇಥನ್ ಕೌಲ್ಟರ್ ನೈಲ್ (2 ಕೋಟಿ), ಕುಲದೀಪ್ ಸೇನ್ (20 ಲಕ್ಷ), ತೇಜಸ್ ಬರೋಕಾ (20 ಲಕ್ಷ).

ರಾಯಲ್ ಚಾಲೆಂಜರ್ಸ್ ಬೆಂಗಳೂರು

ತಂಡದಲ್ಲಿ ಉಳಿದುಕೊಂಡವರು: ವಿರಾಟ್ ಕೊಹ್ಲಿ (15 ಕೋಟಿ), ಗ್ಲೆನ್ ಮ್ಯಾಕ್ಸ್‌ವೆಲ್ (11 ಕೋಟಿ), ಮೊಹಮ್ಮದ್ ಸಿರಾಜ್ (7 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ವಣಿಂದು ಹಸರಂಗಾ, ಹರ್ಷಲ್ ಪಟೇಲ್, ಫಾಫ್ ಡುಪ್ಲೆಸಿ, ದಿನೇಶ್ ಕಾರ್ತಿಕ್, ಜೋಶ್ ಹ್ಯಾಜಲ್‌ವುಡ್, ಶಹಬಾಜ್ ಅಹಮದ್, ಅನುಜ್ ರಾವತ್, ಆಕಾಶದೀಪ್

ಸುಯಶ್ ಪ್ರಭುದೇಸಾಯಿ (30 ಲಕ್ಷ), ಫಿನ್ ಅಲೆನ್ (80 ಲಕ್ಷ), ಮಹಿಪಾಲ್ ಲೊಮ್ರೊರ್ (95 ಲಕ್ಷ), ಶರ್ಫೇನ್ ರುದರ್‌ಫೋರ್ಡ್ (1 ಕೋಟಿ), ಅನೀಶ್ವರ್ ಗೌತಮ್ (20 ಲಕ್ಷ), ಜೇಸನ್ ಬೆಹ್ರನ್‌ಡಾರ್ಫ್ (75 ಲಕ್ಷ), ಚಮಾ ವಿ. ಮಿಲಿಂದ್ (25 ಲಕ್ಷ), ಲುವ್ನಿತ್ ಸಿಸೋಡಿಯಾ (20 ಲಕ್ಷ), ಡೇವಿಡ್ ವಿಲ್ಲಿ (2 ಕೋಟಿ), ಕರ್ಣ ಶರ್ಮಾ (50 ಲಕ್ಷ), ಸಿದ್ಧಾರ್ಥ್ ಕೌಲ್ (75 ಲಕ್ಷ), ಆಕಾಶ್ ದೀಪ್ (20 ಲಕ್ಷ),

ಸನ್‌ರೈಸರ್ಸ್ ಹೈದರಾಬಾದ್

ತಂಡದಲ್ಲಿ ಉಳಿದುಕೊಂಡವರು: ಕೇನ್ ವಿಲಿಯಮ್ಸನ್ (14 ಕೋಟಿ), ಅಬ್ದುಲ್ ಸಮದ್ (4 ಕೋಟಿ), ಉಮ್ರಾನ್ ಮಲಿಕ್ (4 ಕೋಟಿ)

ಹರಾಜಿನಲ್ಲಿ ಆಯ್ಕೆಯಾದವರು: ನಿಕೋಲಸ್ ಪೂರನ್, ವಾಷಿಂಗ್ಟನ್ ಸುಂದರ್, ಭುವನೇಶ್ವರ ಕುಮಾರ್, ಟಿ. ನಟರಾಜನ್, ಪ್ರಿಯಂ ಗರ್ಗ್, ರಾಹುಲ್ ತ್ರಿಪಾಠಿ, ಕಾರ್ತಿಕ್ ತ್ಯಾಗಿ, ಶ್ರೇಯಸ್ ಗೋಪಾಲ್, ಜೆ.ಸುಚಿತ್, ಅಭಿಷೇಕ್ ಶರ್ಮಾ

ಏಡನ್ ಮರ್ಕರಂ (2.60 ಕೋಟಿ), ಶಶಾಂಕ್ ಸಿಂಗ್ (20 ಲಕ್ಷ), ಆರ್. ಸಮರ್ಥ್ (20 ಲಕ್ಷ), ಮಾರ್ಕೊ ಜಾನ್ಸನ್ (4.20 ಕೋಟಿ), ಸೀನ್ ಅಬಾಟ್ (2.40 ಕೋಟಿ), ಸೌರವ್ ದುಬೆ (20 ಲಕ್ಷ), ರೊಮಾರಿಯೊ ಶೆಫರ್ಡ್ (7.75 ಕೋಟಿ), ಗ್ಲೆನ್ ಫಿಲಿಪ್ಸ್ (1.50 ಕೋಟಿ), ವಿಷ್ಣು ವಿನೋದ್ (50 ಲಕ್ಷ), ಫಜಲಾಕ್ ಫಾರೂಕಿ (50 ಲಕ್ಷ)

ಹರಾಜಿನಲ್ಲಿ ಸೆಲೆಬ್ರಿಟಿಗಳ ಸಂಚಲನ

ಹರಾಜು ಪ್ರಕ್ರಿಯೆಯಲ್ಲಿ ಚಿತ್ರನಟರು, ರಾಜಕಾರಣಿಗಳ ಸಂಬಂಧಿಕರು ಸೇರಿದಂತೆ ಪ್ರಮುಖರು ಸಂಚಲನ ಮೂಡಿಸಿದರು. ತಾವು ಪ್ರತಿನಿಧಿಸುವ ಫ್ರಾಂಚೈಸ್‌ಗಳ 'ತಂಡ'ದಲ್ಲಿ ಚರ್ಚಿಸಿ, ಅವಲೋಕನ ನಡೆಸಿ ಆಟಗಾರರನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕೋಲ್ಕತ್ತ ನೈಟ್ ರೈಡರ್ಸ್ ಫ್ರಾಂಚೈಸ್ ಪರವಾಗಿ ನಟ ಶಾರೂಖ್ ಖಾನ್ ಮತ್ತು ಅವರ ಪುತ್ರ ಆರ್ಯನ್ ಖಾನ್ ಇದ್ದರು. ಮುಂಬೈ ಇಂಡಿಯನ್ಸ್‌ನ ಮಾಲಕರಾದ ನೀತಾ ಅಂಬಾನಿ ಹಾಗೂ ಪುತ್ರ ಆಕಾಶ್ ಅಂಬಾನಿ, ಕ್ರಿಕೆಟ್ ಆಪರೇಷನ್ಸ್ ನಿರ್ದೇಶಕ ಜಹೀರ್ ಖಾನ್ ಪಾಲ್ಗೊಂಡಿದ್ದರು.


ಕಾವ್ಯ ಮಾರನ್ —ಟ್ವಿಟರ್ ಚಿತ್ರ

ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸ್ ಮಾಲಕಿ, ಮಾಧ್ಯಮ ಕ್ಷೇತ್ರದ ಉದ್ಯಮಿ ಕಲಾನಿಧೀ ಮಾರನ್ ಪುತ್ರಿ ಕಾವ್ಯ ಮಾರನ್ ಅವರು ಕೂಡ ಮಿಂಚಿದರು. ಆಟಗಾರರ ಖರೀದಿಯಲ್ಲಿ ಕಾವ್ಯ ತೋರಿದ ಪಕ್ವತೆಯನ್ನು ಮೆಚ್ಚಿ, ಸಾಮಾಜಿಕ ತಾಣಗಳಲ್ಲಿ ನೆಟ್ಟಿಗರು ಹರ್ಷ ವ್ಯಕ್ತಪಡಿಸಿದ್ದಾರೆ.

ಅರ್ಜುನ್ ತೆಂಡೂಲ್ಕರ್‌ಗೆ ₹30 ಲಕ್ಷ

ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಪುತ್ರ, ಎಡಗೈ ವೇಗದ ಬೌಲರ್ ಅರ್ಜುನ್ ತೆಂಡೂಲ್ಕರ್ ಅವರನ್ನು ಮುಂಬೈ ಇಂಡಿಯನ್ಸ್ ಫ್ರಾಂಚೈಸ್ ಖರೀದಿಸಿತು. ಹರಾಜಿನ ಮೊದಲ ದಿನವಾದ ಶನಿವಾರ ಅವರನ್ನು ಯಾವ ತಂಡವೂ ಖರೀದಿಸಿರಲಿಲ್ಲ.

ಕಳೆದ ಬಾರಿ ₹ 20 ಲಕ್ಷಕ್ಕೆ ಅವರನ್ನು ಖರೀದಿಸಿದ್ದ ಮುಂಬೈ ಇಂಡಿಯನ್ಸ್ ಈ ಬಾರಿಯೂ ತಮ್ಮಲ್ಲೆ ಉಳಿಸಿಕೊಳ್ಳಲು ಮುಂದಾಯಿತು. ಆದರೆ ಭಾನುವಾರ ಗುಜರಾತ್ ಟೈಟನ್ಸ್ ಕೂಡ ಅರ್ಜುನ್ ಮೇಲೆ ಕಣ್ಣಿಟ್ಟಿತ್ತು. ಮುಂಬೈ ಇಂಡಿಯನ್ಸ್ ₹ 20 ಲಕ್ಷಕ್ಕೆ ಖರೀದಿಸಲು ಬಯಸಿತು. ಅಷ್ಟರಲ್ಲಿ ₹ 25 ಲಕ್ಷ ನೀಡಲು ಗುಜರಾತ್ ಫ್ರಾಂಚೈಸ್ ಮುಂದಾಯಿತು. ಕೊನೆಗೆ ಮುಂಬೈ ಪಾಲಾದರು.


ಅರ್ಜುನ್ ತೆಂಡೂಲ್ಕರ್ ಎಎಫ್‌ಪಿ ಚಿತ್ರ

ಶ್ರೀಶಾಂತ್‌ಗೆ ಕಾಡಿದ ನಿರಾಸೆ: ಸ್ಪಾಟ್ ಫಿಕ್ಸಿಂಗ್ ಹಗರಣದಲ್ಲಿ ಸಿಕ್ಕಿಹಾಕಿಕೊಂಡು ನಿಷೇಧಕ್ಕೆ ಒಳಗಾಗಿದ್ದ ವೇಗದ ಬೌಲರ್ ಶ್ರೀಶಾಂತ್ ಅವರ ಐಪಿಎಲ್‌ಗೆ ಪುನರಾಗಮಿಸುವ ಕನಸು ಕಮರಿ ಹೋಯಿತು. ಅವರನ್ನು ಖರೀದಿಸಲು ಯಾವ ಫ್ರಾಂಚೈಸ್ ಕೂಡ ಮುಂದಾಗಲಿಲ್ಲ. ಅಷ್ಟು ಮಾತ್ರವಲ್ಲ, ಹರಾಜು ಪ್ರಕ್ರಿಯೆಗೆ ಅವರ ಹೆಸರನ್ನೇ ಕರೆಯಲಿಲ್ಲ. 2013ರಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದಲ್ಲಿದ್ದಾಗ ಅವರು ಹಗರಣದಲ್ಲಿ ಸಿಕ್ಕಿದ್ದರು. ನಿಷೇಧ ಮುಗಿದ ಹಿನ್ನೆಲೆಯಲ್ಲಿ ಕಳೆದ ಬಾರಿ ಕೇರಳ ತಂಡದಲ್ಲಿ ಕಣಕ್ಕೆ ಇಳಿದಿದ್ದರು. ಈ ಬಾರಿ ಹರಾಜಿಗೆ ಲಭ್ಯ ಇರುವುದರಿಂದ ಅವರಲ್ಲಿ ನಿರೀಕ್ಷೆ ಮೂಡಿತ್ತು.

ಕರ್ನಾಟಕದ ಬ್ಯಾಟರ್ ಕರುಣ್ ನಾಯರ್ ಅವರನ್ನು ರಾಜಸ್ಥಾನ್ ರಾಯಲ್ಸ್ ಖರೀದಿಸಿತು. ₹ ಒಂದು ಕೋಟಿ 40 ಲಕ್ಷ ಮೊತ್ತಕ್ಕೆ ಅವರನ್ನು ಖರೀದಿಸಲಾಯಿತು.

ಲಖನೌ ಥೈಲಿ ಖಾಲಿ: ಕೇವಲ 21 ಆಟಗಾರರನ್ನು ಖರೀದಿಸಿದರೂ ಲಖನೌ ಸೂಪರ್ ಜೈಂಟ್ಸ್ ಫ್ರಾಂಚೈಸ್‌ನ ಹಣದ ಥೈಲಿ ಖಾಲಿಯಾಗಿದೆ. ಗರಿಷ್ಠ 25 ಆಟಗಾರರ ಖರೀದಿ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್, ಕೋಲ್ಕತ್ತ ನೈಟ್ ರೈಡರ್ಸ್, ಮುಂಬೈ ಇಂಡಿಯನ್ಸ್ ಮತ್ತು ಪಂಜಾಬ್ ಕಿಂಗ್ಸ್ ಕೋಟ್ಯಂತರ ಮೊತ್ತವನ್ನು ಉಳಿಸಿಕೊಂಡಿದೆ.

ವಿಕೆಟ್ ಪಡೆದ ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ 'ಸೂಪರ್' ಗೆಲುವು

ಸಿಡ್ನಿ (ರಾಯಿಟರ್ಸ್/ಎಪಿ): ರೋಚಕ ಅಂತ್ಯ ಕಂಡ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಶ್ರೀಲಂಕಾ ಎದುರು ಜಯ ಗಳಿಸಿತು. ಇಲ್ಲಿ ನಡೆದ ಎರಡನೇ ಟಿ20 ಪಂದ್ಯ ಸೂಪರ್ ಓವರ್‌ನಲ್ಲಿ ಕೊನೆಗೊಂಡಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಜೋಶ್ ಹ್ಯಾಜಲ್‌ವುಡ್ ಅವರ ಅಮೋಘ ಬೌಲಿಂಗ್‌ನಿಂದಾಗಿ ಆಸ್ಟ್ರೇಲಿಯಾ ತಂಡವು ಜಯಭೇರಿ ಬಾರಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಅದಕ್ಕುತ್ತರವಾಗಿ ಶ್ರೀಲಂಕಾ ತಂಡವು ಪಥುಮ್ ನಿಸಾಂಕ (73) ಅವರ ಅಮೋಘ ಅರ್ಧಶತಕ ಬಲದಿಂದ ಸಮಬಲ ಸಾಧಿಸಿತು. ಇದರೊಂದಿಗೆ 5 ಪಂದ್ಯಗಳ ಸರಣಿ ಯಲ್ಲಿ ಆಸ್ಟ್ರೇಲಿಯಾ 2–0 ಮುನ್ನಡೆ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 6ಕ್ಕೆ 164 (ಆ್ಯರನ್ ಫಿಂಚ್ 25, ಜೋಶ್ ಇಂಗ್ಲಿಸ್ 48, ಮಾರ್ಕಸ್ ಸ್ಟೋಯಿನಿಸ್ 19, ಚಾಮಿರಾ 30ಕ್ಕೆ2, ವಣಿಂದು ಹಸರಂಗಾ33ಕ್ಕೆ 2), **ಶ್ರೀಲಂಕಾ:** 20 ಓವರ್‌ಗಳಲ್ಲಿ 8ಕ್ಕೆ164 (ಪಥುಮ್ ನಿಸಾಂಕ 73, ದಸುನ್ ಶನಾಕ 34, ಜೋಶ್ ಹ್ಯಾಜಲ್‌ವುಡ್ 22ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ ಸೂಪರ್ ಓವರ್‌ನಲ್ಲಿ ಜಯ

ಐಎಸ್‌ಎಲ್: ಕೇರಳಕ್ಕೆ ಬೆಂಗಾಲ್ ಸವಾಲು

ವಾಸ್ಕೊ (ಪಿಟಿಐ): ಕಳೆದ ಪಂದ್ಯದಲ್ಲಿ ನಿರಾಸೆ ಅನುಭವಿಸಿರುವ ಕೇರಳ ಬ್ಲಾಸ್ಟರ್ಸ್ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಪುಟಿದೇಳುವ ವಿಶ್ವಾಸದಲ್ಲಿದ್ದು, ಸೋಮವಾರ ಎಸ್‌ಸಿ ಈಸ್ಟ್ ಬೆಂಗಾಲ್ ತಂಡವನ್ನು ಎದುರಿಸಲಿದೆ.

ಪ್ಲೇ ಆಫ್ ಲೆಕ್ಕಾಚಾರದಿಂದ ಬಹುತೇಕ ಹೊರಬಿದ್ದಿರುವ ಎಸ್‌ಸಿ ಈಸ್ಟ್ ಬೆಂಗಾಲ್ ತಂಡವು ಸಮಾಧಾನಕರ ಜಯಕ್ಕಾಗಿ ಪ್ರಯತ್ನಿಸಲಿದೆ.

ಮುಂಬೈಗೆ ಜಯ: ಇಗೊರ್ ಅಂಗುಲೊ ಹಾಗೂ ಬಿಪಿನ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಮುಂಬೈ ಸಿಟಿ ಎಫ್‌ಸಿ ತಂಡವು ಭಾನುವಾರ 4–1ರಿಂದ ಒಡಿಶಾ ಎಫ್‌ಸಿ ಎದುರು ಗೆದ್ದಿತು.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹೈದರಾಬಾದ್ ರೇಸ್

ಬ್ಯಾಲೆರಿನಾ ಗೆಲ್ಲುವ ನಿರೀಕ್ಷೆ

ಡಾರ್ಲಿ ಅರೇಬಿಯನ್ ಮಿಲಿಯನ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ಯಾಲೆರಿನಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.55ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಇನ್ಫಿನೈಟ್ ಎನ್ ಬಿಯಾಂಡ್ 3, ಡೇರಿಂಗ್ ಹಾರ್ಟ್ 2, ವ್ಯಾನ್‌ಗಾರ್ಡ್ 6
2ನೇ ರೇಸ್: ಸಂಟಾನ 4, ಆ್ಯರೋ 8, ನಾಮಿಕಿ 3
3ನೇ ರೇಸ್: ಡೆಲ್ಫಿನಿ 7, ನೋವ 3, ಲೌಬಾಟಿನ್ 4
4ನೇ ರೇಸ್: ಟಿಗ್ರಿಯೊ 3, ಎಕ್ಸಾಟಿಕ್ 12, ಟಾಪ್‌ಸ್ನಾಚ್ 3
5ನೇ ರೇಸ್: ರೈಸಿನಾ ಸ್ಟಾರ್ 2, ಸೋಸಿಯಲ್ ಟ್ರೂಥ್ 1, ಬಿಗ್ ಬ್ರೌನ್ 3
6ನೇ ರೇಸ್: ಪ್ರಿನ್ಸ್ ಸತ್ಸುಮಾ 2, ಸಿಟಾರ 6, ಆವ್‌ಸಮ್ ಒನ್ 1
7ನೇ ರೇಸ್: ಕಮಿಲಾ 10, ಸೀ ಆಫ್ ಲಯನ್ 7, ಅಲಾಸ್ಟೇರ್ 1
8ನೇ ರೇಸ್: ಅಮೆಜೋನಿಯಾ 4, ಸನ್ ಗೋಲ್ಡ್ 12, ರೀಜೆನ್ಸಿ ಗೋಲ್ಡ್ 8

ಉತ್ತಮ ಬೆಟ್: ಸೆನ್ಸಿಬಿಲಿಟಿ

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
1,2,3	3,4,5	6,7,8

ಬೆಂಗಳೂರು ಓಪನ್ ಟೆನಿಸ್ ಟೂರ್ನಿ: ಕ್ರೊವೇಷ್ಯಾದ ಬೋರ್ನ ಗೋಜೊಗೆ ನಿರಾಸೆ

ಚುನ್ ಸಿನ್ ಚಾಂಪಿಯನ್

• ವಿಕ್ರಂ ಕಾಂತಿಕೆರೆ

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಚುನ್ ಸಿನ್ ಸೆಂಗ್ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

ಬೆಂಗಳೂರು: ಚುರುಕಿನ ಪಾದಚಲನೆ ಮತ್ತು ನಿಖರ ಶಾಟ್‌ಗಳ ಮೂಲಕ ಮಿಂಚಿದ ಚೀನಾ ತೈಪೆಯ ಚುನ್ ಸಿನ್ ಸೆಂಗ್, ಉದ್ಯಾನ ನಗರಿಯ ಟೆನಿಸ್ ಪ್ರಿಯರನ್ನು ಮುದಗೊಳಿಸಿದರು. ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆವರಣದಲ್ಲಿ ಭಾನುವಾರ ಒಂದು ತಾಸು 44 ನಿಮಿಷ ನಡೆದ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಚುನ್ ಸಿನ್ 6-4, 7-5ರಲ್ಲಿ ಕ್ರೊವೇಷ್ಯಾದ ಬೋರ್ನ ಗೋಜೊ ಅವರನ್ನು ಮಣಿಸಿದರು. 20 ವರ್ಷದ ಚುನ್ ಸಿನ್ ಗೆದ್ದ ಎರಡನೇ ಎಟಿಪಿ ಟ್ರೋಫಿ ಇದು.

ಬ್ಯಾಕ್‌ಹ್ಯಾಂಡ್ ಸ್ಲೈಜ್ ಮತ್ತು ಬಲಶಾಲಿ ಫೋರ್‌ಹ್ಯಾಂಡ್ ಶಾಟ್‌ಗಳ ಮೂಲಕ ಮಿಂಚಿದ ತೈಪೆ ಆಟಗಾರನ ಎದುರು ಕ್ರೊವೇಷ್ಯಾ ಆಟಗಾರ ಸಪ್ಪೆಯಾದರು. ಎಟಿಪಿ ಟೂರ್ನಿಯೊಂದರಲ್ಲಿ ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದ ಗೋಜೊ ಮಿಂಚಿನ ಏಸ್‌ಗಳ ಮೂಲಕ ಕೆಲವು ಪಾಯಿಂಟ್‌ಗಳನ್ನು ಕಲೆಹಾಕಿದರೂ ಸ್ವಯಂ ತಪ್ಪುಗಳಿಂದಾಗಿ ಪಾಯಿಂಟ್‌ಗಳನ್ನು ಕಳೆದುಕೊಂಡರು.

ಚುನ್ ಸಿನ್ ಮೊದಲ ಸೆಟ್ ಗೆದ್ದು ಸಂಭ್ರಮಿಸಿದಾಗ ಅಂಗಣದಲ್ಲಿ ಕೃತಕ ಬೆಳಕಿನ 'ಹೊನಲು' ಹರಿಯಿತು. ಎರಡನೇ ಸೆಟ್‌ನ ಆರಂಭದಲ್ಲಿ ಚುನ್ ಸಿನ್ ಎರಡು ಗೇಮ್‌ಗಳನ್ನು ಗೆದ್ದು ಸುಲಭ ಜಯದತ್ತ ಹೆಜ್ಜೆ ಹಾಕಿದರು. ಆದರೆ ತಂತ್ರಗಳನ್ನು ಬದಲಿಸಿದ ಗೋಜೊ ತಿರುಗೇಟು ನೀಡಿದರು. ಕ್ರಾಸ್ ಕೋರ್ಟ್ ಡ್ರಾಪ್ ಶಾಟ್‌ಗಳ ಮೂಲಕ ಮಿಂಚಿದ ಅವರು ಶರವೇಗದಲ್ಲಿ ಸತತ ಐದು ಗೇಮ್ ಗೆದ್ದುಕೊಂಡರು.

ಚುನ್ ಸಿನ್ ಎದೆಗುಂದಲಿಲ್ಲ. ಸತತ ಮೂರ ಗೇಮ್‌ಗಳನ್ನು ಗೆದ್ದು ಪ್ರೇಕ್ಷಕರನ್ನು ಸಂಭ್ರಮದ ಅಲೆಯಲ್ಲಿ ತೇಲಿಸಿದರು. ಡಬಲ್ ಫಾಲ್ಟ್‌ಗಳಿಂದಾಗಿ ಒಂಬತ್ತನೇ ಗೇಮ್‌ನಲ್ಲಿ ಸರ್ವ್ ಕಳೆದುಕೊಂಡ ಗೋಜೊ 11ನೇ ಗೇಮ್‌ನಲ್ಲೂ ಅದೇ ತಪ್ಪು ಮುಂದುವರಿಸಿದರು. ಇದು ಚುನ್ ಸಿನ್ ಅವರ ಗೆಲುವಿನ ಓಟವನ್ನು ಸುಲಭವಾಗಿಸಿತು.

ಎರಡನೇ ಸುತ್ತು ಪ್ರವೇಶಿಸಿದ ನಿತಿನ್, ಶ್ರೀರಾಮ್

ನಿತಿನ್ ಕುಮಾರ್ ಸಿನ್ಹಾ ಮತ್ತು ಎನ್.ಶ್ರೀರಾಮ್ ಬಾಲಾಜಿ ಅವರು ಬೆಂಗಳೂರು ಓಪನ್–2 ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಜಯ ಗಳಿಸಿ ಎರಡನೇ ಸುತ್ತು ಪ್ರವೇಶಿಸಿದರು. ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ನಿತಿನ್ ಕುಮಾರ್ ಜರ್ಮನಿಯ ಕಾಯ್ ವೆರ್ನೆಟ್ ವಿರುದ್ಧ 3-6,7-7 (9), 6-3ರಲ್ಲಿ ಗೆದ್ದರು. ಶ್ರೀರಾಮ್ ಬಾಲಾಜಿ ಬ್ರೆಜಿಲ್‌ನ ಗ್ಯಾಬ್ರಿಯಲ್ ಡಿಕಾಮ್ಸ್ ಎದುರು 4-6, 6-1, 6-4ರಲ್ಲಿ ಜಯ ಗಳಿಸಿದರು. ಮುಖ್ಯ ಸುತ್ತಿನ ಪಂದ್ಯಗಳು ಸೋಮವಾರದಿಂದ ನಡೆಯಲಿವೆ.

ಅರ್ಹತಾ ಸುತ್ತಿನ ಮೊದಲ ದಿನದ ಫಲಿತಾಂಶಗಳು: ಭಾರತದ ಮುಕುಂದ್ ಶಶಿಕುಮಾರ್‌ಗೆ ಅಭಿನವ್ ಷಣ್ಮುಖಂ ಎದುರು 6-2, 6-3ರಲ್ಲಿ ಜಯ; ಭಾರತದ ಮನೀಷ್ ಸುರೇಶ್ ಕುಮಾರ್‌ಗೆ ಖುಷಿ ರೆಡ್ಡಿ ಎದುರು 6-1, 6-0ಯಿಂದ ಗೆಲುವು; ಆಸ್ಟ್ರೇಲಿಯಾದ ಆ್ಯಂಡ್ರ್ಯೂ ಹ್ಯಾರಿಸ್‌ಗೆ ಭಾರತದ ಪ್ರಜ್ವಲ್ ದೇವ್ ವಿರುದ್ಧ 6-2 7-6 (4)ರಲ್ಲಿ, ಭಾರತದ ದಿಗ್ವಿಜಯ್ ಪ್ರತಾಪ್‌ಗೆ ಆಸ್ಟ್ರೇಲಿಯಾದ ಥಾಮಸ್ ಫ್ಯಾನ್‌ಕಟ್ ಎದುರು 4-6, 7-5, 6-2ರಲ್ಲಿ, ಜಪಾನ್‌ನ ರಿಯೊ ನೊಗುಚಿಗೆ ಭಾರತದ ಸೂರಜ್ ಪ್ರಬೋಧ್ ವಿರುದ್ಧ 6-1, 7-6 (2)ರಲ್ಲಿ, ಭಾರತದ ನಿತಿನ್ ಕುಮಾರ್ ಸಿನ್ಹಾಗೆ ಜರ್ಮನಿಯ ಕಾಯ್ ವೆಹ್ನೆಟ್ ವಿರುದ್ಧ 3-6,7-7 (9), 6-3ರಲ್ಲಿ, ರಷ್ಯಾದ ಬೋಗ್ದನ್ ಬೊಬ್ರೊವ್‌ಗೆ ಜಪಾನ್‌ನ ತೊಶಿಹಿಡೆ ಮಸುಹಿ ವಿರುದ್ಧ 5-0ಯಿಂದ (ನಿವೃತ್ತಿ) ಗೆಲುವು; ಜೆಕ್ ಗಣರಾಜ್ಯದ ಡಾಮಿನಿಕ್ ಪಲನ್‌ಗೆ ಆಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್ ವಿರುದ್ಧ 7-6 (3), 4-6, 6-3ರಲ್ಲಿ, ಭಾರತದ ಶ್ರೀರಾಮ್ ಬಾಲಾಜಿಗೆ ಬ್ರೆಜಿಲ್‌ನ ಗ್ಯಾಬ್ರಿಯೆಲ್ ಡಿಕ್ಯಾಮ್ಸ್ ವಿರುದ್ಧ 4-6, 6-1, 6-4ರಲ್ಲಿ, ಗ್ರೀಸ್‌ನ ಮಾರ್ಕೊಸ್ ಕಲವೆಲೊನಿಸ್‌ಗೆ ಜೆಕ್ ಗಣರಾಜ್ಯದ ಜರಸ್ಲೊವ್ ಪೊಪಿಸಿಲ್ ಎದುರು 6-4, 3-6, 6-3ರಲ್ಲಿ, ಉಕ್ರೇನ್‌ನ ವ್ಲಾಡಿಸ್ಲಾವ್ ಒರ್ಲೊವ್‌ಗೆ ಧೀರಜ್ ಶ್ರೀನಿವಾಸನ್ ವಿರುದ್ಧ 6-0, 6-1ರಲ್ಲಿ, ಸ್ವಿಟ್ಜರ್ಲೆಂಡ್‌ನ ಆ್ಯಂಟೊಯ್ನ್ ಬೆಲಿಯರ್‌ಗೆ ಭಾರತದ ಕರಣ್ ಸಿಂಗ್ ವಿರುದ್ಧ 7-5, 6-3ರಲ್ಲಿ ಜಯ.

ಪ್ರವಾಸೋದ್ಯಮ ಇಲಾಖೆ ಬೆಂಬಲ

ಈ ವರೆಗಿನ ನಾಲ್ಕು ಆವೃತ್ತಿಗಳಿಗೆ ಬೆಂಬಲ ನೀಡಿರುವ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಓಪನ್‌ನ ಮುಂದಿನ ಐದು ಆವೃತ್ತಿಗಳಿಗೂ ಕೈಜೋಡಿಸಲು ಮುಂದಾಗಿರುವುದಾಗಿ ಸಂಘಟಕರು ತಿಳಿಸಿದ್ದಾರೆ.

ಆರಿಫ್ ಖಾನ್‌ಗೆ 45ನೇ ಸ್ಥಾನ

ಚಳಿಗಾಲದ ಒಲಿಂಪಿಕ್ಸ್: ಭಾರತದ ಏಕೈಕ ಅಥ್ಲೀಟ್

ಬೀಜಿಂಗ್ (ಪಿಟಿಐ/ರಾಯಿಟರ್ಸ್): ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಏಕೈಕ ಕ್ರೀಡಾಪಟು ಆಲ್ಪೈನ್ ಸ್ಕೀಯರ್ ಆರಿಫ್ ಖಾನ್ ಅವರು ಜೈಂಟ್ ಸ್ಲಲೋಮ್‌ನಲ್ಲಿ 45ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲ ಜಿಲ್ಲೆಯವರಾದ 31 ವರ್ಷದ ಆರಿಫ್ ಎರಡು ರೇಸ್‌ಗಳಲ್ಲಿ ಒಟ್ಟಾರೆ ಎರಡು ತಾಸು 47 ನಿಮಿಷ 24 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಯಾಂಗಿಂಗ್ ರಾಷ್ಟ್ರೀಯ ಆಲ್ಪೈನ್ ಸ್ಕೀಯಿಂಗ್ ಕೇಂದ್ರದಲ್ಲಿ ಭಾನುವಾರ ನಡೆದ ಸ್ಪರ್ಧೆಯಲ್ಲಿ ಪಾಲ್ಗೊಂಡವರು ಪ್ರತಿಕೂಲ ಹವಾಮಾನದಿಂದಾಗಿ ಅತ್ಯಂತ ಕಠಿಣ ಸವಾಲು ಎದುರಿಸಬೇಕಾಯಿತು. ಮೊದಲನೇ ರೇಸ್‌ನಲ್ಲಿ ಆರಿಫ್ 53ನೇ ಸ್ಥಾನ ಗಳಿಸಿದರು. 33 ಮಂದಿಗೆ ರೇಸ್ ಪೂರ್ಣಗೊಳಿಸಲು ಆಗಲಿಲ್ಲ. ಇಬ್ಬರು ಆರಂಭಿಸಲಾಗದೇ ಹಿಂದೆ ಉಳಿದರು. ಹವಾಮಾನ ವೈಪರೀತ್ಯದಿಂದಾಗಿ ನಾಲ್ಕು ತಾಸು ವಿಳಂಬವಾಗಿ ಆರಂಭಗೊಂಡ ಎರಡನೇ ರೇಸ್‌ನಲ್ಲಿ ಆರಿಫ್ 44ನೇ ಸ್ಥಾನ ಗಳಿಸಿದರು. ಒಂಬತ್ತು ಮಂದಿಗೆ ಪೂರ್ಣಗೊಳಿಸಲು ಆಗಲಿಲ್ಲ. ಆರಿಫ್ ಒಟ್ಟಾರೆ ತೆಗೆದುಕೊಂಡ ಕಾಲದ ಆಧಾರದಲ್ಲಿ 45ನೇ ಸ್ಥಾನ ನೀಡಲಾಯಿತು. ಸ್ವಿಟ್ಜರ್ಲೆಂಡ್‌ನ ಮಾರ್ಕೊ ಒಡೆರ್ಮಟ್ (2:09.35) ಚಿನ್ನ ಗೆದ್ದುಕೊಂಡರು. ಸ್ಲೊವೇನಿಯಾದ ಜನ್ ಕ್ರಂಜೆಕ್ (2:09.54) ಮತ್ತು ಫ್ರಾನ್ಸ್‌ನ ಮ್ಯಾಥ್ಯೂ ಫೈವರ್ (2:10.69) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿದರು.

ಆಲ್ಪೈನ್ ಸ್ಕೀಯಿಂಗ್‌ನ ಪುರುಷರ ಜೈಂಟ್ ಸ್ಲಲೋಮ್‌ನ ಒಂದನೇ ರೇಸ್‌ನಲ್ಲಿ ಭಾರತದ ಆರಿಫ್ ಖಾನ್ ಮುನ್ನುಗ್ಗಿದ ಪರಿ –ರಾಯಿಟರ್ಸ್ ಚಿತ್ರ

ಮಾರ್ಟೆ ಒಲ್ಸ್‌ಬುಗೆ ಚಿನ್ನದ ಸಂಭ್ರಮ

ಮತ್ತೊಮ್ಮೆ ಅಮೋಘ ಶೂಟಿಂಗ್ ಮೂಲಕ ಮಿಂಚಿದ ಮಾರ್ಟೆ ಒಲ್ಸ್‌ಬು ರೊಯಿಸ್‌ಲ್ಯಾಂಡ್ ಮೂರನೇ ಚಿನ್ನದ ಪದಕ ಗೆದ್ದು ಸಂಭ್ರಮಿಸಿದರು. ಈ ಮೂಲಕ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ನಾರ್ವೆಗೆ ಮತ್ತೊಂದು ಪದಕದ ಕಾಣಿಕೆ ನೀಡಿದರು.

ಜಾಂಗ್ಜಿಯಾಕೊದ ರಾಷ್ಟ್ರೀಯ ಬಯಾಥ್ಲಾನ್ ಕೇಂದ್ರದಲ್ಲಿ ಭಾನುವಾರ ನಡೆದ ಬಯಾಥ್ಲಾನ್‌ನ 10 ಕಿಮೀ ಪರ್ಸ್ಯೂಟ್ ರೇಸ್‌ನಲ್ಲಿ ಅವರು ಮೊದಲಿಗರಾದರು. ನಾರ್ವೆಯವರೇ ಆದ ತಿರಿಲ್ ಎಕೋಫ್ ಕಂಚಿನ ಪದಕ ಗೆದ್ದುಕೊಂಡರು. ಬೆಳ್ಳಿ ಪದಕ ಸ್ವೀಡನ್‌ನ ಯುವ ಅಥ್ಲೀಟ್ ಎಲ್ವಿರಾ ಒಯ್‌ಬರ್ಗ್ ಅವರ ಪಾಲಾಯಿತು. ಎಲ್ವಿರಾ ಅವರಿಗೆ 48 ತಾಸಿನಲ್ಲಿ ಲಭಿಸಿದ ಎರಡನೇ ಬೆಳ್ಳಿ ಪದಕ ಇದಾಗಿದೆ.

ಮಾನವ ನಿರ್ಮಿತ ಕೋರ್ಸ್‌ನ ಬಹುತೇಕ ಭಾಗದಲ್ಲಿ ದಟ್ಟ ಮಂಜು ಕವಿದಿತ್ತು. ಹೀಗಾಗಿ ಸ್ಪರ್ಧಾಳುಗಳು ಕಠಿಣ ಸವಾಲು ಎದುರಿಸಬೇಕಾಗಿತ್ತು. ಇದನ್ನು ಮೀರಿ ನಿಂತ ರೊಯಿಸ್‌ಲ್ಯಾಂಡ್ ಆರಂಭದಿಂದಲೇ ಉತ್ತಮ ಸಾಮರ್ಥ್ಯ ತೋರುತ್ತ ಬಂದರು. ಮೊದಲ ಐದು ಶಾಟ್‌ಗಳನ್ನು ಉತ್ತಮವಾಗಿಯೇ ನಿರ್ವಹಿಸಿದರು. ಒಯ್‌ಬರ್ಗ್ ಅವರು ಮಾಡಿದ ತಪ್ಪಿನಿಂದಾಗಿ ದೊರೊಥಿಯಾ ವೀರರ್ ಆರಂಭದಲ್ಲಿ ಕೊಂಚ ಮುನ್ನಡೆ ಸಾಧಿಸಿ ಭರವಸೆ ಮೂಡಿಸಿದರು. ನಂತರ ಒಯ್‌ಬರ್ಗ್ ಚೇತರಿಸಿಕೊಂಡರು.

ಎದುರಾಳಿಗಳು ಪರಸ್ಪರ ಪೈಪೋಟಿ ನಡೆಸುತ್ತಿರುವಾಗ ರೊಯಿಸ್‌ಲ್ಯಾಂಡ್ ಏಕಾಗ್ರತೆಯಿಂದ ಮುಂದೆ ಸಾಗಿದರು.

ಪ್ರೊ ಕಬಡ್ಡಿ ಲೀಗ್: ಹರಿಯಾಣ ಸ್ಟೀಲರ್ಸ್‌ಗೆ ಮಣಿದ ಯು ಮುಂಬಾ ತಂಡ

ಬೆಂಗಳೂರು ಬುಲ್ಸ್ ಜಯಭೇರಿ

ಬೆಂಗಳೂರು: ಭರತ್ ಮತ್ತು ನಾಯಕ ಪವನ್ ಶೆರಾವತ್ ಅವರ ಅಮೋಘ 'ಸೂಪರ್ ಟೆನ್' ಸಾಧನೆಯ ಬಲದಿಂದ ಬೆಂಗಳೂರು ಬುಲ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಭಾನುವಾರ ಭರ್ಜರಿ ಜಯ ಸಾಧಿಸಿತು.

ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಭಾನುವಾರದ ಪಂದ್ಯದಲ್ಲಿ ಬುಲ್ಸ್ 45–37ರಲ್ಲಿ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿತು. ಒಂದು ಬೋನಸ್ ಪಾಯಿಂಟ್ ಸೇರಿದಂತೆ ಭರತ್ 15 ಪಾಯಿಂಟ್ ಕಲೆ ಹಾಕಿದರೆ ಪವನ್ 10 ಟಚ್ ಪಾಯಿಂಟ್‌ಗಳ ಮೂಲಕ ಮಿಂಚಿದರು. ಜೈಪುರ ಪಿಂಕ್ ಪ್ಯಾಂಥರ್ಸ್ ಅರ್ಜುನ್ ದೇಶ್ವಾಲ್ ಒಬ್ಬರೇ ಮಿಂಚಿದರು. ಅವರು ನಾಲ್ಕು ಬೋನಸ್ ಪಾಯಿಂಟ್ ಸೇರಿದಂತೆ 16 ಪಾಯಿಂಟ್ ಕಲೆ ಹಾಕಿದರು. ದೀಪಕ್ ಹೂಡಾ ಆರು ಪಾಯಿಂಟ್ ಗಳಿಸಿದರು. ಈ ಜಯದೊಂದಿಗೆ ಬುಲ್ಸ್ ತಂಡದಲ್ಲಿ ಪ್ಲೇ ಆಫ್ ಹಂತದ ಕನಸು ಚಿಗುರಿದೆ.

ಪಂದ್ಯದ ಆರಂಭದಲ್ಲಿ ಜೈಪುರ್ ಆಧಿಪತ್ಯ ಸ್ಥಾಪಿಸಿತ್ತು. ಡಿಫೆಂಡರ್‌ಗಳು ತಂಡಕ್ಕೆ ಪಾಯಿಂಟ್‌ಗಳನ್ನು ತಂದು ಕೊಟ್ಟರು. ಮೊದಲ ರೇಡ್‌ನಲ್ಲೇ ಸಂದೀಪ್ ಧೂಳ್ ಅವರು ಪವನ್ ಅವರನ್ನು ಟ್ಯಾಕಲ್ ಮಾಡಿದರು. ಆದರೆ ನಂತರ ಪವನ್ ಸಹಜ ಆಟದ ಮೂಲಕ ಮಿಂಚಿದರು.

ಸ್ಟೀಲರ್ಸ್, ಗುಜರಾತ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡವನ್ನು ಹರಿಯಾಣ ಸ್ಟೀಲರ್ಸ್ 37–26ರಲ್ಲಿ ಮಣಿಸಿತು. ಹರಿಯಾಣ ಪರವಾಗಿ ವಿಕಾಸ್ ಖಂಡೋಲ 14 ಮತ್ತು ಆಶೀಶ್ 13 ಪಾಯಿಂಟ್ ಗಳಿಸಿದರು. ಯು ಮುಂಬಾಗಾಗಿ ಅಭಿಷೇಕ್ ಸಿಂಗ್ 10 ಮತ್ತು ಅಜಿತ್ 7 ಪಾಯಿಂಟ್ ತಂದುಕೊಟ್ಟರು.

ಮೂರನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡ ಯು.ಪಿ ಯೋಧಾವನ್ನು 38–31ರಲ್ಲಿ ಮಣಿಸಿತು. ಗುಜರಾತ್ ಪರ ಅಜಯ್ ಕುಮಾರ್ ಮತ್ತು ಗಿರೀಶ್ ಮಾರುತಿ ತಲಾ ಆರು, ಪ್ರದೀಪ್ ಕುಮಾರ್ ಐದು ಪಾಯಿಂಟ್ ಗಳಿಸಿದರೆ ಯೋಧಾ ಪರ ಪ್ರದೀಪ್ ನರ್ವಾಲ್ 12 ಪಾಯಿಂಟ್ ಗಳಿಸಿದರು.

ಬೆಂಗಳೂರು ಬುಲ್ಸ್ ತಂಡದ ಭರತ್ ಪಾಯಿಂಟ್ ಗಳಿಸಲು ಮುಂದಾದ ಕ್ಷಣ

ಇಂದಿನ ಪಂದ್ಯ (ರಾತ್ರಿ)

ಪಟ್ನಾ ಪೈರೇಟ್ಸ್ Vs ತೆಲುಗು ಟೈಟನ್ಸ್ 7.30
ದಬಂಗ್ ಡೆಲ್ಲಿ – ಯುಪಿ ಯೋಧಾ 8.30
ಗುಜರಾತ್ ಜೈಂಟ್ಸ್ – ಪುಣೇರಿ ಪಲ್ಟನ್ 9.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	18	13	4	1	70
ದಬಂಗ್ ಡೆಲ್ಲಿ	19	10	5	4	65
ಹರಿಯಾಣ ಸ್ಟೀಲರ್ಸ್	20	10	7	3	63
ಬೆಂಗಳೂರು ಬುಲ್ಸ್	20	10	8	2	60
ಯು ಪಿ ಯೋಧಾ	20	8	9	3	58
ಗುಜರಾತ್ ಜೈಂಟ್ಸ್	19	8	8	3	54
ಯು ಮುಂಬಾ	19	7	7	5	53
ಪುಣೇರಿ ಪಲ್ಟನ್	18	10	8	-	52
ಜೈಪುರ ಪಿಂಕ್ ಪ್ಯಾಂಥರ್ಸ್	19	8	9	2	52
ತಮಿಳ್ ತಲೈವಾಸ್	19	5	8	6	47
ಬೆಂಗಾಲ್ ವಾರಿಯರ್ಸ್	20	7	10	3	47
ತೆಲುಗು ಟೈಟನ್ಸ್	19	1	14	4	27

(ಭಾನುವಾರದ ಪಂದ್ಯಗಳ ಅಂತ್ಯಕ್ಕೆ)

ವಾಲಿಬಾಲ್: ಬ್ಲ್ಯಾಕ್‌ಹಾಕ್ಸ್ ಜಯಭೇರಿ

ಹೈದರಾಬಾದ್: ಹೈದರಾಬಾದ್ ಬ್ಲ್ಯಾಕ್ ಹಾಕ್ಸ್ ತಂಡವು ಇಲ್ಲಿ ನಡೆಯುತ್ತಿರುವ ಪ್ರೈಮ್ ವಾಲಿಬಾಲ್ ಲೀಗ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬ್ಲ್ಯಾಕ್ ಹಾಕ್ಸ್ ತಂಡವು 15–14, 15–11, 15–14, 15–7, 15–13 ರಿಂದ ಚೆನ್ನೈ ಬ್ಲಿಟ್ಜ್ ತಂಡದ ಎದುರು ಜಯಿಸಿತು.

ಹೈದರಾಬಾದ್ ತಂಡದಲ್ಲಿ ಅಮೋಘವಾಗಿ ಆಡಿದ ಎಸ್‌.ವಿ. ಗುರುಪ್ರಶಾಂತ್ ಅವರಿಗೆ ಪಂದ್ಯಶ್ರೇಷ್ಠ ಗೌರವ ಒಲಿಯಿತು.

ಚೆನ್ನೈ ತಂಡಕ್ಕೆ ನವೀನ್ ರಾಜಾ ಜೇಕಬ್ ಮತ್ತು ಬ್ರುನೊ ಡಿಸಿಲ್ವಾ ಅವರು ಉತ್ತಮ ಆರಂಭ ನೀಡಿದ್ದರು. 6–2ರ ಮುನ್ನಡೆ ಗಳಿಸಿತ್ತು. ಆದರೆ ಗುರು ಪ್ರಶಾಂತ್ ಅವರ ಚುರುಕಿನ ಆಟದಿಂದಾಗಿ ಹೈದರಾಬಾದ್ ಮುನ್ನಡೆ ಸಾಧಿಸಿತು.

ಫುಟ್‌ಬಾಲ್: ಹಿರಿಯ ಆಟಗಾರ ಪಾಪಣ್ಣ ನಿಧನ


ಎನ್‌.ಪಾಪಣ್ಣ

ಮೈಸೂರು: ಅಂತರರಾಷ್ಟ್ರೀಯ ಫುಟ್‌ಬಾಲ್ ಆಟಗಾರ ಮೈಸೂರು ಎನ್‌.ಪಾಪಣ್ಣ (78) ವಿದ್ಯಾರಣ್ಯಪುರಂನ ತಮ್ಮ ನಿವಾಸದಲ್ಲಿ ಭಾನುವಾರ ನಿಧನರಾದರು. ಅವರಿಗೆ ಪತ್ನಿ ಇದ್ದಾರೆ. ವಿದ್ಯಾರಣ್ಯಪುರಂನ ರುದ್ರಭೂಮಿಯಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಹಿಂದಿನ ಮೈಸೂರು ರಾಜ್ಯ ತಂಡ, ರಾಷ್ಟ್ರೀಯ ತಂಡ ಹಾಗೂ ಕೋಲ್ಕತ್ತದ ಮೊಹಮ್ಮದನ್ ಸ್ಪೋರ್ಟಿಂಗ್ ತಂಡಗಳನ್ನು ಅವರು ಪ್ರತಿನಿಧಿಸಿದ್ದಾರೆ. 1968ರಲ್ಲಿ ಕ್ವಾಲಾಲಂಪುರದಲ್ಲಿ ನಡೆದಿದ್ದ ಮೆರ್ಡೆಕಾ ಕಪ್ ಟೂರ್ನಿಯಲ್ಲಿ ಭಾರತ ತಂಡದಲ್ಲಿ ಆಡಿದ್ದರು. ಅಲಹಾಬಾದ್‌ನಲ್ಲಿ ನಡೆದಿದ್ದ ಚೊಚ್ಚಲ ರಾಷ್ಟ್ರೀಯ ಜೂನಿಯರ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮೈಸೂರು ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು. ಸಂತೋಷ್ ಟ್ರೋಫಿ, ಡುರಾಂಡ್ ಕಪ್, ರೋವರ್ಸ್ ಕಪ್, ಡಿಸಿಎಂ ಟ್ರೋಫಿ ಮತ್ತು ಐಎಫ್‌ಎ ಶೀಲ್ಡ್ ಟೂರ್ನಿಗಳಲ್ಲಿ ಮೊಹಮ್ಮಡನ್ ಕ್ಲಬ್ ಪರ ಆಡಿದ್ದರು. ಹೆಡರ್ ಮೂಲಕ ಗೋಲು ಗಳಿಸುವುದರಲ್ಲಿ ಪಳಗಿದ್ದ ಅವರು, ಮೈಸೂರಿನಲ್ಲಿ ಐಡಿಯಲ್ ಜಾವಾ ಫ್ಯಾಕ್ಟರಿ ತಂಡಗಳನ್ನು ಪ್ರತಿನಿಧಿಸಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪೌಷ್ಟಿಕ ಆಹಾರ ಸೇವಿಸಿ

ಉಕ್ರೇನ್–ರಷ್ಯಾ ಬಿಕ್ಕಟ್ಟು: ರಾಜತಾಂತ್ರಿಕ ಪರಿಹಾರ ಈಗಲೂ ಮುಕ್ತ– ಅಮೆರಿಕ

ಜೋ ಬೈಡನ್ ಹಾಗೂ ವ್ಲಾಡಿಮಿರ್ ಪುಟಿನ್

ಹೊನಲುಲು/ಡಾನೆಸ್ಕ್ (ಉಕ್ರೇನ್): ಉಕ್ರೇನ್‌ನೊಂದಿಗಿನ ಸಂಘರ್ಷವನ್ನು ರಾಜತಾಂತ್ರಿಕ ಮಾರ್ಗದ ಮೂಲಕ ಬಗೆಹರಿಸಿಕೊಳ್ಳಲು ಈಗಲೂ ಅವಕಾಶ ಇದೆ. ಈ ಬಗ್ಗೆ ರಷ್ಯಾ ಯೋಚಿಸಬೇಕು ಎಂದು ಅಮೆರಿಕ ಹೇಳಿದೆ.

'ಉಕ್ರೇನ್ ಮೇಲೆ ರಷ್ಯಾ ನಡೆಸುವ ದಾಳಿ ವ್ಯಾಪಕ ಹಿಂಸೆ–ತೊಂದರೆಗೆ ಕಾರಣವಾಗುತ್ತದೆ. ಜಾಗತಿಕವಾಗಿ ನೀವು ಪ್ರತ್ಯೇಕತೆ ಎದುರಿಸಬೇಕಾಗುತ್ತದೆ' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್‌ಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಉಭಯ ದೇಶಗಳ ನಡುವಿನ ಸಂಘರ್ಷ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್, 'ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ, ನಮ್ಮ ರಾಯಭಾರ ಕಚೇರಿ ಸಿಬ್ಬಂದಿಯನ್ನು ಕೀವ್‌ನಿಂದ ವಾಪಸು ಕರೆಸಿಕೊಳ್ಳುವುದು ಅನಿವಾರ್ಯವಾಗಲಿದೆ' ಎಂದು ಹೇಳಿದ್ದಾರೆ.

ಅಮೆರಿಕದ ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ಪುಟಿನ್, 'ಇಂಥ ಹೇಳಿಕೆಗಳು ಮಾನಸಿಕ ಅಸಮತೋಲನವನ್ನು ತೋರಿಸುತ್ತವೆ' ಎಂದಿದ್ದಾರೆ.

ಉಕ್ರೇನ್ ಮೇಲೆ ದಾಳಿ ನಡೆಸುವ ಯೋಜನೆ ಇಲ್ಲ ಎಂದು ರಷ್ಯಾ ಪದೇಪದೇ ಹೇಳುತ್ತಿದೆ. ತನ್ನದೇನಿದ್ದರೂ ನ್ಯಾಟೊ ಮಿತ್ರ ರಾಷ್ಟ್ರಗಳ ಆಕ್ರಮಣಶೀಲತೆಗೆ ಪ್ರತಿಕ್ರಿಯೆ ಅಷ್ಟೆ ಎಂದಿದೆ.

ಸಂಕ್ಷಿಪ್ತ ಸುದ್ದಿ

ನೇಪಾಳ: ಮುಖ್ಯ ನ್ಯಾಯಮೂರ್ತಿ ವಿರುದ್ಧ ದೋಷಾರೋಪ

ಕಠ್ಮಂಡು: ಭ್ರಷ್ಟಾಚಾರದ ಆರೋಪದ ಮೇಲೆ ನೇಪಾಳದ ಮುಖ್ಯನ್ಯಾಯಮೂರ್ತಿ ಚೋಳೇಂದ್ರ ಷಂಷೇರ್ ಜೆಬಿ ರಾಣಾ ಅವರ ವಿರುದ್ಧ ಆಡಳಿತಾರೂಢ ಶಾಸಕರು ಭಾನುವಾರ ದೋಷಾರೋಪ ನಿರ್ಣಯ ಮಂಡಿಸಿದ್ದಾರೆ.

ಭಾನುವಾರ ಬೆಳಿಗ್ಗೆ 11 ಗಂಟೆಗೆ ರಾಣಾ ಅವರ ವಿರುದ್ಧ ದೋಷಾರೋಪ ನಿರ್ಣಯ ಮಂಡಿಸಲಾಗಿದೆ ಎಂದು ಸಂಸತ್ ಸಚಿವಾಲಯದ ವಕ್ತಾರ ರಾಜನಾಥ್ ಪಾಂಡೆ ತಿಳಿಸಿದ್ದಾರೆ.

2019ರ ಜ. 2ರಂದು ರಾಣಾ ಅವರು ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸಿದ್ದರು. ದೋಷಾರೋಪ ಮಂಡನೆಯಾಗುತ್ತಿದ್ದಂತೆಯೇ ಅವರನ್ನು ಅವರ ಹುದ್ದೆಯಿಂದ ಅಮಾನತುಗೊಳಿಸಲಾಗಿದೆ.

ಪಾಕಿಸ್ತಾನ: ವ್ಯಕ್ತಿ ಥಳಿಸಿ ಹತ್ಯೆ– 62 ಮಂದಿ ಬಂಧನ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹಳ್ಳಿಯೊಂದರಲ್ಲಿ ಧಾರ್ಮಿಕ ಪುಸ್ತಕವನ್ನು ಅಪವಿತ್ರಗೊಳಿಸಿದ ಆರೋಪದ ಮೇಲೆ ಗುಂಪೊಂದು ಮಧ್ಯವಯಸ್ಕ ವ್ಯಕ್ತಿಯನ್ನು ಕಲ್ಲಿನಿಂದ ಹೊಡೆದು ಕೊಂದು ಮರಕ್ಕೆ ನೇತುಹಾಕಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಇದು ರಾಷ್ಟ್ರವ್ಯಾಪಿ ಆಕ್ರೋಶವನ್ನು ಹುಟ್ಟುಹಾಕಿದೆ. ಘಟನೆಗೆ ಸಂಬಂಧಿಸಿದಂತೆ 62 ಮಂದಿಯನ್ನು ಬಂಧಿಸಲಾಗಿದೆ.

ಲಾಹೋರ್‌ನಿಂದ 275 ಕಿ.ಮೀ ದೂರದಲ್ಲಿರುವ ಖನೇವಾಲ್ ಜಿಲ್ಲೆಯ ಜಂಗಲ್ ದೇರಾವಾಲಾ ಗ್ರಾಮದಲ್ಲಿ ಶನಿವಾರ ಸಂಜೆ ಈ ಘಟನೆ ನಡೆದಿದೆ.